ಬಾಗೆ ಪರಿಸರದ ಸಾಹಿತ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು
ಶೋಭಾ ಎಸ್. ಕೊಕಟನೂರ
ಜಿ. ಎಸ್. ಕಲಾ ಮಹಾವಿದ್ಯಾಲಯ,
ಕುಡಚಿ ಜಿ. ಬೆಳಗಾವಿ

ಮಾರ್ಗದರ್ಶಕರು
ಡಾ. ವ್ಹಿ. ಎಸ್. ಮಾಳಿ
ನಿರ್ದೇಶಕರು,
ಶ್ರೀ ಜಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ ಜಿ. ಬೆಳಗಾವಿ

ಶ್ರೀ ಜಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ
ತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮

ಬಾಗೆ ಪರಿಸರದ ಸಾಹಿತ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ಶೋಭಾ ಎಸ್. ಕೊಕಟನೂರ

ಬಿ. ಎಸ್. ಕಲಾ ಮಹಾವಿದ್ಯಾಲಯ,

ಕುಡಚಿ ಜಿ. ಬೆಳಗಾವಿ

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ನಿರ್ದೇಶಕರು,

ಶ್ರೀ ಬಿ. ಆರ್. ದರೂರ

ಸಂಶೋಧನ ಕೇಂದ್ರ, ಹಾರೂಗೇರಿ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮

ಪ್ರಮಾಣ ಪತ್ರ

ಬಾಗೆ ಪರಿಸರದ ಸಾಹಿತ್ಯ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ವ್ಹಿ. ಎಸ್. ಮಾಳಿ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೯-೨೦೦೮

ಶೋಭಾ ಎಸ್. ಕೊಕಟನೂರ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ದೃಢೀಕರಣ ಪತ್ರ

ಶೋಭಾ ಎಸ್. ಕೊಕಟನೂರ ಇವರು **ಬಾಗೆ ಪರಿಸರದ ಸಾಹಿತ್ಯ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೯-೨೦೦೮

ಡಾ. ವ್ಹಿ. ಎಸ್. ಮಾಳಿ
ನಿರ್ದೇಶಕರು,
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಅರಿಕೆ

ಕುಡಚಿಯ ಬಿ. ಶಂಕರಾನಂದ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿರುವ ನಾನು ಸಂಶೋಧನ ಕ್ಷೇತ್ರದಿಂದ ದೂರ ಉಳಿದಿದ್ದೆ. ಕಾರಣ ಧಾರವಾಡದ ಹಾಸ್ಟೇಲ್ ಊಟ ಸಾಕಾಗಿತ್ತು. ಮೇಲಿಂದ ಮೇಲೆ ಸಣ್ಣ ಪುಟ್ಟ ಕೆಲಸಕ್ಕೆ ಮಾಳಿ ಸರ್ ಕಡೆಗೆ ಹೋಗುತ್ತಿದ್ದೆ. ಒಂದು ದಿನ ಶ್ರೀ ವೃಷಭೇಂದ್ರ ಕಾಲೇಜಿಗೆ ಹೋದಾಗ ಅಣ್ಣ - ಈರಣ್ಣ ಕೊಕಟನೂರ ಮತ್ತು ನಮ್ಮ ಮಾಳಿ ಸರ್ ಹಾಗೂ ಚಿಲಮಿ ಸರ್ 'ಶೋಭಾ, ನಮ್ಮಲ್ಲಿ ಕನ್ನಡ ವಿ. ವಿ. ಹಂಪಿಯಿಂದ ಸಂಶೋಧನ ಕೇಂದ್ರ ತಂದಿದ್ದೇವೆ. ಎಂ.ಫಿಲ್ ಮಾಡು' ಎಂದರು. ನನಗೆ ತುಂಬಾ ಖುಷಿಯಾಯಿತು. ನಾನು ಮಾಡುತ್ತೇನೆ ಎಂದೆ. ಆದರೆ ಆ ಖುಷಿ ಮುಂದೆ ಉಳಿಯಲಿಲ್ಲ. ಕಾರಣ ದಿನ ಕ್ಲಾಸಿಗೆ ಬರುವುದು ಕಷ್ಟವಾದರೂ ನಿಭಾಯಿಸಿದೆ. ನನಗೆ ಪ್ರತಿಯೊಂದಕ್ಕೂ ಸಹಾಯ ಮಾಡಿದ ಮಾಳಿ ಸರ್ ಅವರಿಗೆ ನಾನು ಎಂದೆಂದಿಗೂ ಚಿರಋಣಿಯಾಗಿರುವೆ.

ನನ್ನ ಜೊತೆ ಶಾಲಿನೀ, ನಂದಾ ಕೂಡಿದರು. ಅಕ್ಕ ಸುಮಿತ್ರಾ, ಅತ್ತಿಗೆ ಶೈಲಾ ಮಾಳಿ, ಶಿವಲೀಲಾ ತುಂಬಾ ಸಹಾಯ ಮಾಡಿದರು. ವೃಷಭೇಂದ್ರ ಕಾಲೇಜಿನ ಗ್ರಂಥಪಾಲಕರಾದ ಸಾಲಿಮಠ, ಶ್ರೀಮತಿ ಅಣ್ಣಿಗೇರಿಯವರು ಪುಸ್ತಕ ಕೊಟ್ಟರು. ಡಾ. ಹಿಮ್ಮಡಿಯವರು ಪುಸ್ತಕ ತಂದು ಕೊಟ್ಟರು. ಘಟ್ಟನಟ್ಟಿಯವರು, ಡಾ. ನರೋಡೆ, ಡಾ. ಮರೆಗುದ್ದಿ, ಡಾ. ವಿರಕ್ತಮಠ ನಮ್ಮ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಂ. ಎಲ್. ಖಜ್ಜಿಡೋಣಿ, ಕಲ್ಲೇಶ ಕುಂಬಾರ, ರಾಯಬಾಗ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕರಾದ ಜೋಡಗೇರಿಯವರಿಗೆ, ವೃಷಭೇಂದ್ರ ಕಾಲೇಜಿನ ಸಿಬ್ಬಂಧಿ ವರ್ಗದವರಿಗೆ ವಂದನೆಗಳು. ಸಂಶೋಧನಾ ಕೇಂದ್ರದ ರೂವಾರಿಯಾದ ಶ್ರೀ ಬಿ. ಆರ್. ದರೂರ ಅವರನ್ನು ಸದಾ ಕಾಲವು ಸ್ಮರಿಸುವೆನು. ಅಚ್ಚು ಕಟ್ಟಾಗಿ ಡಿ.ಟಿ.ಪಿ. ಮಾಡಿದ ಶ್ರೀ ಮುರಗೇಶ ಕೌಲಾಪೂರ ಅವರಿಗೆ ವಂದನೆಗಳು.

ದಿ : ೧೦-೦೯-೨೦೦೮

ಶೋಭಾ ಎಸ್. ಕೊಕಟನೂರ
ಬಿ. ಎಸ್. ಕಲಾ ಮಹಾವಿದ್ಯಾಲಯ,
ಕುಡಚಿ ಜಿ. ಬೆಳಗಾವಿ

• ಪರಿವಿಡಿ •

ಅಧ್ಯಾಯ – ೧

ಅಧ್ಯಯನದ ಸ್ವರೂಪ, ಉದ್ದೇಶ ಹಾಗೂ ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಸ್ವರೂಪ, ಉದ್ಧೇಶ ಹಾಗೂ ವ್ಯಾಪ್ತಿ

೧.೧. ಪ್ರವೇಶ :

ಚಾಗದ ಚಲದ ನೆಗಳ್ತೆಯ
ಭೋಗದ ಮಾನ್ಯತೆಯ ಜೈನತನದ ಮಹತ್ವ
ಕ್ಕಾಗರಮೆನೆ ಗಾರ್ಹಸ್ಥ್ಯಂ
ಬಾಗೆ ನಿಜಾನ್ವಯದ ಜನ್ಮಭೂಮಿಯೆನಿಕ್ಕುಂ॥[೧]

ಇದು ಕವಿ ರಾಜಾದಿತ್ಯನ ಪೂವಿನಬಾಗೆಯ ವರ್ಣನೆ. ರಾಜಾದಿತ್ಯನ ಕಾಲ ಕ್ರಿ.ಶ.ಸು. ೧೧೯೦. ಈತ ಕನ್ನಡದ ಮೊದಲ ಗಣಿತ ವಿಜ್ಞಾನಿ. ಆತನ ವ್ಯವಹಾರ ಗಣಿತದಲ್ಲಿ ಈ ನಾಡಿನ ವೈಭವವನ್ನು ಬಣ್ಣಿಸುವ ಮೂರು ಪದ್ಯಗಳಿವೆ.

ವನತತಿಯಿಂ ನದೀ ನದ ಕುಭೃತ್ಕುಲದಿಂ ಧನಧಾನ್ಯವರ್ಗದಿಂ
ಜನಪದರಾಜಿಯಿಂ ಬೆಳೆವ ಕೆಯ್ವೊಲದಿಂದೆಸೆವೂರ್ಗಳಿಂ ಜಗ
ಜ್ಜನನುತಜೈನಧರ್ಮದ ನೆಗಳ್ತೆಯಿನೊಪ್ಪಿರೆ ಕೂಂಡಿಮಂಡಲ
ಕ್ಕನುಪಮರತ್ನ ಮಂಡನಮೆನಿಪ್ಪುದು ಪೂವಿನಬಾಗೆ ಸಂತತಂ ॥ [೨]

ಹೂವಿನಬಾಗೆಯ ಹೂದೋಟ ಕುಹೂಂಡಿ ಮಂಡಲದಲ್ಲಿಯೇ ಅನನ್ಯವಾಗಿತ್ತಂತೆ. ಹೂವಿನ ಬಾಗೆಯ ಸಾಕ್ಷಿಚಿತ್ರವಿದು.

ಪೊಸ ಪೊಂಗೇದಗೆ ಜಾಜಿ ಪಾಟಲಿ ಲಸತ್ಸೇವಂತಿ ನೀಲಾಬ್ಜಮು
ದ್ಘಸರೋಜಂ ಸುರಹೊನ್ನೆ ಸಂಪಗೆ ನವೋದ್ಯನ್ಮಲ್ಲಿಕಾದಿಪ್ರಸೂ
ನ ಸಮೂಹಂ ತನಿಗಂಪನೆಣ್ದೆಸೆಗೆ ನಿಚ್ಚಂ ಬೀಸಲನ್ವರ್ಥಮಾ
ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚೆಲ್ವಾಗಿರಲ್ ॥[೩]

ಶ್ರೀವಿಜಯ ಕನ್ನಡಿಗರ ಗುಣವನ್ನು ವರ್ಣಿಸುವಂತೆ ಕವಿ ರಾಜಾದಿತ್ಯ ಬಾಗೆನಾಡಿನ ಜನರ ನಯ, ವಿನಯ, ದಾನ, ಧರ್ಮ, ಗುಣಗಳನ್ನು ಮನದುಂಬಿ ಹೊಗಳಿರುವನು.

"ವಿನುತರ್ ನೀತಿವಿದರ್ ಕರ
ಮನುನಯದಿಂದ ದಾನಧರ್ಮ ವಿವಿಧಾಕಾರರ್

ಧನಕನಕ ಸಮೃದ್ಧರ್ ಪೂ
ವಿನಬಾಗೆಯ ವಿಪ್ರವೈಶ್ಯಶೂದ್ರಾದಿಜಂ ॥[೪]"

ಪೂವಿನಬಾಗೆ ರಾಜಾದಿತ್ಯನ ಹುಟ್ಟೂರು. ಅಂದಿನ ಕುಹೂಂಡಿ ಮಂಡಲದ ಪೂವಿನಬಾಗೆಯೇ ಈಗಿನ ರಾಯಬಾಗ. ಜನಪದರು ಇದನ್ನು ಈಗಲೂ ಬಾಗೆ ಎಂದು ಕರೆಯುವರು. ಶಾಸನಗಳಲ್ಲಿ ಇದನ್ನು "ಕುಂತಣ ಬಾಗೆ" ಎಂದು ಗುರುತಿಸಲಾಗಿದೆ. ಪುಲಿಗೆರೆಯ ತಿರುಳ್ಗನ್ನಡದಂತೆ ಕುಂತಣ ಬಾಗೆಯ ಕನ್ನಡ ಒಂದು ಪರಿಭಾಷೆಯಾಗಿತ್ತು. ಕವಿ ರಾಜಾದಿತ್ಯ ತಾನು ಬಾಗೆಯ ಪರಿಭಾಷೆಯಲ್ಲಿ ಬರೆದಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುವನು. ಬಾಗೆಯ ಬಂಕನಾಥ ಈ ಭಾಗದಲ್ಲಿ ಸುಪ್ರಸಿದ್ಧ. ಈಗಲೂ ರಾಯಬಾಗದಲ್ಲಿ ಬಂಕನಾಥ ದೇವಾಲಯವನ್ನು ಕಾಣಬಹುದು.

ಬಾಗೆಯ ಬಂಕನಾಥ, ಸಂಕೇಶ್ವರದ ಸಂಕನಾಥ, ಕೊಪ್ಪದ ಕೊಪ್ಪನಾಥ ಇವು ಕುಂತಲನಾಡಿನ ಪ್ರಾಚೀನ ದೇವಾಲಯಗಳು. ಆದರೆ ಈಗ ಕೊಪ್ಪದ ಕೊಪ್ಪನಾಥ ದೇವಾಲಯವನ್ನು ಹೊರತು ಪಡಿಸಿದರೆ ಉಳಿದೆಡೆಗಳಲ್ಲಿ ಪ್ರಾಚೀನ ಶಿಲ್ಪ ವೈಭವ ಕಾಣಸಿಗುವುದಿಲ್ಲ. "ಪೂವಿನ ಬಾಗೆ ಪ್ರಾಚೀನ ಕಾಲದಲ್ಲಿ ಮಹಾಘಟಿಕಾಸ್ಥಾನವಾಗಿತ್ತು" ಇಲ್ಲಿಯ ಕ್ರಿ. ಶ. ೧೧೨೭ರ ಶಾಸನ ಇದನ್ನು ತಿಳಿಸುವುದು.

ಹೊಯ್ಸಳ ದೊರೆ ೨ ನೇ ವೀರಬಲ್ಲಾಳನ ದಂಡನಾಯಕರು ಭರತ ಮತ್ತು ಬಾಹುಬಲಿ. ಇವರ ಆಸ್ಥಾನ ಪಂಡಿತ ರಾಜಾದಿತ್ಯ. ಕರ್ನಾಟಕದಲ್ಲಿ ಅನೇಕ ಅರಸು ಮನೆತನಗಳು ಅತಿ ವೈಭವದಿಂದ ರಾಜ್ಯಭಾರ ಮಾಡಿದ್ದಾರೆ. ಇತಿಹಾಸದ ಪುಟವನ್ನು ತಿರುವಿ ಹಾಕಿದಾಗ ಇಲ್ಲಿಯ ರಾಜ್ಯವೈಭವ, ಜನಜೀವನ ಎಲ್ಲವೂ ಕಣ್ಮುಂದೆ ಗೋಚರಿಸುತ್ತದೆ. ಅರಸು ಮನೆತನಗಳಿಗೆ ಜೊತೆಗೂಡಿ ಆಡಳಿತ ನಡೆಸಿದವರು ಸಾಮಂತರು, ಸಂಸ್ಥಾನಿಕರು.

ಪೂವಿನಬಾಗೆ ಜೈನಧರ್ಮದ ಪ್ರಾಚೀನ ಕ್ಷೇತ್ರ. ಇದಕ್ಕೆ ಇಲ್ಲಿಯ ಯಾಪನೀಯ ಸಂಘದ ಬಸದಿ (ಗಡದ ಬಸ್ತಿ) ಸಾಕ್ಷಿ. (ಇತ್ತೀಚೆಗೆ ಇಲ್ಲಿ ೨೭ ಜಿನಬಿಂಬಗಳು ಸಿಕ್ಕಿವೆ). ಬಹುಕಾಲ ರಾಯಬಾಗ ರಟ್ಟರ ಆಡಳಿತಕ್ಕೆ ಒಳಪಟ್ಟಿತ್ತು. ಇವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಸಂಪದ್ಭರಿತವಾದ ಮತ್ತು ವಿಸ್ತಾರವಾದ ಈ ಕುಹೂಂಡಿ ಮಂಡಲವನ್ನು '೧೪' ಉಪವಿಭಾಗಗಳನ್ನಾಗಿ ಮಾಡಿಕೊಂಡಿದ್ದರು.[೫]

ಅವುಗಳೆಂದರೆ : ೧) ತೇರದಾಳ ೧೨
೨) ಕುರುಂಬೆಟ್ಟ ಕಂಪಣ
೩) ಸೋಲು ೩೦ (ಸೊಗಲ)
೪) ಸುಗಂಧವರ್ತಿ ೧೨

೫) ಹೊರಗಟ್ಟಿ ಸಪ್ತಪದಿ (ಯರಗಟ್ಟಿ)

೬) ಹುಬ್ಬಳ್ಳಿ ೧೨ (ಎಮ್. ಕೆ. ಹುಬ್ಬಳ್ಳಿ)

೭) ವೇಳುಗ್ರಾಮ (ವೇಣುಗ್ರಾಮ)

೮) ವಸ್ತುಗಾಂವ (ಉಚಗಾಂವ)

೯) ಕೊರವಲ್ಲಿ ಕಂಪಣ ೧೫೦ (ಇಂದಿನ ಜೋಡ ಕುರುಳಿ)

೧೦) ನೂಲೆನಾಡು

೧೧) ಕುಂದರಗಿ ಕಂಪಣ

೧೨) ನೇಸರಗಿ ೬

೧೩) ಪೂವಿನಬಾಗಿ (ಇಂದಿನ ರಾಯಬಾಗ)

೧೪) ಕುಹೂಂಡಿ ಪಟ್ಟಣ

ಬಾಗೆನಾಡು ಕೃಷ್ಣೆಯ ಕೃಪೆ ಪಡೆದಿದೆ. ಕೃಷ್ಣಾನದಿ ತಟವನ್ನು ಹೊಂದಿರುವದರಿಂದ ಈ ಪ್ರದೇಶ ಇತಿಹಾಸ ಪೂರ್ವದಲ್ಲಿ ನಾಗರಿಕತೆಯ ತೊಟ್ಟಿಲು ಆಗಿರಬೇಕು. ಬಾಗೆನಾಡಿಗೆ ಹೊಂದಿದ ಇಂದಿನ ತೇರದಾಳದ ಸುತ್ತ ಹೊಸ ಶಿಲಾಯುಗದ ಅವಿಶೇಷಗಳು ಸಿಕ್ಕಿದ್ದು ಗಮನೀಯ. ಈಗಿನ ರಾಯಬಾಗ ತಾಲೂಕಿನ ಕುಡಚಿ ಮತ್ತು ಚಿಂಚಲಿ ನುಡುವಿನ ರಸ್ತೆಯ ಪಕ್ಕದ ಕೃಷ್ಣಾನದಿ ತೀರದಲ್ಲಿ ಬೂದಿಯ ದಿಬ್ಬ ಪತ್ತೆಯಾಗಿದ್ದು, ಅದರ ಉತ್ಖನನವು ನಡೆದಿದೆ. ಈ ಬೂದಿ ದಿಬ್ಬವು ತಾಮ್ರದ ತಯಾರಿಕೆಯ ಸಂದರ್ಭದಲ್ಲಿ ರಚಿತಗೊಂಡಿರುವ ಸಾಧ್ಯತೆ ಇದೆ ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಇಂತಹದೇ ಮತ್ತೊಂದು ಬೂದಿದಿಬ್ಬ ಅಥಣಿ ತಾಲೂಕಿನ ಸಪ್ತಸಾಗರದಲ್ಲಿ ಕಾಣಬಹುದು. ಅಂದರೆ ಬಾಗೆನಾಡು ತಾಮ್ರ ಯುಗದಲ್ಲಿಯೇ ತನ್ನ ಅಸ್ತಿತ್ವವನ್ನು ಪಡೆದುಕೊಂಡಿತ್ತು ಎನ್ನುವುದು ಖಚಿತವಾಗುತ್ತದೆ. ಈ ಭಾಗದಲ್ಲಿ ಉತ್ಖನನಗಳು ನಡೆದರೆ ಇತಿಹಾಸ ಪೂರ್ವದ ಈ ನಾಡಿನ ಚರಿತ್ರೆ ಅನಾವರಣಗೊಳ್ಳಬಹುದಾಗಿದೆ.

ಭಾರತದ ಚರಿತ್ರೆ ಆರಂಭವಾಗುವುದೇ ಮೌರ್ಯರ ಕಾಲದಿಂದ. ಕುಹೂಂಡಿ ೩೦೦೦ ದ ಒಂದು ಆಡಳಿತ ವಿಭಾಗವಾಗಿದ್ದ ಬಾಗೆ ನಾಡನ್ನು ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರ ಮಾಂಡಲಿಕರಾದ ರಟ್ಟರು, ಕೊಲ್ಲಾಪುರದ ಶಿಲಾಹಾರರು, ದೇವಗಿರಿಯ ಯಾದವರು, ಸೇವುಣರು, ವಿಜಾಪುರದ ಆದಿಲ್‌ಶಾಹಿ, ಮರಾಠರು, ಹಾಗೂ ಪೇಶ್ವೆಗಳು ಆಳಿದರು.

ಮಳಖೇಡದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹಾಗೂ ಕಲಚೂರ್ಯರಿಗೆ ಮಾಂಡಲಿಕರಾಗಿ ಮತ್ತು ಕೆಲಕಾಲ ಸ್ವತಂತ್ರರಾಗಿ ಮುನ್ನೂರು ವರ್ಷಗಳವರೆಗೆ 'ಕುಹೂಂಡಿ' ಮಂಡಲವನ್ನು ಆಳಿದ ಶ್ರೇಯಸ್ಸು ಸವದತ್ತಿಯ ರಟ್ಟರದು. ತೇರದಾಳ, ರಾಯಬಾಗ, ಯಕ್ಸಂಬಾ, ಕಲ್ಲೋಳಿ, ಕೊಣ್ಣೂರು, ಸಂಕೇಶ್ವರ ಮುಂತಾದವು ಇವರ ಆಡಳಿತದ ಪ್ರಮುಖ ಕೇಂದ್ರಗಳು.

ಬಾಗೆನಾಡಿನಲ್ಲಿ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಶಾಸನಗಳು ಸಿಗುವುದಿಲ್ಲ. ಆದರೆ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ದೊರೆ ೬ ನೇ ವಿಕ್ರಮಾದಿತ್ಯನ ಆಡಳಿತವನ್ನು ಸಾಕ್ಷೀಕರಿಸುವ ಶಾಸನಗಳು ಪೂವಿನಬಾಗೆಯಲ್ಲಿವೆ. ಆ ಕಾಲದಲ್ಲಿ ಪೂವಿನಬಾಗೆಯನ್ನು ಆಳುತ್ತಿದ್ದ ಮಹಾಮಂಡಳೇಶ್ವರ ಕೊಂಗಜರಸನು ಆರನೇ ವಿಕ್ರಮಾದಿತ್ಯನ ಅಳಿಯ. ವಿಕ್ರಮಾದಿತ್ಯನ ಅರಸಿ ಪದ್ಮಲದೇವಿಯ ಸಹೋದರನಾಗಿರಬೇಕು. ಕೊಂಗಜರಸನು ವಿಕ್ರಮಾದಿತ್ಯನ ಅಳಿಯನೆಂದು ರಾಯಬಾಗದ ಶಾಸನದಿಂದಲೇ ಗೊತ್ತಾಗುತ್ತದೆ.

ಚಕ್ರವರ್ತಿ ವಿಕ್ರಮನು ಪರಮಾರರ ರಾಜಧಾನಿಯಾದ ಧಾರಾನಗರಕ್ಕೆ ದಂಡೆತ್ತಿ ಹೋಗುವಾಗ ಮಹಾಮಂಡಳೇಶ್ವರ ಕೊಂಗಜರಸನು ತನ್ನ ಸೈನ್ಯದ ತುಕುಡಿಯೊಂದಿಗೆ ಹೋಗುತ್ತಾನೆ. ಯುದ್ಧದಲ್ಲಿ ಜಯ ಚಾಲುಕ್ಯ ಚಕ್ರವರ್ತಿಗೆ ಲಭಿಸುತ್ತದೆ. ಮರಳಿ ಬರುವಾಗ ಮಾಂಡಳಿಕನಾಗಿದ್ದ ಶಿಲಾಹಾರ ಭೋಜನು ಚಕ್ರವರ್ತಿಯ ವಿರುದ್ಧ ಯುದ್ಧ ಸಾರುತ್ತಾನೆ. ಈ ಯುದ್ಧದಲ್ಲಿ ಮಹಾಮಂಡಳೇಶ್ವರ ಕೊಂಗಜರಸನೂ ಭೋಜನೂ ಮುಖಾಮುಖಿಯಾಗಿ ಕಾದಾಡುತ್ತಾರೆ. ಆ ಸಮಯದಲ್ಲಿ ಕೊಂಗಜರಸನ ನಾಯಕನಾದ ಚಂಡರಸನು ಭೋಜನು ಕುಳಿತಿದ್ದ ಆನೆಯ ಕಡೆಗೆ ನುಗ್ಗಿ ಆ ಆನೆಯ ಪಾಳಿಯ ಮೊಗಮ (ರಕ್ಷಾ ಕವಚ) ಕಿತ್ತು ನಾಯಕರನ್ನು ಕೊಂದು ಮಡಿಯುತ್ತಾನೆ. ಈ ಯುದ್ಧ ಕ್ರಿ. ಶ. ೧೦೨೨ ಮಾರ್ಚ ೧೯ ಕ್ಕೆ ಕೆಲವು ದಿನಗಳ ಹಿಂದೆಯೇ ನಡೆದಿದೆ. ಏಕೆಂದರೆ ಚಂಡರಸನ ಸ್ಮರಣೆಗಾಗಿ ವೀರಗಲ್ಲು ನೆಟ್ಟ ಉಲ್ಲೇಖ ಕ್ರಿ. ಶ. ೧೦೨೨ ಮಾರ್ಚ ೧೯ರ ರಾಯಬಾಗ ಶಾಸನದಲ್ಲಿದೆ. ಭೋಜನ ವಿರುದ್ಧದ ಯುದ್ಧವು ರಾಯಬಾಗದಲ್ಲಿಯೇ ನಡೆದಿರಬೇಕೆಂಬ ಡಾ. ನಾಗಯ್ಯನವರ ಅಭಿಪ್ರಾಯ ಒಪ್ಪಲಾಗದು. ಪ್ರಾಯಶ; ಈ ಚಂಡರಸನು ರಾಯಬಾಗದವನಾಗಿರಬಹುದು. ಆದ್ದರಿಂದ ಆ ವೀರಗಲ್ಲು ರಾಯಬಾಗದಲ್ಲಿದೆ.

ಪ್ರಯಾಗ ಬಡಗಲು ತೆಂಕಲು ಬಾಗೆ :

ಕ್ರಿ. ಶ. ೧೨ನೇ ಶತಮಾನದ ರಾಯಬಾಗದ ತ್ರುಟಿತಶಾಸನದಲ್ಲಿ “ಪ್ರಯಾಗ ಬಡಗಲು ತೆಂಕಲುಬಾಗೆ” ಎಂದು ಇದನ್ನು ಬಣ್ಣಿಸಲಾಗಿದೆ. ಪ್ರಯಾಗದಂತೆ ಬಾಗೆ ಕೂಡಾ ಆ ಕಾಲದ ಪ್ರಸಿದ್ಧ ಕ್ಷೇತ್ರವಾಗಿರಬಹುದು. ಈಗ ರಾಯಬಾಗದಲ್ಲಿ ಸಿಗುವ ಪ್ರಾಚ್ಯ ವಸ್ತುಗಳನ್ನು ಗಮನಿಸಿದಾಗ ಈ ಮಾತು ನಿಜವೆನಿಸುತ್ತದೆ.

ಈ ಮಹಾ ಅಗ್ರಹಾರದಲ್ಲಿ ವಿದ್ವನ್ಮಣಿಗಳು ಇದ್ದ ಬಗ್ಗೆ ಉಲ್ಲೇಖವಿದೆ. ಚಾಲುಕ್ಯ ಎರಡನೆಯ ಜಗದೇಕಮಲ್ಲನ ಕಾಲದ ಕ್ರಿ. ಶ. ೧೧೪೯ರ ಶಾಸನ ಪೂವಿನಬಾಗೆಯ ಯಾಪನೀಯ ಸಂಘದ ಕುಮಾರಕೀರ್ತಿ ಪಂಡಿತ ದೇವರನ್ನು ಬಣ್ಣಿಸುತ್ತದೆ. ಇಲ್ಲಿಯ ಮಾರಸಿಂಗ ಶೆಟ್ಟಿಯ ಬಸದಿ ಶೂನ್ಯ ಸಂಸ್ಥಾನವಾಗಿತ್ತೆಂದು ತಿಳಿಯುವುದು. ಜಗದೇಕಮಲ್ಲನ ದಂಡನಾಯಕ ಕಾಳಿಮರಸ. ಆತನ ಹೆಂಡತಿ ರೇಖಲದೇವಿ. ರೇಖಲದೇವಿ ಸಹೋದರ ಅಂದರೆ ಕಾಳಿಮರಸನ ಅಳಿಯ ದಾಸಿರಾಜ, ಆತ ಪೂವಿನಬಾಗೆಯ ಮಾರಸಿಂಗಶೆಟ್ಟಿಯ ಬಸದಿಯ ಜಿನ ಪೂಜೋತ್ಸವವನ್ನು ನೋಡಲು ಬಂದು

ಶ್ರೀಯಾಪನೀಯ ಸಂಘದ ಪುನ್ನಾಗವೃಕ್ಷ ಮೂಲಗಣದ ಕುಮಾರಕೀರ್ತಿ ಪಂಡಿತ ದೇವರಿಗೆ ದತ್ತಿ ಕೊಟ್ಟ ಉಲ್ಲೇಖ ಈ ಶಾಸನದಲ್ಲಿದೆ.

ಇದೇ ಗ್ರಾಮದ ಆದಿನಾಥ ಬಸದಿಯ ಹೊರಗೋಡೆಯ ಮೇಲಿರುವ ರಟ್ಟರ ದೊರೆ ೪ನೇ ಕಾರ್ತವೀರ್ಯನ ಶಾಸನ ಆ ಬಸದಿಗೆ ಚಿಂಚಲಿ ಗ್ರಾಮವನ್ನು ದಾನವಾಗಿ ನೀಡಿದ್ದನು ತಿಳಿಸುತ್ತದೆ.

"ರಾಯಬಾಗದಲ್ಲಿರುವ ನರಸಿಂಹ ದೇವಾಲಯವು ಇಡಿ ದೇಶದಲ್ಲಿಯೇ ಏಕಮೇವ ಎನ್ನಿಸುವ ಗುಹಾಂತರ ದೇವಾಲಯವಾಗಿದೆ." ಈ ಮೂರ್ತಿಯನ್ನು ಮರುಳು ಕಲ್ಲಿನಲ್ಲಿ ಕೆತ್ತಲಾಗಿದ್ದು, ಸುಮಾರು ಎರಡುವರೆ ಅಡಿಗಳಷ್ಟು ಎತ್ತರ ಹಾಗೂ ಒಂದುವರೆ ಅಡಿಗಳಷ್ಟು ಅಗಲವಾಗಿದೆ. ಒಂದು ಕೈ ಮುರಿದಿದ್ದು, ಅದು ಜೀರ್ಣೋದ್ಧಾರಗೊಂಡಿದೆ.

ಕೆತ್ತನೆಯ ಕೆಲಸವು ಸೂಕ್ಷ್ಮವೂ ಸುಂದರವೂ ಆಗಿದ್ದು ಅದರ ಉಗ್ರತೆಯ ಜ್ವಾಲೆಯನ್ನು ಹೊರ ಚೆಲ್ಲುವಂತೆ ಇರುವದರಿಂದ ಅದನ್ನು "ಜ್ವಾಲಾನರಸಿಂಹ" ಎಂದು ಕರೆಯುತ್ತಾರೆ.

ಪೂವಿನಬಾಗೆ ಸಮೀಪದಲ್ಲಿರುವ ಬಾಗೆನಾಡಿನ ಇಂದಿನ ಕಂಕಣವಾಡಿ (ರಾಯಬಾಗ ತಾಲೂಕ) ಕ್ರಿ. ಶ. ೧೨ನೇ ಶತಮಾನದಲ್ಲಿ ರಟ್ಟರ ಉಪರಾಜಧಾನಿಯ ಗೌರವವನ್ನು ಪಡೆದಿತ್ತು. ೪ನೇ ಕಾರ್ತವೀರ್ಯನ ಆಧೀನದಲ್ಲಿ ವೈಜರಸನು ಇದನ್ನು ಆಳುತ್ತಿದ್ದನು. ವೈಜರಸನಿಗೆ ನಾಲ್ವರು ಮಕ್ಕಳು. ಹೆಮ್ಮಣಯ್ಯ, ಚಿದ್ದಣಯ್ಯ, ಚಾವುಂಡರಾಯ ಮತ್ತು ಕಾಳಿಮಯ್ಯ. ಹೆಮ್ಮಣಯ್ಯನನ್ನು ಕನ್ನಡದ ವಂಶಜನೆಂದು ಬಣ್ಣಿಸಲಾಗಿದೆ. ಈತ ಅಲ್ಲಿಯ ಕಲಿದೇವರು ಹಾಗೂ ಎರಡು ಬಸದಿಗಳ ಜೀರ್ಣೋದ್ಧಾರ ಮಾಡಿದ ವಿಷಯ ಕಂಕಣನೂರಿನ ಶಾಸನದಿಂದ ತಿಳಿದು ಬರುವುದು.

ರಟ್ಟರ ತರುವಾಯ ಈ ಪ್ರದೇಶ ಕೊಲ್ಲಾಪುರದ ಶಿಲಾಹಾರರ ಆಡಳಿತಕ್ಕೆ ಒಳಪಟ್ಟಿತ್ತು. ಶಿಲಾಹಾರ ಗಂಡರಾದಿತ್ಯನ ಸಾಮಂತ ನಿಂಬಣಯ್ಯ ಈ ಭಾಗವನ್ನು ಆಳುತ್ತಿದ್ದನು. ಆತನಿಂದಲೇ ಈ ಭಾಗದಲ್ಲಿ ಜೈನಧರ್ಮ ಇಷ್ಟೊಂದು ಪ್ರಮಾಣದಲ್ಲಿ ಬೆಳೆಯಲು ಕಾರಣವಾಯಿತು. ಆತನ ಕಾಲದಲ್ಲಿ ಚಕ್ರವರ್ತಿ ವಿಕ್ರಮಾದಿತ್ಯನ ಮಾಂಡಳಿಕರಾಗಿದ್ದ ಕೊಲ್ಲಾಪುರದ ಶಿಲಾಹಾರರ ಸಾಮಂತನಾದ ಈ ನಿಂಬದೇವನ ಸಹೋದರಿ ಕರ್ಣಾದೇವಿ ಮಹಾಮಂಡಳೇಶ್ವರ ಗಂಡರಾದಿತ್ಯನ ಪತ್ನಿ. ಈತನಿಗೂ ಬಿಜ್ಜಳನಿಗೂ ಯುದ್ಧ ನಡೆದು ಕೊನೆಯಲ್ಲಿ ಸಲ್ಲೇಖನ ವ್ರತ ಪಾಲಿಸಿ ಆತ ಮಡಿದನೆಂದು 'ನಿಂಬಸಾಮಂತ ಚರಿತೆ'ಯಿಂದ ತಿಳಿಯುತ್ತದೆ. ಅನಂತರ ಕೆಲಕಾಲ ಈ ಭಾಗ ಮುಸ್ಲಿಂರ ಆಡಳಿತಕ್ಕೆ ಒಳಪಟ್ಟಂತಿದೆ. ಏಕೆಂದರೆ ಕುಡಚಿ ಮುಸ್ಲಿಂರ ಆಡಳಿತವನ್ನು ಸಾಕ್ಷೀಕರಿಸುತ್ತದೆ. ವಿಜಾಪುರದ ಆದಿಲ್‌ಶಾಹಿ ಮನೆತನಕ್ಕೂ ಕುಡಚಿಗೂ ಸಂಬಂಧವನ್ನು ಹೊಸೆಯಲಾಗುತ್ತದೆ. ಆದರೆ ಕುಡಚಿಯನ್ನು ಹೊರತು ಪಡಿಸಿ ಉಳಿದೆಡೆಗಳಲ್ಲಿ ಮುಸ್ಲಿಂ ಪ್ರಾಬಲ್ಯ ಕಡಿಮೆ. ವಿಜಾಪುರದ ಅಧಿಕಾರಿ ಅಸಫ್‌ಖಾನ್‌ನ ಮಗ ಮಹಮ್ಮದ ಕಿಶೋರಖಾನ (ಕ್ರಿ. ಶ. ೧೫೪೯) ಹುಕ್ಕೇರಿ, ಬೆಳಗಾವಿ ಹಾಗೂ ರಾಯಬಾಗ ಆಡಳಿತ ಅಧಿಕಾರಿಯಾಗಿದ್ದನು.

ವಿಜಯನಗರದ ಅರಸ ಕೃಷ್ಣದೇವರಾಯನ ಸಾಮ್ರಾಜ್ಯ ಉತ್ತರದಲ್ಲಿ ರಾಯಬಾಗದ ವರೆಗೂ ವಿಸ್ತರಿಸಿತ್ತು. ಕೃಷ್ಣದೇವರಾಯನ ಸೈನ್ಯಾಧಿಕಾರಿ ಬಾಗೆಯ ಬೊಮ್ಮಣ್ಣನಾಯಕ, ಈ ಭಾಗವನ್ನು ಆಳುತ್ತಿದ್ದನು. ಬೆಳಗಾವಿ ಹಾಗೂ ಹುಕ್ಕೇರಿ ವಿಜಾಪುರದ ಆದಿಲ್‌ಶಾಹಿ ಆಡಳಿತಕ್ಕೆ ಒಳಪಟ್ಟಿದ್ದವು. "A Kanarese Inscription dated 1514-15 (S.1436) at ugargol three miles south - east of Saundatti mentions the name of Bommappa, of Bagi that is Rayabag as one Krishna Ray's millitary officer or Naik"[೬]

ಅಲಿಆದಿಲ್‌ಶಾಹಿ ಕೊಲೆಯ ನಂತರ ಅರಾಜಕತೆಯ ಲಾಭ ಪಡೆದು ನಿಜಾಮರು ವಿಜಾಪುರವನ್ನು ಕಬಳಿಸಲು ಯೋಚಿಸಿದರು. ಆದರೆ ವಿಜಾಪುರದ ದಿಲ್‌ವರಖಾನ್‌ನ ಬಲಕ್ಕೆ ಮಣಿದು ಹಿಮ್ಮೆಟ್ಟುವಾಗ ಹುಕ್ಕೇರಿ, ರಾಯಬಾಗ ಹಾಗೂ ಮಿರಜಗಳನ್ನು ಲೂಟಿ ಮಾಡಿದರು. ಅಂದರೆ ಈ ನಾಡು ನಿಜಾಮಶಾಹಿಗಳ ಲೂಟಿಗೆ ಒಳಗಾಗಿದ್ದುಂಟು. ಇದು ಕೆಲಕಾಲ ಮೊಗಲರ ಆಡಳಿತಕ್ಕೂ ಒಳಪಟ್ಟಿತ್ತು.

ಕ್ರಿ. ಶ. ೧೬೩೫ರಲ್ಲಿ ಮೊಗಲರ ಸೈನಾಧಿಕಾರಿ ಅಸಫ್‌ಖಾನ ಮಿರಜ ಮತ್ತು ರಾಯಬಾಗಗಳನ್ನು ಆದಿಲ್‌ಶಾಹಿಗಳಿಂದ ವಶಪಡಿಸಿಕೊಂಡಿದ್ದನು. ರಾಯಬಾಗದಲ್ಲಿ ರಣದುಲ್ಲಾಖಾನನ ಜಾಮೀಯಾ ಮಸೀದೆ ಇದೆ. ಈ ಮಸೀದಿಯಲ್ಲಿ ಕ್ರಿ. ಶ. ೧೬೨೯ರ ಅರೆಬಿಕ್ ಶಾಸನವಿದ್ದು, ಅದನ್ನು ವಿಜಾಪುರದ ಸರದಾರ ಅಮೀನಮುಸ್ತಫ್‌ಖಾನ ಕಟ್ಟಿಸಿರುವುದಾಗಿ ತಿಳಿಯುತ್ತದೆ. ಆ ಕಾಲದಲ್ಲಿ ಮೊಗಲರು ರಾಯಬಾಗಕ್ಕೆ ಮುಸ್ತಫ್‌ಬಾದ ಎಂದು ಕರೆಯುತ್ತಿದ್ದರು.

ಅನಂತರ ರಾಯಬಾಗ ಮರಾಠರ ವಶಕ್ಕೆ ಬಂತು. ಇನ್ನೂರು ವರ್ಷಗಳಿಗಿಂತಲೂ ಹೆಚ್ಚು ಅವರ ಆಧೀನದಲ್ಲಿಯೇ ಉಳಿಯಿತು. ಮರಾಠಾ ಸಾಮ್ರಾಜ್ಯದ ಒಂದು ಭಾಗವಾದ ಕೊಲ್ಲಾಪುರ ಸಂಸ್ಥಾನಿಕರು ಬ್ರಿಟಿಷ ಆಡಳಿತವಿದ್ದಾಗಲೂ ರಾಯಬಾಗದ ಮೇಲೆ ಹಿಡಿತ ಸಾಧಿಸಿದ್ದರು. ಅವರ ಅರಮನೆ ಹಾಗೂ ಇತರ ಆಡಳಿತ ಕುರುಹುಗಳು ಇಂದಿಗೂ ಅಲ್ಲಿ ಕಾಣಬಹುದು. ೫೦–೬೦ ವರುಷಗಳ ಹಿಂದೆ ಕೊಲ್ಲಾಪುರದ ಮರಾಠಾ ಅರಸರು ಬೇಟೆ ಆಡಲು ಈ ಬಯಲು ಪ್ರದೇಶಕ್ಕೆ ಬರುತ್ತಿದ್ದರು. ಆಗ ತಂಗಲು ಬೇಸಿಗೆ ಅರಮನೆಯನ್ನು ನಿರ್ಮಿಸಿರುವರು.

ಕ್ರಿ. ಶ. ೧೭೯೨ ಫೆಬ್ರುವರಿಯಲ್ಲಿ ಮೂರನೆಯ ಮೈಸೂರು ಯುದ್ಧ ಮುಕ್ತಾಯವಾಯಿತು. ಮರಾಠರು ಬ್ರಿಟಿಷರ ಸಹಾಯದಿಂದ ಟಿಪ್ಪು ಸುಲ್ತಾನನ ಆಡಳಿತಕ್ಕೆ ಈ ವಿಭಾಗಗಳ ಮೇಲೆ ಹಿಡಿತಸಾಧಿಸಿ, ಮರಳಿ ಬರುವಾಗ ಗೋಕಾಕ, ಚಿಕ್ಕೋಡಿ ಮಾರ್ಗವಾಗಿ ಆ ಸೈನ್ಯ ರಾಯಬಾಗ ತಾಲೂಕಿನ ಬೆಂಡವಾಡದಲ್ಲಿ ಒಂದು ದಿನ ತಂಗುತ್ತದೆ. ಆಗ ಮರಾಠರ ಸೇನಾಪತಿ ಪರಶುರಾಮಬಾಹು ಆ ಸೇನೆಯ ನೇತೃತ್ವ ವಹಿಸಿಕೊಂಡಿದ್ದನು. ಬೆಂಡವಾಡದಿಂದ ರಾಯಬಾಗಕ್ಕೆ ಬಂದ ಸೈನ್ಯ ಅಲ್ಲಿಂದ

ಹಾಲುಹಳ್ಳ ದಾಟಿ ಬಿರಡಿ–ಚಿಂಚಲಿ ಮೂಲಕ ಕುಡಚಿಗೆ ಬಂದು ತಂಗಿತು. ಕುಡಚಿ ಮುಸ್ಲಿಂರ ಪಟ್ಟಣವಾಗಿತ್ತು. ಪರಶುರಾಮಬಾಹು ಅಲ್ಲಿ ಬ್ರಾಹ್ಮಣ ಕುಟುಂಬಗಳನ್ನು ತಂದಿಟ್ಟನು. ಆಗ ಅದೆಷ್ಟೊ ಮುಸ್ಲಿಂ ಕುಟುಂಬಗಳು ಅಲ್ಲಿಂದ ಬಿಟ್ಟು ಹೋದವು.

ಬಹಮನಿ ಸಾಮ್ರಾಜ್ಯದ ಸ್ಥಾಪಕ ಹಸನ್ ಗಂಗು (ಕ್ರಿ. ಶ. ೧೩೪೭–೫೮) ಮಹಮದ್ ತುಘಲಕ್‌ನಿಂದ ಕುಡಚಿಯನ್ನು ಜಹಗೀರು ಪಡೆದುಕೊಂಡನು. ಇದು ಅವನ ಮೊದಲ ಜಹಗೀರು ಆಗಿತ್ತು.

ಪರಶುರಾಮಬಾಹುನನ್ನು ಯುದ್ಧದಲ್ಲಿ ಸೋಲಿಸಿದ ಕೊಲ್ಲಾಪುರ ಸಂಸ್ಥಾನ ಅನಂತರ ಪ್ರಬಲವಾಯಿತು. ರಾಯಬಾಗ ಪ್ರಾಂತವನ್ನು ತನ್ನದಾಗಿಸಿಕೊಂಡಿತು. ಕ್ರಿ. ಶ. ೧೯೪೮ ರವರೆಗೆ ಕೊಲ್ಲಾಪುರ ಸಂಸ್ಥಾನಕ್ಕೆ ಒಳಪಟ್ಟಿತ್ತು. ಶಿರೋಳ ಮಹಲಿನ ಉಪಮಹಲಾಗಿ ಇದನ್ನು ಗುರುತಿಸಲಾಗುತ್ತಿತ್ತು. ಹೀಗಿದ್ದರೂ ಈಗಿನ ರಾಯಬಾಗ ತಾಲೂಕಿನ ಅನೇಕ ಹಳ್ಳಿಗಳು ಅಥಣಿ ತಾಲೂಕಿಗೆ ಒಳಪಟ್ಟಿದ್ದವು. ಹೀಗಾಗಿ ಮರಾಠರ ಆಡಳಿತಕ್ಕೆ ಒಳಪಟ್ಟ ಬಾಗಗಳಲ್ಲಿ ಇಂದಿಗೂ ಮರಾಠಿ ಉಳಿದುಕೊಂಡಿದೆ. ಆದ್ದರಿಂದ ಜಲಾಲಪುರದ ರಾಚೋಟಿಯಂಥ ಲಾವಣಿ ಕವಿಗಳು ಮರಾಠಿಯಲ್ಲಿ ಲಾವಣಿ ರಚಿಸಿದರು.

ಬಾಗೆನಾಡು ಈಗಲೂ ಮಹಾರಾಷ್ಟ್ರದ ಗಡಿಗೆ ತುಂಬಾ ಸಮೀಪ. ಇಲ್ಲಿಯ ಜನರಿಗೆ ಮರಾಠಿ ಪರಿಚಿತ. ಚಿಂಚಲಿ, ಜಲಾಲಪುರ, ದಿಗ್ಗೇವಾಡಿ, ಮೊರಬ, ರಾಯಬಾಗ, ಮೊದಲಾದ ಗ್ರಾಮಗಳಲ್ಲಿ ಮರಾಠಿ ಹೆಚ್ಚು ಬಳಕೆಯಾಗುತ್ತಿದೆ. ಬಾಗೆನಾಡಿನ ಕೆಲವು ಲಾವಣಿಕಾರರು ಈ ಕಾರಣದಿಂದಾಗಿಯೇ ಎರಡೂ ಭಾಷೆಗಳಲ್ಲಿ ಲಾಣಿಗಳನ್ನು ರಚಿಸಿರುವರು.

ಕ್ರಿ. ಶ. ೧೮೦೦ ರಲ್ಲಿ ರಾಯಬಾಗ ತನ್ನ ಪ್ರಾಚೀನ ವೈಭವನ್ನೆಲ್ಲ ಕಳೆದುಕೊಂಡು ಬರಡು ಹಳ್ಳಿಯಾದ ಬಗ್ಗೆ ಉಲ್ಲೇಖವಿದೆ. ಅಲ್ಲಿ ಉತ್ತಮ ಮನೆಗಳಾಗಲಿ ಸಮೃದ್ಧ ತೋಟಗಳಾಗಲಿ ಇರಲಿಲ್ಲವಾದರೂ ಗ್ರಾಮದ ಸಮೀಪ ಇರುವ ಹೂದೋಟ ಮಾತ್ರ ಆಕರ್ಷಣೀಯವಾಗಿತ್ತು.

೧.೨. ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನ ಐದು ಅಧ್ಯಾಯಗಳನ್ನು ಒಳಗೊಂಡಿದ್ದು, ಮೊದಲ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿಗಳನ್ನು ವಿವರಿಸಲಾಗಿದೆ.

"ಪ್ರವೇಶ"ದಲ್ಲಿ ಬಾಗೆನಾಡಿನ ಸಂಸ್ಕೃತಿ ಹಾಗೂ ಚಾರಿತ್ರಿಕ ವಿಷಯಗಳನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ. ಕಾರಣ ಅಧ್ಯಯನಕ್ಕೆ ಅದುವೇ ನೆಲೆಗಟ್ಟು.

ಎರಡನೆಯ ಅಧ್ಯಾಯ ಬಾಗೆನಾಡಿನ ಪ್ರಾಚೀನ ಸಾಹಿತ್ಯದ ಚರಿತ್ರೆಯನ್ನು ಒಳಗೊಂಡಿರುವುದು. ಇದರಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ ಪ್ರಾಚೀನ ಕವಿಗಳ ವಿವರಗಳಿದ್ದರೆ, ದ್ವಿತೀಯ ಭಾಗದಲ್ಲಿ ಪ್ರಾಚೀನ ಶಾಸನ ಸಾಹಿತ್ಯದ ದಾಖಲೆಗಳಿವೆ.

ಜನಪದ ಸಾಹಿತ್ಯ ಚರಿತ್ರೆ ಕನ್ನಡದಲ್ಲಿ ರಚಿತಗೊಳ್ಳದಿರುವುದು ಆಶ್ಚರ್ಯದ ಸಂಗತಿ. ಕವಿರಾಜಮಾರ್ಗಕಾರನ ಕಾಲದಿಂದಲೂ ಜನಪದ ಸಾಹಿತ್ಯ ಮತ್ತು ಜನಪದಿ ಕವಿಗಳು ಉಪೇಕ್ಷಿಗೊಳಗಾಗುತ್ತ ಬಂದಿರುವದು ವಿಧಿತ ವಿಷಯ. ಅದರಲ್ಲೂ ಕುರುಬರಂತಹ ಅಲೆಮಾರಿ ಜನಾಂಗದವರನ್ನು ತನ್ನ ಹೆತ್ತ ಕರುಳಿನಂತೆ ಪೋಷಿಸಿದ ಬಾಗೆನಾಡಿನ ಜನಪದ ಸಾಹಿತ್ಯ ವರ್ಣರಂಜಿತವಾದದ್ದು. ಯಾವುದೇ ದಾಖಲೆಗಳನ್ನು ಹೊಂದಿರದ, ಇಂದಿಗೂ ಜನಪದರ ಬದುಕಿನ ನೆಲೆಗೆ ತಾಳಹಾಕುತ್ತಿರುವ ಈ ಸಾಹಿತ್ಯದ ಇತಿಹಾಸವನ್ನು ದಾಖಲಿಸುವದು ಸಮಕಾಲೀನ ಅಧ್ಯಯನದ ತುರ್ತು ಅಗತ್ಯ. ಇದನ್ನು ಸಂಕ್ಷಿಪ್ತವಾಗಿ ಈ ಕಿರು ಪ್ರಬಂಧದ ಮೂರನೇ ಅಧ್ಯಾಯದಲ್ಲಿ ದಾಖಲಿಸಲಾಗಿದೆ. ಈ ಹಿಂದೆ ಎಂ. ಎಸ್. ಲಠ್ಠೆಯವರು ಜನಪದ ಕವಿ ಚರಿತ್ರೆ ರಚಿಸಲು ಪ್ರಯತ್ನಿಸಿದರು. ಆದರೆ ಅದು ಸಮಗ್ರವಾಗಿಲ್ಲ. ಅದರಲ್ಲಿ ರಾಯಬಾಗದ ಕವಿಗಳ ಉಲ್ಲೇಖಗಳು ಕಡಿಮೆ.

ಸ್ವಾತಂತ್ರ್ಯದ ಸಂದರ್ಭ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಹು ಮುಖ್ಯ ಘಟ್ಟ. ಪಾಶ್ಚಾತ್ಯ ಶಿಕ್ಷಣ, ಆಧುನಿಕ ಬದುಕಿನ ಒಲವುಗಳು, ವಿಶ್ವವಿದ್ಯಾಲಯಗಳ ಹೊಸತನದ ತುಡಿತ ಮೊದಲಾದ ಅಂಶಗಳಿಂದ ಸ್ವಾತಂತ್ರ್ಯ ನಂತರದ ಭಾರತದ ಬದುಕು ಹೊಸ ತಿರುವು ಪಡೆಯಿತು. ಇದು ಸಾಹಿತ್ಯ ಸೃಷ್ಟಿಯ ಮೇಲೂ ಪರಿಣಾಮ ಬೀರಿತು. ಈ ಸಂದರ್ಭದಲ್ಲಿ ಬಾಗೆನಾಡು ಹೊಸ ಚೈತ್ರ ಕಂಡಿತು. ನಿಜವಾದ ಅರ್ಥದಲ್ಲಿ ಈ ಚೈತ್ರಕ್ಕೆ ಮುಂಜಾವಿನ ತಂಗಾಳಿಯಾಗಿ ಸುಳಿದವರು ಜ್ಯೋತಿ ಹೊಸೂರರು. ಇವರು ಬಾಗೆನಾಡಿನ ಸಾಹಿತ್ಯ ಚರಿತ್ರೆಗೆ ಮುದ್ದಣ ಇದ್ದಂತೆ. ಅವರ ದಾರಿಯಲ್ಲಿ ಬಂದ ಅನೇಕ ಸಾಹಿತಿಗಳು ಇಂದು ಕನ್ನಡ ಸಾಹಿತ್ಯ ವಲಯದಲ್ಲಿ ಅಳಿಸಲಾಗದ ಹೆಜ್ಜೆ ಮೂಡಿಸಿದ್ದಾರೆ. ಆಧುನಿಕ ಕನ್ನಡದ ಚರಿತ್ರೆಯಲ್ಲಿ ಈ ನಾಡಿನ ಚರಿತ್ರೆಯನ್ನು ವಿವರಿಸುವುದು ನಾಲ್ಕನೆಯ ಅಧ್ಯಾಯ.

ಐದನೆಯ ಅಧ್ಯಾಯ ಸಮಾರೋಪ. ಪ್ರಸ್ತುತ ಅಧ್ಯಯನದ ಒಟ್ಟು ಸಾರಾಂಶವನ್ನು ಇದು ಒಳಗೊಂಡಿದೆ.

೧.೩. ಅಧ್ಯಯನದ ಉದ್ದೇಶ :

ಕವಿ ರಾಜಾದಿತ್ಯನನ್ನು ಹೊರತು ಪಡಿಸಿದರೆ ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಾಗೆನಾಡಿನ ಕವಿಗಳ ಉಲ್ಲೇಖವಿಲ್ಲ. ಕ್ರಿ. ಶ. ೧೧ನೇ ಶತಮಾನದ ಈ ಪ್ರದೇಶ ಸಾಹಿತ್ಯದ ಸಮೃದ್ಧಿ

ಪಡೆಯಲಿಲ್ಲ. ಕ್ರಿ. ಶ. ೧೯ ನೇ ಶತಮಾನದ ಮಧ್ಯಭಾಗದಲ್ಲಿ ಇಲ್ಲಿ ಜನಪದ ಸಾಹಿತ್ಯದ ವಸಂತ ಪರ್ವ ಆರಂಭಗೊಂಡಿತು. ಇನ್ನೂ ನಿಖರವಾಗಿ ಹೇಳಬೇಕೆಂದರೆ ಈ ಭಾಗ ಮೊದಲಿನಿಂದಲೂ ಜನಪದ ಸಾಹಿತ್ಯದ ತವರು. ಬಾಗೆನಾಡು ವಿಶಾಲ ಹಾಗೂ ಬೆಟ್ಟಗಳಿಂದ ಕೂಡಿದ ಬಯಲು ಪ್ರದೇಶ. ಪಶುಪಾಲನೆಗೆ ತುಂಬಾ ಅನುಕೂಲವಾಗಿತ್ತು. ಹೀಗಾಗಿ ಈ ಭಾಗದಲ್ಲಿ ಕುರುಬರು (ಹಾಲುಮತದವರು) ಬಹುಸಂಖ್ಯಾತರು. ಕೆಲವು ಗ್ರಾಮಗಳಿಗೆ ಅವರೇ ಯಜಮಾನರು ಅಥವಾ ಮುಖಂಡರು. ಕುರಿ ಸಾಕಾಣಿಕೆಗೆ ಬೇಕಾದ ಎಲ್ಲಾ ಅವಕಾಶಗಳನ್ನು ಹೊಂದಿದ್ದ ಬಾಗೆನಾಡು ಹಾಲುಮತ ದೈವಗಳಿಂದ ತುಂಬಿಹೋಗಿದೆ. ಅಪ್ಪಟ ಜಾನಪದ ಸಂಸ್ಕೃತಿಯ ಕುರುಬರು ದೈವಾರಾಧನೆಯ ಹಿನ್ನೆಲೆಯಾಗಿ ಜನಪದ ಸಾಹಿತ್ಯವನ್ನು ಆರಂಭದಿಂದಲೂ ಪೋಷಿಸಿಕೊಂಡು ಬಂದವರು. ಅಕ್ಷರ ಸಂಸ್ಕೃತಿಯಿಂದ ಬಲುದೂರದಲ್ಲಿದ್ದ ಕುರುಬರು (ಕುರಿಗಾಹಿಗಳು) ಸಾಹಿತ್ಯವನ್ನು ತಮ್ಮ ಬದುಕಿನ ಒಂದು ಭಾಗವಾಗಿಸಿಕೊಂಡದ್ದು ಅಚ್ಚರಿಯಲ್ಲ. ಈ ಕಾರಣದಿಂದಾಗಿಯೇ ಇಂದಿಗೂ ಇಲ್ಲಿ ಜನಪದ ಸಾಹಿತ್ಯ ಹಚ್ಚುಹಸುರಾಗಿದೆ, ಹುಲುಸಾಗಿದೆ. ಇಲ್ಲಿಯ ಜನಪದ ಕವಿಗಳು ಕಲಾವಿದರು, ಹಾಡುಗಾರರು, ಲೋಕವಿಖ್ಯಾತರು. ಈ ದೃಷ್ಟಿಯಿಂದ ಬಾಗೆನಾಡು ಶಿಷ್ಟಪದ ಸಾಹಿತ್ಯದಲ್ಲಿ ಬಡವಾಗಿದ್ದರೂ ಜನಪದ ಸಾಹಿತ್ಯದಲ್ಲಿ ಶ್ರೀಮಂತ.

ಬಾಗೆನಾಡಿನ ಜನಪದ ಕವಿಗಳಾದ ಹಾರೂಗೇರಿಯ ಅಲಭೈರಿ, ಜಲಾಲಪುರದ ರಾಚೋಟಿ, ಪರಮಾನಂದವಾಡಿಯ ಕಲಸಿದ್ಧ ಮತ್ತು ಮೀರಾಸಾಬ, ಮುಗಳಖೋಡದ ರಾಚಯ್ಯ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ನಿಡಗುಂದಿಯ ಯಮನಪ್ಪ ಚಲುವಾದಿ ಮೊದಲಾದ ಜಾನಪದ ಪ್ರತಿಭೆಗಳಿಗೆ ಈ ಬಾಗೆನಾಡು ತೊಟ್ಟಲು. ಒಬ್ಬೊಬ್ಬರೂ ಒಂದೊಂದು ಮಹಾಪ್ರಬಂಧದ ವಸ್ತು. ಆದರೆ ಸಂಶೋಧನೆಯ ಈ ಕನ್ನೆಲವನ್ನು ಇದುವರೆಗೆ ಯಾರೊಬ್ಬರೂ ಸ್ಪರ್ಶಿಸದಿರುವದು ವಿಷಾದನೀಯ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಆ ಮಹಾಕಾರ್ಯದ ಒಂದು ಶುಭಾರಾಂಭ.

ಪ್ರಾಚೀನ ಕರ್ನಾಟಕದ ನಕ್ಷೆಯಲ್ಲಿ ಬಾಗೆನಾಡು ಢಾಳವಾಗಿಯೇ ಇತ್ತು. ಅದರ ಇತಿಹಾಸವನ್ನು ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. ಹೀಗಾಗಿ ಈ ಭಾಗದಲ್ಲಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅನೇಕ ಶಾಸನಗಳು ಕಂಡರಣೆಗೊಂಡವು. ರಾಯಬಾಗದಲ್ಲಿಯ ಕೆಲವು ಶಾಸನಗಳು ಈಗ ಕೊಲ್ಹಾಪುರದ ಪ್ರಾಚ್ಯವಸ್ತು ಸಂಗ್ರಾಹಲಯದಲ್ಲಿವೆ. ಕಂಕಣವಾಡಿ, ರಾಯಬಾಗ, ಮೊದಲಾದ ಸ್ಥಳಗಳಲ್ಲಿ ಸಿಗುವ ಶಾಸನಗಳಲ್ಲಿ ಸಾಹಿತ್ಯವನ್ನು ಶೋಧಿಸುವದು ಪ್ರಸ್ತುತ ಕಿರುಸಂಶೋಧನಾ ಪ್ರಬಂಧದ ಮತ್ತೊಂದು ಉದ್ದೇಶ. ಇದಕ್ಕಾಗಿಯೇ ಎರಡನೇ ಅಧ್ಯಾಯವನ್ನು ಮೀಸಲುಗೊಳಿಸಲಾಗಿದೆ.

೧.೪. ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನ ಕ್ಷೇತ್ರ ವಸ್ತುತಃ ವಿಶಾಲವಾದದು. ಅದು ಹಲವು ಮಹಾಪ್ರಬಂಧಗಳ ವ್ಯಾಪ್ತಿ. ಹೀಗಿದ್ದಾಗಲೂ ಈ ವಿಸ್ತೃತ ಅಧ್ಯಯನವನ್ನು ಒಂದು ಸಂಶೋಧನಾ ಕಿರು ಪ್ರಬಂಧದ ವ್ಯಾಪ್ತಿಗೆ ಸಂಯೋಜಿಸಲು ಉದ್ದೇಶಿಸಲಾಗಿದೆ. ಶೈಕ್ಷಣಿಕ ಶಿಸ್ತಿನ ಸಿಮೀತ ಅಧ್ಯಯನ ಅವಧಿಯ ಈ ಅಧ್ಯಯನವನ್ನು ಉದ್ದೇಶಕ್ಕೆ ಒಳಪಟ್ಟು ಮಿತಗೊಳಿಸುವದು ಅನಿವಾರ್ಯವಾಗಿದೆ. ಜೊತೆಗೆ ಮುಂದಿನ ಅಧ್ಯಯನದ ಹಲವು ಕ್ಷೇತ್ರಗಳನ್ನು ಗಮನಿಸಿ ಸಂಶೋಧಕರಿಗೆ ಸೂಚಿಸುವುದು ಈ ಅಧ್ಯಯನದ ಇನ್ನೊಂದು ಸಾರ್ಥಕತೆ.

ಟಿಪ್ಪಣಿಗಳು

೧) ಹಾ. ಮಾ. ನಾಯಕ (ಸಂ) : ಕನ್ನಡ ಸಾಹಿತ್ಯ ಚರಿತ್ರೆ, (ಸಂ–೪), ಪುಟ–೧೦೩೯

೨) ಆರ್. ನರಸಿಂಹಚಾರ್ಯ : ಕರ್ನಾಟಕ ಕವಿಚರಿತೆ (ಸಂ–೧), ಪುಟ–೩೩೬

೩) ಅದೇ.

೪) ಎಂ. ಮರಿಯಪ್ಪ ಭಟ್ಟ : ರಾಜಾದಿತ್ಯನ ವ್ಯವಹಾರ ಗಣಿತ (ಮುನ್ನುಡಿ), ಪುಟ–೨

೫) ಎಸ್. ಆರ್. ಗುಂಜಾಳ (ಸಂ) : ಬೆಳಗಾವಿ ಬೆಳಕು, ಪುಟ–೮೧

೬) ಜೇಮ್ಸ್ ಎಂ. ಕೆಂಬೆಲ್ : ಗೆಝೆಟ್ಟಿಯರ ಆಫ್ ಇಂಡಿಯಾ–ಬೆಲಗಮ್ : ಪುಟ–೩೬೭

ಅಧ್ಯಾಯ – ೨

ಪ್ರಾಚೀನ ಸಾಹಿತ್ಯ

ಅಧ್ಯಾಯ – ೨

ಪ್ರಾಚೀನ ಸಾಹಿತ್ಯ

೨.೧. ಪ್ರಾಚೀನ ಕವಿಗಳು :

ಬಾಗೆ ಪರಿಸರದ ಸಾಹಿತ್ಯ ಚರಿತ್ರೆಯ ಮೊದಲ ಸಂಪುಟದ ಮೊದಲ ಪುಟದಲ್ಲಿಯೇ ಕಾಣಿಸಿಕೊಳ್ಳುವ ಕವಿ ಕನ್ನಡದ ಗಣಿತ ಕೋವಿದ ರಾಜಾದಿತ್ಯ. ಕ್ರಿ. ಶ. ೧೧ನೇ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಸ್ತ್ರಯುಗ. ವಚನಕಾರರನ್ನು ಹೊರತು ಪಡಿಸಿದರೆ ಉಳಿದ ಕವಿಗಳು ಈ ಶಾಸ್ತ್ರ ಪರಂಪರೆಯನ್ನು ಕ್ರಿ. ಶ. ೧೨ ನೇ ಶತಮಾನಕ್ಕೂ ಮುಂದುವರಿಸಿದರು. ಅಂಥವರಲ್ಲಿ ರಾಜಾದಿತ್ಯನೂ ಒಬ್ಬ. ಕನ್ನಡದ ಮೊದಲ ಗಣಿತ ಶಾಸ್ತ್ರಜ್ಞ ಎನಿಸಿದ ರಾಜಾದಿತ್ಯ ಕುಂತಲದ ಭಾಸ್ಕರ. ಈತನ ಕುರಿತು ಕವಿಚರಿತೆ ಹಲವು ವಿವರಗಳನ್ನು ಒದಗಿಸುತ್ತದೆ.

ರಾಜಾದಿತ್ಯ ತನ್ನ ವ್ಯವಹಾರ ಗಣಿತದ ಆರಂಭದಲ್ಲಿ ಸ್ವಲ್ಪ ಮಟ್ಟಿಗೆ ತನ್ನ ವೈಯಕ್ತಿಕ ವಿವರ ನೀಡಿದ್ದಾನೆ. ಆದರೆ ಕಾಲ ವಿಚಾರ ಸ್ಪಷ್ಟಪಡಿಸಿಲ್ಲ. ಹೀಗಿರುವುದರಿಂದ ಕೆಲವರು ಈತನ ಕಾಲ ಕ್ರಿ. ಶ. ಸು ೧೧೨೦ ಎಂದು ಊಹಿಸಿರುವರು. ಆದರೆ ಕವಿಚರಿತೆಯಲ್ಲಿ ಈತನ ಕಾಲ ಕ್ರಿ. ಶ. ೧೧೯೦ ಎಂದು ಹೇಳಲಾಗಿದೆ. ಹೀಗಾಗಿ ರಾಜಾದಿತ್ಯನ ಕಾಲದ ಕುರಿತು ವಿದ್ವಾಂಸರಲ್ಲಿ ಒಮ್ಮತವಿಲ್ಲದಿದ್ದರೂ ಈತನ ಊರು ಪೂವಿನಬಾಗೆ ಎಂದು ಪ್ರಸಿದ್ಧವಾಗಿದ್ದ ಇಂದಿನ ರಾಯಬಾಗ ಎಂಬುದರಲ್ಲಿ ಸಂದೇಹವಿಲ್ಲ. ಸ್ವತಃ ಕವಿ ರಾಜಾದಿತ್ಯ ತನ್ನ ವ್ಯವಹಾರ ಗಣಿತದ ಐದು ಪದ್ಯಗಳಲ್ಲಿ ಪೂವಿನಬಾಗೆಯನ್ನು ಬಣ್ಣಿಸಿದ್ದಾನೆ. ಈ ಹಿಂದೆ ಅವರು "ಹೂವಿನಬಾಗೆ ಎಂಬುದು ಉತ್ತರ ಕರ್ನಾಟಕದಲ್ಲಿರಬೇಕು, ಹೂವಿನ ಹಡಗಲಿ ಬಾಗೇವಾಡಿ ಇತ್ಯಾದಿಯನ್ನು ಹೋಲುವಂತಿದೆ ಈ ಊರ ಹೆಸರು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.[೧]

ಭಾಹ್ಯ ಆಧಾರಗಳನ್ನು ಆಧರಿಸಿ ರಾಜಾದಿತ್ಯ ಬಾಗೆನಾಡಿನ ಸಾಹಿತ್ಯದ ಭಾಸ್ಕರನೆಂದು ಸ್ಪಷ್ಟವಾಗಿ ಹೇಳಬಹುದು.

ರಾಜ, ರಾಜವರ್ಮ, ಭಾಸ್ಕರ, ಬಾಚಯ, ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುವ ರಾಜಾದಿತ್ಯ ಆರು ಗಣಿತ ಶಾಸ್ತ್ರಗಳನ್ನು ಕನ್ನಡಕ್ಕೆ ಕೊಟ್ಟ ಗಣಿತ ನಿಷ್ಣಾತ.

ವೈಯಕ್ತಿಕ ವಿವರಗಳು :

ಈತ ತಂದೆ, ತಾಯಿ, ಗುರು, ಸಹೋದರ, ಪತ್ನಿ ಆಶ್ರಯದಾತರ ಹೆಸರುಗಳನ್ನು ದಾಖಲಿಸಿರುವದು ನಮ್ಮ ಸಾಹಿತ್ಯ ಚರಿತ್ರೆಯ ಭಾಗ್ಯ.

ಜಿನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತಂದೆ ಸರ್ವಾ
ವನಿಪಸ್ತುತ್ಯಾಸ್ಪದಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ
ತನುಮತ್ತಾಭೋಗಮಂ (?) ಬಾಹುಬಲಿಭರತರಾತ್ಮೇಶ್ವರರ್ ತಾಮೆನಲ್ ಭೂ
ಪೆನೆ ರಾಜಾದಿತ್ಯನೇಂ ಧನ್ಯನೋ ವಿಶದಯಶಂ ಸದ್ಗುಣಾಂಭೋಧಿಚಂದ್ರಂ ॥ [೨]

ಈತನ ತಂದೆ ಲೋಕಸ್ತುತ್ಯ ಶ್ರೀಪತಿ. ತಾಯಿ ವಸಂತಾ, ಹಿರಿಯ ಸಹೋದರ ಶಾಂತ, ಬಾಹುಬಲಿ ಭರತರು ಪೋಷಕರು, ಈತನ ಹೆಂಡತಿ ಕನಕಮಾಲೆ. ರಾಜಾದಿತ್ಯ ರಾಜಾಸ್ಥಾನದ ಪಂಡಿತನಾಗಿರಬಹುದು. ಈತನ ಆರಾಧ್ಯ ದೈವ ನೇಮಿನಾಥ. ನಿಜಗುರು ಶುಭಚಂದ್ರ ಮುನಿಗಳು.

ವ್ಯಕ್ತಿತ್ವ :

ಈತನದು ಶುಭ್ರ ವ್ಯಕ್ತಿತ್ವ. ದಯಾಬ್ಧಿಗೆ ಚಂದ್ರನಂತೆ ಪ್ರಕಾಶಮಾನ, ಚತುರನು, ವ್ಯವಹಾರ ಕುಶಲನು ಆದ ರಾಜಾದಿತ್ಯ ಸುಂದರ, ಸತ್ಯವಂತ, ಪರೋಪಕಾರಿ. ವಿದ್ಯೆ, ವಿನಯ, ಜ್ಞಾನದೇವನಾಗಿದ್ದು ಜನರ ಸ್ತುತಿಗೆ ಪಾತ್ರವಾಗಿದ್ದನು. ರಾಜಸಭೆಯಲ್ಲಿ ಗೌರವದ ಸ್ಥಾನ ಪಡೆದಿದ್ದನು.

ಅನುರೂಪಂ ಸತ್ಯವಾಕ್ಯಂ ಪರಹಿತಚರಿತಂ ಸುಸ್ಥಿರಂ ಭೋಗಿ ಗಂಭೀ
ರನುದಾರಂ ಸಚ್ಚರಿತ್ರಂ ಸೊಬಗನಖಿಲವಿದ್ಯಾವಿದಂ ಭವ್ಯ ಸೇವ್ಯಂ
ಜನತಾಸಂಸ್ತುತ್ಯನುರ್ವೀಶ್ವರರನಿಕರಸಭಾಯೋಗ್ಯನೆಂದಾಗಳುಂ ಮೇ
ದಿನಿ ರಾಜಾದಿತ್ಯನಂ ಬಣ್ಣಿಪುದರಿದೊಲವಿಂ ಸಂತತೋತ್ಸಾಹದಿಂದಂ ॥ [೩]

ರಾಜಾದಿತ್ಯ ಒಬ್ಬ ಶ್ರೇಷ್ಠ ಪಂಡಿತ. ಭೂಮಂಡಲದಲ್ಲಿ ಅವನಿಗೆ ಸಮಾನರಾದ ವಿದ್ವಾಂಸರೇ ಇರಲಿಲ್ಲವೆಂದು ತಾನೇ ಅಭಿಮಾನದಿಂದ ಹೇಳಿಕೊಂಡಿದ್ದಾನೆ.

ಈಚತುರಬ್ಧಿ ವೇಷ್ಟಿತಮಹೀತಳದೊಳ್ ದೊರೆಯಾರ್ ಸಮಸ್ತವಿ
ದ್ಯಾಚತುರಾನನಂಗೆ ವಿಬುಧಾಶ್ರಿತಕಲ್ಪ ಮಹೀರುಹಂಗೆನಲ್
ಖೇಚರಕರ್ಣಗತರಿಣಿಯನಂಧಂಬಣ್ಣಿ ಪರಂತೆಸೆದುನಾ [?]
ಳೋಚಿತನಂ ದಯಾಬ್ಧಿಹಿಮರೋಚಿಯನಪ್ರತಿಗಂಧಬಾಚಿಯಂ ॥ [೪]

ಬಿರುದುಗಳು :

ಈತನಿಗೆ ಗಣಿತವಿಳಾಸ, ವಿದ್ಯಾಧರ, ಭವ್ಯಭೂಷಣ, ಜನಪದ ಸಕಲಗಣಿತ ತತ್ವವಿಳಾಸ, ಕಮಲಮಧುಕರ, ಗಣಿತಶಾಸ್ತ್ರ ಪ್ರವೀಣ, ಓಜವೆಡಂಗ ಮುಂತಾದ ಬಿರುದುಗಳಿದ್ದವು.

ಗುರುಪರಂಪರೆ :

ರಾಜಾದಿತ್ಯನ ಗುರು ಶುಭಚಂದ್ರದೇವಯೋಗೀಂದ್ರ. ವ್ಯವಹಾರ ಗಣಿತದ ಪ್ರತಿ ಅಧಿಕಾರಗಳ ಕೊನೆಯಲ್ಲಿ

> **ಇದು ಶುಭಚಂದ್ರದೇವಯೋಗೀಂದ್ರ ಪಾದಾರವಿಂದಮತ್ತ ಮಧುಕರಾಯಮಾನ ಮಾನ ಸಾನಂದಿತಸಕಲಗಣಿತ ವಿಳಾಸಂ ವಿನೇಯಜನವಿನೂತಂ ಶ್ರೀರಾಜಾದಿತ್ಯವಿರಚಿತಮಪ್ಪ ವ್ಯವಹಾರಗಣಿತದೊಳ್.** ೫

ಎಂದು ಬರೆದಿರುವದು ಅವನ ಗುರುಶ್ರದ್ಧೆಗೆ ಸಾಕ್ಷಿ. ಶುಭಚಂದ್ರಮುನಿಗಳು ಗಂಡವಿಮುಕ್ತ ಮಲಧಾರಿದೇವನ ಶಿಷ್ಯರು.

ರಾಜಶ್ರಯ :

ಕರ್ನಾಟಕದ ಇತಿಹಾಸ ಪುಟವನ್ನು ತಿರುವಿ ಹಾಕಿದಾಗ ಅನೇಕ ರಾಜ-ಮಹಾರಾಜರು ಕವಿ ಕಲಾವಿದರಿಗೆ ಇನ್ನೂ ಅನೇಕರಿಗೆ ಆಶ್ರಯ ನೀಡಿರುವುದು ಕಾಣಬಹುದು. ಅರಸನು ತಾನು ಮಾಡಿದ ಸಾಧನೆ ಮತ್ತು ದಾನದತ್ತಿ ನೀಡಿದ ವಿವರ ಜೊತೆಗೆ ಅವರ ಸಾಮ್ರಾಜ್ಯ ವಿಸ್ತಾರ, ಲೋಕೋಪಯೋಗಿ ಕಾರ್ಯ ಅವರ ಗುಣ ಹಾಗೂ ಬಿರುದುಗಳನ್ನು ಕವಿಗಳು ತಮ್ಮ ಕೃತಿಯಲ್ಲಿ ವರ್ಣಿಸುತ್ತ ಬಂದಿದ್ದಾರೆ. ಅವರ ಹೆಸರು ಪ್ರಕಾಶಮಾನವಾಗಬೇಕಾದರೆ ಕವಿಬೇಕು. ಕವಿಯಲ್ಲಿರುವ ಪ್ರತಿಭೆ ಪ್ರಜ್ವಲಿಸಬೇಕಾದರೆ ರಾಜಾಶ್ರಯ ಅವಶ್ಯವಿತ್ತು.

ಪಂಪನಿಗೆ ಅರಕೇಸರಿ ಆಶ್ರಯವಿದ್ದಂತೆ ರನ್ನನಿಗೆ ಸತ್ಯಾಶ್ರಯನ ಆಶ್ರಯವಿತ್ತು. ಕವಿ ರಾಜಾದಿತ್ಯ ತನ್ನ ಆಶ್ರಯದಾತನ ಬಗ್ಗೆ ತನ್ನ ವ್ಯವಹಾರ ಗಣಿತದ ಪೀಠಿಕಾ ಪದ್ಯ ೧೦ ರಲ್ಲಿ ಬಾಹುಬಲಿ ಭರತಾರಾತ್ಮೇಶ್ವರರ್ ಎಂದು ಹೆಸರಿಸಿರುವುದನ್ನು ನೋಡುತ್ತೇವೆ. ಹೊಯ್ಸಳರ ೨ನೇ ಬಲ್ಲಾಳನ ಕಾಲದಲ್ಲಿ (ಕ್ರಿ. ಶ. ೧೧೭೩-೧೨೨೦) ಇವರು ದಂಡನಾಯಕರಾಗಿದ್ದರು.

ಕಾಲವಿಚಾರ :

ಆಶ್ರಯದಾತನ ಹಾಗೂ ಗುರುವಿನ ಕಾಲವನ್ನು ಗಮನದಲ್ಲಿರಿಸಿಕೊಂಡು ರಾಜಾದಿತ್ಯನ

ಕಾಲ ನಿರ್ಧರಿಸಲು ಕವಿಚರಿತೆಕಾರರು ಮೊದಲಿಗೆ ಪ್ರಯತ್ನಿಸಿದರು. ರಾಜಾದಿತ್ಯ ತನ್ನ ಕೃತಿಯಾದ 'ವ್ಯವಹಾರಗಣಿತ'ದ ಹಸ್ತಪ್ರತಿಯಲ್ಲಿ ವಿಷ್ಣುನೃಪಾಲನ ಹೆಸರನ್ನು ಹೇಳುತ್ತಾನೆ.

ನಗಮುಷ್ಟಂ ನವಮರ್ಕ ವಿಙ್ಮನುದಿನಾಂಭೋರಾಶಿಷಟ್ಪಂಚಸಂ
ಖ್ಯೆಗಳಂ ವರ್ತನೆಗೊಳ್ವ ವಂದಿಜನಮಿಾರಯ್ದರ್ಕಮೌದಾರ್ಯವೀ
ರ್ಯಗುಣಂ ವಿಷ್ಣುನೃಪಾಲನಿತ್ತನೊಸೆದಿನ್ನೂರೇಳ್ಪೊನ್ನ(?) ಮತ್ತೆಲ್ಲವಂ
ದಗಳೋರೋರ್ವರ ಭಾಗಕೇನಹುದು ಮತ್ತೇನಕ್ಕುಮೋ ಭಾಸ್ಕರಾ '

ಈ ಪದ್ಯವನ್ನು ನೋಡಿದಾಗ ರಾಜಾದಿತ್ಯನ ಕಾಲದಲ್ಲಿ ವಿಷ್ಣುವರ್ಧನ ಎಂಬುವನು ಅರಸನಾಗಿದ್ದನು. ಎನ್ನುವದು ಸ್ಪಷ್ಟವಾಗುತ್ತದೆ. "ವ್ಯವಹಾರಗಣಿತ"ದಲ್ಲಿಯೂ ಕೆಲವಡೆ ವಿಷ್ಣುನೃಪಾಲನ ಹೆಸರಿರುವುದನ್ನು ಗಮನಿಸಿ ಪ್ರಾಯಶ; ಈ ಕ್ರಿ. ಶ. ೧೧೧೧ರಿಂದ ೧೧೧೪ ರವರೆಗೆ ಆಳಿದ ಹೊಯ್ಸಳ ದೊರೆ ವಿಷ್ಣುವರ್ಧನ ಇರಬೇಕೆಂದು ಈತನ ಆಸ್ಥಾನ ಪಂಡಿತನಾಗಿ ರಾಜಾದಿತ್ಯ ಸು. ಕ್ರಿ. ಶ. ೧೧೨೦ ರಲ್ಲಿದ್ದರಬೇಕೆಂದೂ ಕವಿಚರಿತಾಕಾರರು ಮೊದಲು ಊಹಿಸಿದ್ದರು. ಸೊರಟೂರು ಕದನದ ಆಧಾರದ ಮೇಲೆ ರಾಜಾದಿತ್ಯನ ಕಾಲವನ್ನು ಮರುಪರಿಶೀಲಸಿ ಕ್ರಿ. ಶ. ೧೧೯೦ ಎಂದು ಖಚಿತಪಡಿಸಿದುದನ್ನು ಬಹುಪಾಲ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ರಾಜಾದಿತ್ಯನ ಕೃತಿಗಳು :

ಕನ್ನಡದಲ್ಲಿ ಪ್ರಪ್ರಥಮವಾಗಿ ಗಣಿತ ಗ್ರಂಥವನ್ನು ರಚಿಸಿದ ಶ್ರೇಯಸ್ಸು ಕವಿ ರಾಜಾದಿತ್ಯನದು. ತನ್ನ ಕೃತಿಗಳಲ್ಲಿ ವ್ಯವಹಾರ ಗಣಿತವನ್ನು ಮತ್ತು ಅಳತೆಯ ಮಾಪನ, ಕಾಲ–ಕ್ಷೇತ್ರ ವಿಚಾರ– ದಾನ್ಯಗಳ ಉಳಿಯುವ ಬೆಲೆಯನ್ನು, ಆಳುಗಳ ಬೆಲೆಯನ್ನು ಹೀಗೆ ಇನ್ನೂ ಅನೇಕ ಗಣಿತ ವಿಚಾರವನ್ನು ತನ್ನ ಕೃತಿಗಳಲ್ಲಿ ವಿವರಿಸಿದ್ದಾನೆ. ರಾಜಾದಿತ್ಯ ಆರು ಗಣಿತ ಗ್ರಂಥಗಳನ್ನು ಬರೆದಿರುವನು. ಅವು ಈ ಕೆಳಗಿನಂತಿವೆ.

೧) **ವ್ಯವಹಾರ ಗಣಿತ**
೨) **ಕ್ಷೇತ್ರ ಗಣಿತ**
೩) **ಲೀಲಾವತಿ**
೪) **ಜೈನಗಣಿತ ಸೂತ್ರ ಟೀಕೋದಾಹರಣ**
೫) **ಚಿತ್ರ ಹಸುಗೆ**
೬) **ವ್ಯವಹಾರ ರತ್ನ.**

ಈತನ ಈ ಕೃತಿಗಳಲ್ಲಿ 'ವ್ಯವಹಾರ ಗಣಿತ' ದೊರೆತು ಅಚ್ಚಾಗಿದೆ. 'ಲೀಲಾವತಿ'ಯ ಒಂದು ಹಸ್ತಪ್ರತಿಯೇನೋ ಉಪಲಬ್ಧವಿದೆ ; ಆದರೆ ಸ್ವಲ್ಪ ಈಚಿನಕಾಲದ ಭಾಷೆ ಛಂದಸ್ಸುಗಳು

ಕಾಣಬರುವದರಿಂದ ಇದರ ಕರ್ತೃತ್ವ ಸಂದೇಹಾಸ್ಪದ. ರಾಜಾದಿತ್ಯನ 'ಲೀಲಾವತಿ' ಎಂದು ನಿರ್ದೇಶಿಸಿ ಕೆಲವು ಪದ್ಯಗಳನ್ನು ಇಲ್ಲಿ ಕೊಟ್ಟಿರುವುದರಿಂದ ಆ ಹೆಸರಿನ ಗ್ರಂಥವೊಂದನ್ನು ರಾಜಾದಿತ್ಯ ಬರೆದಿದ್ದನೆಂಬುದು ಇದರಿಂದ ಸಿದ್ಧವಾಗುತ್ತದೆ. ಉಳಿದ ಗ್ರಂಥಗಳ ಬಗ್ಗೆ ಕವಿ ಚರಿತೆಕಾರರು ಬಳಸಿದ ಹಸ್ತಪ್ರತಿಗಳು ಈಗ ಪರಿಶೀಲನೆಗೆ ಸಿಕ್ಕುತ್ತಿಲ್ಲ. ಆದ್ದರಿಂದ ಸದ್ಯಕ್ಕೆ ಅವರು ನೀಡಿರುವ ಮಾಹಿತಿ ಮಾತ್ರದಿಂದಲೇ ಅವುಗಳ ಪರಿಚಯ ಮಾಡಿಕೊಳ್ಳಬೇಕಾಗುತ್ತದೆ.[೭]

೧) ವ್ಯವಹಾರ ಗಣಿತ :

ಈ ಕೃತಿ ಉಪಲಬ್ಧವಾದದ್ದು ಕ್ರಿ. ಶ. ೧೯೫೫ರಲ್ಲಿ ಎಂ. ಮರಿಯಪ್ಪ ಭಟ್ಟ ಸಂಪಾದಿಸಿ ಪ್ರಕಟಿಸಿದರು. ಇದು ಸಮಗ್ರವಾಗಿಲ್ಲ, ಕ್ರಮಬದ್ಧವಾಗಿಲ್ಲ. ಹಲವು ಗಣಿತ ತಜ್ಞರ ಕೈಗಳನ್ನು ದಾಟಿ ಬಂದಿರುವದರಿಂದ ಕ್ರಮರಾಹಿತ್ಯವಾಗಿರುವುದಾಗಿ ಅವರು ತಿಳಿಸಿದ್ದಾರೆ. ಇದು ಸಂಕ್ಷಿಪ್ತವಾಗಿದ್ದರೂ ಸಾರವತ್ತಾಗಿಯೂ ವ್ಯವಹಾರಕ್ಕೆ ಉಪಯುಕ್ತವಾಗಿಯೂ ಇರುವಂತೆ ರಚಿತವಾಗಿದೆ.

ಪಿರಿದಂ ಪೇಳ್ವೊಡೆ ಸಾಲದೆ
ಪುರಾತನರ ಗಣಿತವೊಂದೆ ಪಲಕಾಲಂ ಬೆ
ಚ್ಚರಮೋದಿ ಕಿರಿದರಿಂ ವ್ಯವ
ಹರಿಸಲ್ ವ್ಯವಹಾರಗಣಿತಮಂ ವಿರಚಿಸಿದಂ[೮]

ಹಣ, ಕಾಲ, ದೂರ, ಅಳತೆ ಕೋಷ್ಟಕಗಳೊಂದಿಗೆ ತ್ರೈರಾಶಿ, ಪಂಚರಾಶಿ, ಸಪ್ತರಾಶಿ ನವರಾಶಿ ಗಣಿತಗಳ ಬಗ್ಗೆ ಹೇಳಲಾಗಿದೆ.

ಈ ಗ್ರಂಥದ ಸ್ವರೂಪ ಇಂತಿದೆ.

೧) **ಪೀಠಿಕಾ ಪ್ರಕರಣ**
೨) **ಪರಿಭಾಷಾ ಪ್ರಕರಣ**
೩) **ತ್ರೈರಾಶಿ ಪ್ರಕರಣ**
೪) **ಪಂಚರಾಶಿ ಪ್ರಕರಣ**
೫) **ಪಂಚಸಪ್ತನವರಾಶಿ ಪ್ರಕರಣ**

ಎರಡನೆಯ ಅಧ್ಯಾಯ ಪರಿಭಾಷಾ ಪ್ರಕರಣ ಪ್ರಕ್ಷಿಪ್ತವಾಗಿರಬೇಕೆಂಬುದೂ ವಿದ್ವಾಂಸರ ಊಹೆ. ತ್ರೈರಾಶಿ ಪ್ರಕರಣದಲ್ಲಿ ಧಾನ್ಯಗಳ ಬೆಲೆ, ಅಳತೆ, ಅಡಿಕೆ ವ್ಯಾಪಾರ, ಕೂಲಿ ಪಡಿಗೆ ಸಂಬಂಧಿಸಿದ ಲೆಕ್ಕಗಳಿವೆ. ಪಂಚರಾಶಿ ಪ್ರಕರಣದಲ್ಲಿ ಪಂಚರಾಶಿ, ಬೆಸ್ತರಾಶಿ, ಮಿಶ್ರತ್ರೈರಾಶಿ ಇವುಗಳಿಗೆ ಸಂಬಂಧಿಸಿದ ಬಡ್ಡಿ ಹಾಗೂ ಘನಫಲದ ಲೆಕ್ಕಗಳಿವೆ. ಪಂಚಸಪ್ತನವರಾಶಿ ಅಧ್ಯಾಯದಲ್ಲಿ ವ್ಯಾಪಾರ, ಅಳತೆ, ಕೂಲಿ, ಲಾಭ-ನಷ್ಟ, ಆನೆಯ ಕೂಲಿಗೆ ಸಂಬಂಧಿಸಿದ ಲೆಕ್ಕಗಳಿವೆ.

ಇದರಲ್ಲಿ ರಾಜಾದಿತ್ಯನ ಒಂದು ಲೆಕ್ಕವನ್ನು ಉದಾಹರಣೆಗಾಗಿ ನೋಡಬಹುದು.

ಪತಿ ಸತಿಯು ಮುನಿದು ಪೋಗಲ್
ಸತತಂ ಗಾವುದವ ಸಪ್ತ ದಿವಸಾಂತರದಿಂ
ಪತಿ ಗಾವುದರೆಯನನುದಿನ
ಗತಿವಡೆಯಲ್ ಸತಿಯನೆಂದು ಪತಿಯೆಯ್ದುಗುಮೋ ॥ (೫–೯೮)

ಟೀಕು ॥ ದಿನ ೧೨ ನೂ ಧ್ರುವಗತಿ ೫ ರಿಂ ಗುಣಿಯಿಸಲು ೬೦ ಇದನೂ ಪ್ರಯಿಟ್ಟು ಧ್ರುವಗತಿ ೫ ಲಿ ಆಕ್ಷೇಪಗತಿ ೮ ಕಳೆಯಲು ಶೇಷ ೩ ರಿಂ ಮುನ್ನಿನ ೬೦ನೂ ಭಾಗಿಸಲು ಸಂಯೋಗ ದಿನವಕ್ಕುಂ. ಈ ದಿನವ ಆಕ್ಷೇಪತಿ ೮ ರಿಂ ಗುಣಿಸಲು ಸಮಾನ ಯೋಜನಮಕ್ಕುಂ. [೯]

ಇದಕ್ಕನುಗುಣವಾಗಿ ಇದನ್ನು ಹೀಗೆ ಮಾಡಬಹುದು :

ಸತಿಯು ೧ ದಿನಕ್ಕೆ ೧ ಗಾವುದ ನಡೆಯುತ್ತಾಳೆ; ಹಾಗೆ ೭ ದಿನ ನಡೆದಿರುತ್ತಾಳೆ. ಆಗ ಪತಿ ಹೊರಡುತ್ತಾನೆ. ಅವನು ೧ ದಿನಕ್ಕೆ ೧ ೧/೩ ಗಾವುದ ನಡೆಯುತ್ತಾನೆ.

ಸತಿಯು ೭ ದಿನದಿಂದ ನಡೆದಿರುವ ಒಟ್ಟು ದೂರ=೭ X ೧=೭ ಗಾವುದ.

ಸತಿಪತಿಯರಿಗಿರುವ ವೇಗದ ವ್ಯತ್ಯಾಸ=೧ ೧/೩ –೧ = ೧/೩ ಗಾವುದ––ಒಂದು ದಿನಕ್ಕೆ ಈ ವ್ಯತ್ಯಾಸದಿಂದ ಸತಿಯು ನಡೆದಿರುವ ಒಟ್ಟು ದೂರವನ್ನು ಭಾಗಿಸಬೇಕು. ಅಂದರೆ

ಅಲ್ಲಿಯವರೆಗೆ ಪತಿ ನಡೆದಿರು ದೂರ = ೧೪ X ೧ ೧/೩
= ೨೧ ಗಾವುದ.

ಅಲ್ಲಿಯವರೆಗೆ ಸತಿ ಹೊರಟು ೨೧ ದಿನಗಳಾಗಿದ್ದು, ಅವಳು ನಡೆದಿರುವ ದೂರವು ೨೧ X ೧ = ೨೧ ಗಾವುದ.

ವೇಗ ಮತ್ತು ದೂರ ಮುಂತಾದುವಕ್ಕೆ ಸಂಬಂಧಿಸಿದ ಇಂತಹ ಸಮಸ್ಯೆಗಳು ಬಹು ಚಮತ್ಕಾರಿಕವಾಗಿಯೂ ಮನೋಹರವಾಗಿಯೂ ಇವೆ ಯಲ್ಲದೆ ಅಂದಿನ ಕನ್ನಡಿಗರ ಗಣಿತಪ್ರಜ್ಞೆಯ ಆಳವನ್ನೂ ಸುಲಭದಲ್ಲಿ ಉತ್ತರ ಕಂಡು ಕೊಳ್ಳುವ ಬುದ್ಧಿವಂತಿಕೆಯನ್ನೂ ಪ್ರತಿಬಿಂಬಿಸುತ್ತವೆ. [೧೦]

ರಾಜಾದಿತ್ಯ ಇದನ್ನು ಐದು ದಿವಸದಲ್ಲಿ ಬರೆದಂತೆ ತಿಳಿಸಲಾಗಿದೆ.

ಲೆಕ್ಕದ ಕವಿತೆಯ ಬಲ್ಮೆಜ ।
ಗಕ್ಕೆಸೆದಿರೆ ಸಕಲಗಣಿತಮಿಗ್ರಂಥದೊಳಂ ॥
ತೆಕ್ಕನೆ ತೀವಿರಲಯ್ದುದಿ ।
ನಕ್ಕಂ ನೆರೆ ಪೇಳ್ದನಲ್ತೆ ರಾಜಾದಿತ್ಯಂ ॥ [೧೧]

೨. ಕ್ಷೇತ್ರ ಗಣಿತ :

ಇದು ಈಗ ಉಪಲಬ್ಧವಿಲ್ಲ, ಪ್ರಾಯಶ: ಇದು ಭೂಮಿತಿ ಗಣಿತ (ಜಾಮೆಟ್ರಿ) ಆಗಿರಬಹುದು. ಕವಿಚರಿತೆಕಾರರು ಇದರಲ್ಲಿ ಆಯ್ದ ಮೂರು ಪದ್ಯಗಳನ್ನು ಉಲ್ಲೇಖಿಸಿರುವರು. ಅದರಲ್ಲಿ ಎರಡು ಪದ್ಯಗಳಲ್ಲಿ ಕಂಬದ ಅಳತೆಯನ್ನು ಹೇಳಲಾಗಿದೆ.

ವೃತ್ತಾಕಾರದ ಭೂಮಿಯ
ಸುತ್ತಳೆದಧರ್ಮಮನೆ ಬಿಡುವುದುಳಿದರ್ಧದೊಳಂ
ಮತ್ತೆರಡು ಭಾಗಮಾಡಿಯೆ
ಮತ್ತೊಂದರೊಳೊಂದನೊತ್ತೆ ಕಂಭಂ ಬರ್ಕುಂ ॥ [೧೨]

೩. ವ್ಯವಹಾರ ರತ್ನ :

ಇದರಲ್ಲಿ ೫ ಅಧಿಕಾರಗಳು ಇರುವುದಾಗಿ ಕವಿಚರಿತೆಕಾರರು ತಿಳಿಸಿದ್ದಾರೆ. ಬಹುಶಃ ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕದ ಮಸ್ತಕ ಇದಾಗಿರಬಹುದು.

೪. ಜೈನಗಣಿತ ಸೂತ್ರಟೀಕೋದಾಹರಣ :

ಇದರಲ್ಲಿ ಪ್ರಶ್ನೆಗಳನ್ನು ಕೊಟ್ಟು ಉತ್ತರವನ್ನು ಪಡೆಯುವ ಉದಾಹರಣೆಗಳನ್ನು ತೋರಿಸಿದ್ದಾನೆ.

೫. ಚಿತ್ರಹಸುಗೆ :

ಕವಿಚರಿತ್ರೆಕಾರರ ಅಭಿಪ್ರಾಯದಂತೆ ಇದು ಸೂತ್ರ ಟೀಕಾರೂಪದ ಗಣಿತ. ಈಗ ಉಪಲಬ್ಧವಿಲ್ಲ.

೬. ಲೀಲಾವತಿ :

ಈ ಲೀಲಾವತಿ ಗಣಿತ ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಬಂಢಾರದಲ್ಲಿ ಇದೆ. ಈ ಹಸ್ತಪ್ರತಿಯ ಆರಂಭದಲ್ಲಿಯೇ "ಲೀಲಾವತಿ ಗಣಿತ ರಾಜಾದಿತ್ಯ" ಎಂದು ಬರೆಯಲಾಗಿದೆ. ಮತ್ತೆ ಎರಡು ಕಡೆ ಕೃತಿಕಾರ ರಾಜಾದಿತ್ಯನೇ ಎಂಬುದಕ್ಕೆ ಸಾಕ್ಷಿಗಳಿವೆ.

ಲೀಲಾವತಿ ಸಂಭೋದನೆಯನ್ನು ಒಳಗೊಂಡ ಗಣಿತ ಶಾಸ್ತ್ರ ಇದಾಗಿರುವದರಿಂದ ಇದನ್ನು 'ಲೀಲಾವತಿ ಗಣಿತ' ಎಂದು ಕರೆಯಲಾಗಿದೆ. ಆದರೆ ಈಗ ಸಿಕ್ಕಿರುವ ಹಸ್ತಪ್ರತಿ ರಾಜಾದಿತ್ಯನ ಲೀಲಾವತಿ ಗಣಿತವೆಂದೂ ಅದು ಮತ್ತೊಬ್ಬ ಗಣಿತ ಶಾಸ್ತ್ರಜ್ಞನ ಕೃತಿ ಎಂದೂ ಮೈಸೂರ ವಿಶ್ವವಿದ್ಯಾಲಯ

ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಅಂದರೆ ರಾಜಾದಿತ್ಯನ ಲೀಲಾವತಿ ಗಣಿತ ಸದ್ಯಕ್ಕೆ ಅನುಪಲಬ್ಧ.

ಕನ್ನಡ ಶಾಸ್ತ್ರ ಸಾಹಿತ್ಯ ಮತ್ತು ರಾಜಾದಿತ್ಯ :

ಮದನ ತಿಲಕದ ಕವಿ ಚಂದ್ರರಾಜ ಕನ್ನಡಕ್ಕೆ ಮೊದಲ ಕಾಮಶಾಸ್ತ್ರವನ್ನು ಕೊಟ್ಟವನು. ಜಾತಕ ತಿಲಕದ ಶ್ರೀಧರಾಚಾರ್ಯ ಜ್ಯೋತಿಷ್ಯವನ್ನು ಕೊಟ್ಟನು. ಕೀರ್ತಿವರ್ಮ ಗೋವೈದ್ಯ ಕೊಟ್ಟನು. ಚಾವುಂಡರಾಯ ಲೋಕೋಪಕಾರವೆಂಬ ಸಾಮಾನ್ಯ ಜ್ಞಾನದ ಗ್ರಂಥವನ್ನು ಕೊಟ್ಟನು. ಪೂವಿನಬಾಗೆಯ ರಾಜಾದಿತ್ಯ ಕನ್ನಡಕ್ಕೆ ಗಣಿತಶಾಸ್ತ್ರ ನೀಡಿದನು. ಶಾಸ್ತ್ರ ಸಾಹಿತ್ಯ ಚರಿತ್ರೆಯಲ್ಲಿ ರಾಜಾದಿತ್ಯನ ಹೆಸರು ತುಂಬಾ ಢಾಳವಾಗಿದೆ. ಸಂಸ್ಕೃತದ ಭಾಸ್ಕರಾಚಾರ್ಯರ ಗಣಿತವನ್ನು ಆಕರವಾಗಿಟ್ಟುಕೊಂಡು ಕನ್ನಡಕ್ಕೆ ಗಣಿತದ ಹಲವು ನೆಲೆಗಳನ್ನು ಪರಿಚಯಿಸಿದ ರಾಜಾದಿತ್ಯ ಕನ್ನಡದ ಗಣಿತ ಭಾಸ್ಕರ.

ರಾಜಾದಿತ್ಯನನ್ನು ಹೊರತು ಪಡಿಸಿದರೆ ಬಾಗೆನಾಡಿನ ಪ್ರಾಚೀನ ಕವಿಗಳ ವಿಚಾರ ತಿಳಿಯದು. ಸದ್ಯದ ಮಟ್ಟಿಗೆ ಈತನೇ ಈ ನಾಡಿನ ಏಕೈಕ ಪ್ರಾಚೀನ ಕವಿ.

೨.೨. ಶಾಸನ ಸಾಹಿತ್ಯ :

ರಾಯಬಾಗ ತಾಲೂಕಿನ ಶಾಸನಗಳ ಸರ್ವೇಕ್ಷಣೆ ನಡೆದಿಲ್ಲ. ಕುಹೂಂಡಿ ಮಂಡಲದ ಶಾಸನಗಳ ವ್ಯವಸ್ಥಿತ ಅಧ್ಯಯನವೇ ಇದುವರಿಗೆ ಸಾಧ್ಯವಾಗಿಲ್ಲ. ಕರ್ನಾಟಕದ ವಿವಿಧ ಜಿಲ್ಲೆಗಳ ಶಾಸನ ಸೂಚಿಗಳು ಪ್ರಕಟಗೊಂಡಿವೆ. ಆದರೆ ಬೆಳಗಾವಿ ಜಿಲ್ಲೆಯ ಶಾಸನ ಸೂಚಿಗಳು ಸಿದ್ಧಗೊಂಡಿಲ್ಲ. ಇತ್ತೀಚಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ಯೋಜನೆಯನ್ನು ಕೈಗೆತ್ತಿಕೊಂಡರೂ ಇನ್ನೂ ಪೂರ್ಣಗೊಂಡಿಲ್ಲ. ಹೀಗಾಗಿ ಬಾಗೆನಾಡಿನ ಶಾಸನಗಳು ಅಧ್ಯಯನ ಅಪೂರ್ಣವಾಗಿಯೇ ಉಳಿದಿದೆ.

ಇದು ವರೆಗೆ ಈ ನಾಡಿನ ಕೇವಲ ಏಳುಶಾಸನಗಳು ಪತ್ತೆಯಾಗಿದ್ದು, ಐದು ಶಾಸನಗಳು ಪ್ರಕಟಗೊಂಡಿವೆ. ಅವುಗಳಲ್ಲಿ ನಾಲ್ಕು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಹೊರತಂದಿರುವ ಶಾಸನಗಳ ಸಂಪುಟಮಾಲೆಯಲ್ಲಿಯ "ಮಹಾರಾಷ್ಟ್ರದ ಕನ್ನಡ ಶಾಸನಗಳು" ಎಂಬ ಗ್ರಂಥದಲ್ಲಿ ಪ್ರಕಟವಾಗಿವೆ. ಮತ್ತೊಂದು ಹಂಪಿಯ ಕನ್ನಡ ವಿಶ್ವವಿದ್ಯಾಲಯದ, ಶಾಸನ ಸಂಪುಟ ೨ ಸಂಚಿಕೆ ೨ ರಲ್ಲಿ ಡಾ. ಪಿ. ಜಿ. ಕೆಂಪಣ್ಣವರ ಹಾಗೂ ಅಪ್ಪಣ್ಣ ಹಂಜೆ ಪ್ರಕಟಿಸಿರುವರು.

"ಮಹಾರಾಷ್ಟ್ರದ ಕನ್ನಡ ಶಾಸನಗಳು" ಸಂಪುಟದಲ್ಲಿ ಪ್ರಕಟಗೊಂಡ ನಾಲ್ಕು ಶಾಸನಗಳು ಸದ್ಯ ಕೊಲ್ಲಾಪುರ ನಗರದ ಇರ್ವಿನ್ ಎಗ್ರಿಕಲ್ಚರ್ ಮ್ಯೂಜಿಯಂದಲ್ಲಿವೆ. ಇನ್ನೊಂದು ಅಲ್ಲಿಯ ರಾಜಾರಾಮ್ ಕಾಲೇಜಿನ ಆವರಣದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಐದು ಶಾಸನಗಳಲ್ಲಿ ಒಂದೇ

ಒಂದು ಶಾಸನ ರಾಯಬಾಗದಲ್ಲಿದೆ. ಅದು ಅಲ್ಲಿಯ ಆದಿನಾಥ ಜಿನಮಂದಿರ ಆವರಣದಲ್ಲಿ ಹುದುಗಿ ಹೋಗಿತ್ತು. ಅದೊಂದು ಅಪರೂಪದ ವೀರಶಾಸನ. ಅದನ್ನು ಇತ್ತೀಚಿಗೆ ಡಾ. ಬಿ. ಆರ್. ಹಿರೇಮಠ ಮತ್ತು ಡಾ. ಪಿ. ಜಿ. ಕೆಂಪಣ್ಣವರ ಸಂಶೋಧಿಸಿರುವರು.

ಸಾಹಿತ್ಯದ ಅಭ್ಯಾಸಗಳಿಗೆ ಆ ಶಾಸನಗಳ ಅಧ್ಯಯನ ಎರಡು ಕಾರಣಗಳಿಂದ ಮುಖ್ಯವಾಗುತ್ತದೆ. ಒಂದು ಶಾಸನವನ್ನು ರಚಿಸಿದವರು ಪ್ರಬುದ್ಧ ಕವಿಗಳಾಗಿರಬಹುದು. ಅಥವಾ ಶಾಸನ ಸುಂದರ ಸಾಹಿತ್ಯವನ್ನು ಒಳಗೊಂಡಿರಬಹುದು. ಆದರೆ ಅಪರೂಪಕ್ಕೆ ಕೆಲವೊಮ್ಮೆ ಶಾಸನಗಳು ಈ ಎರಡು ಸಂಗತಿಗಳಿಂದ ಹೊರಗುಳಿಯುವುದುಂಟು.

ಬಾಗೆನಾಡಿನ ಅತ್ಯಂತ ಪ್ರಾಚೀನ ಉಲ್ಲೇಖ ರಾಷ್ಟ್ರಕೂಟರ ಶಾಸನದಲ್ಲಿದೆ. ಗೋಕಾಕ ತಾಮ್ರಪಟ ಶಾಸನದಲ್ಲಿ ದೆಜ್ಜ ಮಹಾರಾಜನ ನೆಚ್ಚಿನ ವಿಜಯನಂದ ಮಧ್ಯಮ ರಾಜನ ಮಗ ಅಧಿರಾಜ ಇಂದ್ರ ಜಂಬೂಖಂಡ ಗಣದ ಆಚಾರ್ಯ ಆರ್ಯನಂದಿಗೆ ಕುಹುಂಡಿ ವಿಷಯದ ಜಲಾರ್ ಗ್ರಾಮ ಅಂದರೆ ಮತ್ತು ಪೂವಿನ ಗ್ರಾಮ ಗ್ರಾಮಗಳಲ್ಲಿ ೫೦ ನಿವರ್ತನ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಜಲಾರ್ ಎಂಬುದು ಈಗಿನ ಜಲಾಲಪುರ. ಪೂವಿನ ಗ್ರಾಮ ರಾಯಬಾಗ ಆಗಿರಬೇಕು. ಜಲಾಲಪುರ ಹಾಗೂ ರಾಯಬಾಗ ಸಮೀಪದ ಊರುಗಳು.

ಈಗ ಲಭ್ಯವಿರುವ ಐದು ಶಾಸನಗಳಲ್ಲಿ ನಾಲ್ಕು ಪೂವಿನ ಬಾಗೆಯವು. ಒಂದು ಈಗಿನ ರಾಯಬಾಗ ತಾಲೂಕಿನ ಕಂಕಣವಾಡಿ ಗ್ರಾಮಕ್ಕೆ ಸಂಬಂಧಿಸಿದ್ದು.

ಕ್ರ.ಸಂ.	ಕಾಲ	ರಾಜಮನೆತನ	ಶಾಸನ ಸ್ವರೂಪ	ಶಾಸನ ಕವಿ.
೧.	ಕ್ರಿ.ಶ. ೧೦೪೦	ರಟ್ಟರು	ದಾನಶಾಸನ	ಅನುಕ್ತ
೨.	ಕ್ರಿ.ಶ. ೧೦೭೭	ಕ.ಚಾಲುಕ್ಯ	ವೀರಗಲ್ಲು	ಅನುಕ್ತ
೩.	ಕ್ರಿ.ಶ. ೧೧೨೭	ಕ.ಚಾಲುಕ್ಯ	ದತ್ತಿಶಾಸನ	ಅನುಕ್ತ
೪.	ಕ್ರಿ.ಶ. ೧೧೩೪	ಕ.ಚಾಲುಕ್ಯ	ದಾನಶಾಸನ	ರೂವಾರಿ ಮಲ್ಲೋಜ
೫.	ಕ್ರಿ.ಶ. ೧೯೯೯	ರಟ್ಟರು	ದಾನಶಾಸನ	ಅನುಕ್ತ
೬.	ಕ್ರಿ.ಶ. ೧೨ ಶ.ತ.	ಕ.ಚಾಲುಕ್ಯ	ತ್ರುಟಿತ	ಅನುಕ್ತ
೭.	ಕ್ರಿ.ಶ. ೧೨ ಶ.ತ.	ಕ.ಚಾಲುಕ್ಯ	ವೀರಗಲ್ಲು	ಅನುಕ್ತ

೧. ಕಂಕಣನೂರಿನ ಶಾಸನ :

ರಟ್ಟವಂಶದ ಅರಸರ ಪ್ರಶಂಸೆಯೊಂದಿಗೆ ಈ ಶಾಸನ ಆರಂಭವಾಗುತ್ತದೆ. ಅವರಲ್ಲಿ ಮೊದಲನೆಯವನು ಸೇನನೆಂಬುವನು. ಅವನ ರಾಣಿ ಲಖುಮಾದೇವಿ. ಅವರಿಬ್ಬರ ಮಗ ಕಾರ್ತವೀರ್ಯ.

ಅವನಿಗೆ ಮತ್ತು ಅವನ ರಾಣಿ ಪದ್ಮಾವತಿಗೆ ಲಕ್ಷ್ಮೀದೇವನು ಜನಿಸಿದನು. ಅವನ ಅರಸಿ ಚಂದ್ರಿಕಾದೇವಿ. ಇವರ ಮಕ್ಕಳು ಕಾರ್ತವೀರ್ಯ ಮತ್ತು ಮಲ್ಲಿಕಾರ್ಜುನ.

ಕಾರ್ತವೀರ್ಯನು ವೇಣುಗ್ರಾಮದ ನೆಲೆವೀಡಿನಲ್ಲಿ ಆಳುತ್ತಿದ್ದಾಗ ಅವನ ಅಧೀನನಾದ ವೈಜರಸನು ಕಂಕಣನೂರಿನ ಪ್ರಭುವಾಗಿದ್ದನು. ಅವನ ಹೆಂಡತಿಯ ಹೆಸರು ಅಳಸಿಹೋಗಿದೆ. ಅವರಿಗೆ ನಾಲ್ವರು ಮಕ್ಕಳು. ಹೆಮ್ಮಣಯ್ಯ, ಚಿದ್ದಣಯ್ಯ, ಕಾಳಿಮಯ್ಯ, ಮತ್ತು ಚಾವುಂಡರಾಯ. ಕಾರ್ತವೀರ್ಯನ ಅನುಗ್ರಹಕ್ಕೆ ಪಾತ್ರನಾದ ಹೆಮ್ಮಣಯ್ಯ ಕಾಲಾಂತರದಲ್ಲಿ ಒಡೆದು ಹೋಗಿದ್ದ ಹಳೆಯ ಶಾಸನವನ್ನು ಅದೇ ಅರ್ಥ ಬರುವಂತೆ ಮತ್ತೆ ಬರೆಯಿಸಿದನು. ಅದರಲ್ಲಿ ಹೇಳಿದಂತೆ ರಟ್ಟ ಅರಸ ಎರಗನು ತನ್ನ ಅಧೀನನಾದ ಮಾದಿರಾಜ ದಂಡನಾಯಕನಿಗೆ ಕಂಕಣನೂರಿನ ಅಧಿಪತ್ಯವನ್ನು ವಹಿಸಿಕೊಟ್ಟನು[೧೩]. ಆಗ ಕೊಟ್ಟ ಭೂಮಿಗಳ ವಿವರ ಇಲ್ಲಿದೆ.

ಮಾದಿರಾಜ ದಂಡನಾಯಕನು ವಿಪ್ರಾನ್ವಯದ ಶಾಂಡಿಲ್ಯ ಗೋತ್ರದವನು. ಶಾಸನ ಅವನನ್ನು ಕನ್ನಡಿಗ ವಂಶದಲ್ಲಿ ಹುಟ್ಟಿದವನೆಂದು ಬಣ್ಣಿಸುವದು ವಿಶೇಷ.

ಕನ್ನಡಿಗಂ ವಂಶದೊಳು
ತ್ವಂನಂ ಶಾಂಡಿಲ್ಯಗೋತ್ರ ವಿಪ್ರಾನ್ವಯದೊಳ್
ತಂನದಂಟಿಂ ದಳದಬ್ದಂಕ
ನುನ್ನತ ನಾಮಾದಿರಾಜದಣ್ಡಾಧೀಶಂ. [೧೪]

ಈ ಶಾಸನ ಸಾಹಿತ್ಯ ಪ್ರೌಢವಾಗಿದ್ದು; ಶಾಸನಕವಿ ಪ್ರತಿಭಾವಂತ. ಅವನು ಬಳಿಸಿದ ಯಮಕಾಲಂಕಾರ ಈ ಮಾತಿಗೆ ನಿದರ್ಶನ.

ದಣ್ಡಾಧೀಶ ಪ್ರಯೋಜ ಪಂಕಜಸಕಂದಣ್ಡೇಶವಾಣೀವರಂ
ದಣ್ಡಾಧೀಶ ವಿಶಾಲ ಭಾಳತಿಳಕಂ ದಣ್ಡೇಶ ದೈತ್ಯಾಂತಕಂ
ದಣ್ಡಾಧೀಶವಕೇಂಣ್ಯ ಪುನ ಭುವನಂ ದಣ್ಡೇಶ ನೇತ್ರತ್ರಯಂ

ಶಾಸನ ಭಾಷೆ ಪಾಂಡಿತ್ಯದಿಂದ ಕೂಡಿದೆ. ಆದರೆ ಶಾಸನ ಕವಿಯ ಉಲ್ಲೇಖವಿಲ್ಲ. ಈ ಶಾಸನ ಚಿಕ್ಕ ಚಂಪೂ ಕಾವ್ಯದಂತಿದೆ. ಶಾಸನ ಕವಿ ಕಾರ್ತವೀರ್ಯನ ಪತ್ನಿ ಪದ್ಮಾವತಿಯನ್ನು ಸುಂದರವಾಗಿ ಬಣ್ಣಿಸಿದ್ದಾನೆ. ೫೭ ಸಾಲುಗಳ ವಿಸ್ತಾರವಾದ ಶಾಸನದಲ್ಲಿ ಅಲ್ಲಲ್ಲಿ ಗದ್ಯ ಮಿಂಚಿದ್ದರೂ, ಪದ್ಯವೇ ಪ್ರದಾನ ಸ್ಥಾನದಲ್ಲಿದೆ. ಕೊನೆಯ ಸಾಲಿನಲ್ಲಿಯ "ಸ್ವದತ್ತಾಂ ಪರದತ್ತಾಂ........." ಎಂಬ ಶ್ಲೋಕವನ್ನು ಹೊರತುಪಡಿಸಿದರೆ ಸಂಪೂರ್ಣ ಶಾಸನ ಕನ್ನಡದಲ್ಲಿಯೇ ಇರುವದು ಇದರ ಇನ್ನೊಂದು ವೈಶಿಷ್ಟ್ಯವಾಗಿದೆ.

೨. ಕ್ರಿ.ಶ. ೧೦೭೭ರ ವೀರಗಲ್ಲು :

ಇದು ಆರನೆಯ ವಿಕ್ರಮಾದಿತ್ಯನ ಕಾಲದ ವೀರಗಲ್ಲು. ಆರನೆಯ ವಿಕ್ರಮಾದಿತ್ಯ ಪರಮಾರ ಭೋಜನು ಧಾರಾನಗರಿಯನ್ನು ಸುಟ್ಟು ಮರಳಿ ಬರುವಾಗ ಮಹಾಮಂಡಳಿಕ ಕೊಂಗಜರಸ ಭೋಜನೊಂದಿಗೆ ಯುದ್ಧ ಮಾಡಿದನು. ಆಗ ಕೊಂಗಜರಸನ ನಾಯಕ ಚಂಡರಸನು ಭೋಜನ ಆನೆಯ ಮೇಲೆ ದಂಡೆತ್ತಿ ಹಲವು ನಾಯಕರನ್ನು ಕೊಂದು ವೀರಮರಣ ಅಪ್ಪುತ್ತಾನೆ. ಅವನ ಸ್ಮರಣೆಗಾಗಿ ಈ ವೀರಗಲ್ಲು ನೆಡಲ್ಪಟ್ಟಿದೆ. ಇದು ಗದ್ಯ ಶಾಸನ.

೩. ಕ್ರಿ.ಶ. ೧೧೨೭ ಪೂವಿನಬಾಗೆಯ ಶಾಸನ :

ಇದು ೧೭ ಸಾಲುಗಳ ತ್ರುಟಿತ ಶಾಸನ. ಪ್ರಸ್ತುತ ಶಾಸನ ಪೂವಿನಬಾಗೆಯನ್ನು ಮಹಾಘಟಿಕಾಸ್ಥಾನ ಎಂದು ಬಣ್ಣಿಸಲಾಗಿದೆ. ಶಾಸನದ ಆರಂಭದ ಭಾಗ ನಾಶವಾಗಿ ಹೋಗಿರುವುದರಿಂದ ಯಾವ ರಾಜನಿಗೆ ಸಂಬಂಧಿಸಿದ ಶಾಸನ ಎಂದು ನಿರ್ಧರಿಸುವುದು ಕಷ್ಟ.

ಅಧಿಕಾರಿಯು (ಹೆಸರು ಹಾಳಾಗಿದೆ) ಹೂವಿನ ಬಾಗೆಯ ಮಹಾಘಟಿಕಾಸ್ಥಾನ ಹಾಗೂ ಅಗ್ರಹಾರದ ಅಧಿಪತಿಯಾಗಿದ್ದ ಆತ ಕೆರೆಯಲಿಯ ಕೇಶವೇಶ್ವರದೇವರಿಗೆ ದತ್ತಿದಾನ ನೀಡಿದ ಉಲ್ಲೇಖ ಬಂದಿದೆ. ಶಾಸನದ ಕೊನೆಯಲ್ಲಿ ಫಲಶೃತಿಯಿದೆ.[೧೫]

ಈ ಶಾಸನ ಗದ್ಯದಲ್ಲಿದ್ದು, ಭಾಷೆ ಸಾಧಾರಣವಾಗಿದೆ. ಸಾಹಿತ್ಯಕ ಅಂಶಗಳು ಕಡಿಮೆ.

೪. ಕ್ರಿ.ಶ. ೧೧೩೯ರ ಶಾಸನ :

ಇದು ಕಲ್ಯಾಣ ಚಾಲುಕ್ಯ ದೊರೆ ಎರಡನೆಯ ಜಗದೇಕಮಲ್ಲನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಆತನ ಅಧಿಕಾರಿ ದಂಡನಾಯಕ. ಸೇನಾಪತಿ ಕಾಳಿದಾಸನ ಉಲ್ಲೇಖ ಬಂದಿದೆ. ಈತನ ಅಳಿಯ ದಾಸಿರಾಜ.

ಈ ದಂಡನಾಯಕ ದಾಸಿಮರಸ ಅಗ್ರಹಾರ ಹೂವಿನಬಾಗೆಯ ಮಾರಸಿಂಗಸೆಟ್ಟಿಯ ಬಸದಿಯ ಜಿನಪೂಜ್ಯೋತ್ಸವವನ್ನು ನೋಡಲು ಬಂದಾಗ ಭೂಮಿ ದಾನ ನೀಡಿದ ವಿವರ ಬಂದಿದೆ. ಇದೇ ಬಸದಿಯ ಆಚಾರ್ಯರಾದ ಯಾಪನೀಯ ಸಂಘದ ಪುನ್ನಾಗ ವೃಕ್ಷ ಮೂಲಗಣದ ಕುಮಾರ ಕೀರ್ತಿಪಂಡಿತರನ್ನು ಗೌರವಿಸಿ, ಬಸದಿಗೆ ವಿವಿಧ ರೀತಿಯ ದಾನ ನೀಡಿದ ವಿವರ ಉಲ್ಲೇಖವಾಗಿದೆ. ಹೂವಿನಬಾಗೆ ಅಗ್ರಹಾರ ಹಾಗೂ ಘಟಿಕಾಸ್ಥಾನವಿತ್ತೆಂಬ ಅಂಶವೂ ಈ ಶಾಸನದಿಂದ ತಿಳಿದು ಬರುತ್ತದೆ. ಈ ಶಾಸನದ ರೂವಾರಿ ಮಲ್ಲೋಜ ಎಂಬ ಅಂಶವೂ ಉಲ್ಲೇಖಗೊಂಡಿದೆ.

ಶಾಸನದ ಭಾಷೆ ಸಂಸ್ಕೃತ ಭೂಯಿಷ್ಟವಾಗಿದು. ಶಾಸನದಲ್ಲಿ ಅನೇಕ ಸಂಸ್ಕೃತ ಶ್ಲೋಕಗಳು ಉಲ್ಲೇಖಗೊಂಡಿವೆ. ಶಾಸನವು ಹೂವಿನಬಾಗೆಯ ಒಡೆಯರನ್ನು ಸೊಗಸಾಗಿ ಬಣ್ಣಿಸುತ್ತದೆ.

> **ಯಮನಿಯಮ ಸ್ವಾಧ್ಯಾಯ ಧಾನ ಧಾರಣ ಮೋನಾನುಷ್ಠಾ ಪರಾಯಣಂ ಜಪಸಮಾ ಧಿಶೀಲಸಂಪನ್ನರು । ಅತೀತಾನಾಗತ ವರ್ತಮಾನ ಕಾಲದೂರ ಶ್ರವಣ ವಿಜ್ಞಾನಾದಿಗಳೊಳತಿ ಪರಿಚಿತರುಮೆ ನೇಕ ತರ್ಕ ಶಾಸ್ತ್ರ ವಿಧ್ಯಾವಿಶಾರದರುಂ ಚತುರ್ವ್ವೇದ ಪಾರಾವಾ ರ ಪಾರಗರುಮಾಶ್ರಿತ ಜನಾಧಾರರುಮೇಕ ವಾಕ್ಯರುಂ ಶ್ವೇತಚ್ಛತ್ರ ಚಾಮರಾದ್ಯನೇಕ ರಾಜ್ಯಚಿಹ್ನೋಪಲಕ್ಷಿತರುಂ। ಶ್ರೀ ವಾಸುದೇವ ಲಬ್ಧವರ ಪ್ರಸಾದರುಮಪ್ಪ ಶ್ರೀಮ ನ್ಮಹಾ ಘಟಿಕಾಸ್ಥಾನವಗ್ರಹಾರಂ ಪೂವಿನಬಾಗೆಯೂರೊಡೆಯ ಪ್ರಮುಖವಶೇಷ ಮಹಾಜನಜ್ಗಳು.**[೧೬]

೫. ಕ್ರಿ.ಶ. ೧೧೯೮ರ ಶಾಸನ :

ಇದು ರಟ್ಟರ ದೊರೆ ೪ನೇ ಕಾರ್ತಿವೀರ್ಯನ ಕಾಲದ ಶಾಸನ. ಆದಿನಾಥ ಬಸದಿಗೆ ಚಿಂಚಲಿ ಗ್ರಾಮವನ್ನು ದಾನವಾಗಿ ಕೊಟ್ಟ ವಿವರ ತಿಳಿಸುತ್ತದೆ. ಈ ಶಾಸನ ಸಂಪೂರ್ಣ ಹಾಳಾಗಿರುವದರಿಂದ ಹೆಚ್ಚಿನ ವಿವರ ತಿಳಿದು ಬರುವುದಿಲ್ಲ.

೬. ವಿಕ್ರಮಾದಿತ್ಯನ ಶಾಸನ :

ಈ ಶಾಸನವು ವಾಸು ಪೂಜ್ಯ ಮುನಿಯ ವರ್ಣನೆಯನ್ನು ಒಳಗೊಂಡಿದ್ದು, ಸುಸ್ಥಿತಿಯಲ್ಲಿಲ್ಲ. ಆದ್ದರಿಂದ ಶಾಸನದ ವಿಷಯ ಸ್ಪಷ್ಟವಾಗುವದಿಲ್ಲ.

೭. ವೀರಗಲ್ಲು :

ಇದು ಇತ್ತೀಚೀಗೆ ಸಂಶೋಧಿತಗೊಂಡ ತ್ರುಟಿತ ವೀರಗಲ್ಲು, ಚಾಲುಕ್ಯ ದೊರೆ ತ್ರಿಭುವನಮಲ್ಲನ ಕಾಲದ್ದು. ಆತನ ಆಧೀನನೂ ಪತಿರಾಯಣ ದಕ್ಷನಾಗಿದ್ದನು ಭುವನಗಾವುಂಡನು. ಹೆಮ್ಮಗಾವುಂಡ ಹಾಗೂ ಚವುಂಡಯ್ಯನ ಮಕ್ಕಳೊಡಗೂಡಿ ದಿಗ್ಗಜವಾಡದ ಮೇಲೆ ದಾಳಿ ಮಾಡಿ ವೀರಮರಣವನ್ನಪ್ಪಿದ ವಿಷಯವನ್ನು ತಿಳಿಸುತ್ತದೆ.

: ಟಿಪ್ಪಣಿಗಳು :

೧) ಎಂ. ಮರಿಯಪ್ಪ ಬೆಟ್ಟ : ವ್ಯವಹಾರ ಗಣಿತ (ಮುನ್ನುಡಿ), ಪುಟ–೧

೨) ಆರ್. ನರಸಿಂಹಚಾರ್ಯ : ಕರ್ನಾಟಕ ಕವಿಚರಿತೆ : (ಸಂ–೧), ಪುಟ–೩೩೨.

೩) ಅದೇ.

೪) ಅದೇ. ಪುಟ–೩೩೩

೫) ಅದೇ. ಪುಟ–೩೩೭

೬) ಅದೇ. ಪುಟ–೩೩೨

೭) ಹಾ. ಮಾ. ನಾಯಕ (ಸಂ) : ಕನ್ನಡ ಸಾಹಿತ್ಯ ಚರಿತ್ರೆ (ಸಂ–೪), ಪುಟ–೧೦೩೨

೮) ಅದೇ. ಪುಟ–೧೦೩೯

೯) ಅದೇ. ಪುಟ–೧೦೪೬

೧೦) ಅದೇ. ಪುಟ–೧೦೪೭

೧೧) ಆರ್. ನರಸಿಂಹಚಾರ್ಯ : ಕರ್ನಾಟಕ ಕವಿಚರಿತೆ : (ಸಂ–೧), ಪುಟ–೩೩೩.

೧೨) ಅದೇ. ಪುಟ–೩೩೭

೧೩) ಶ್ರೀನಿವಾಸ ರಿತ್ತಿ (ಸಂ) : ಕೊಲ್ಲಾಪುರ ಜಿಲ್ಲೆಯ ಶಾಸನಗಳು : ಪುಟ–೩೮

೧೪) ಅದೇ. ಪುಟ–೬೧

೧೫) ಅದೇ. ಪುಟ–೫೮

೧೬) ಜಿ. ಎನ್. ಉಪಾಧ್ಯೆ, ದೇವರ ಕೊಂಡಾರೆಡ್ಡಿ (ಸಂ) : ಮಹಾರಾಷ್ಟ್ರದ ಕನ್ನಡ ಶಾಸನಗಳು : ಪುಟ–೪೮

ಅಧ್ಯಾಯ – ೩

ಜನಪದ ಸಾಹಿತ್ಯ

ಅಧ್ಯಾಯ – ೩

ಜನಪದ ಸಾಹಿತ್ಯ

ಬಾಗೆನಾಡು ಜನಪದ ಸಾಹಿತ್ಯದ ಕಣಜ. ಈ ಬಾಗೆ ಶಿಷ್ಟಪದ ಸಾಹಿತ್ಯದಲ್ಲಿ ಎದ್ದು ಕಾಣುವಂತಿರದಿದ್ದರೂ ಜನಪದ ಸಾಹಿತ್ಯ ಶೃಂಗ ಉನ್ನತೋನ್ನತವಾದುದು.

ಜನಪದ ಸಾಹಿತ್ಯ ಅನಾಮಧೇಯ ಸಾಹಿತ್ಯ. ಜನಪದ ಕವಿಗಳಿಗೆ ಹೆಸರಿನ ಹಂಗಿರಲಿಲ್ಲ. ಪದವಿ, ಪ್ರಶಸ್ತಿ ಪುರಸ್ಕಾರಗಳ ಲಾಲಸೆ ಇರಲಿಲ್ಲ. ಜನಪದ ಸಾಹಿತ್ಯ ವ್ಯಕ್ತಿತ್ವ ನಿರಸನ ಸಾಹಿತ್ಯ. ಅದರ ಪ್ರಾಚೀನತೆ ಗುರುತಿಸಲು ಸಾಧ್ಯವಾಗದಿದ್ದರೂ ಬಾದಾಮಿ ಕಪ್ಪೆ ಅರಭಟ್ಟನ ಶಾಸನದಲ್ಲಿಯ ತ್ರಿಪದಿಗಳು ಹಳಮೆಗೆ ಸಾಕ್ಷಿ ಒದಗಿಸುತ್ತದೆ. ನಮಗಿಂದು ಪ್ರಾಚೀನ ಜನಪದ ಸಾಹಿತ್ಯ ಲಭ್ಯವಿಲ್ಲ. ಕಾಲಕ್ಕೆ ತಕ್ಕಂತೆ ಬದಲಾಗುತ್ತ ಬಂದ ಈ ಜನತಾ ಸಾಹಿತ್ಯ ಅಳಿವಿನ ಅಂಚಿನಲ್ಲಿ ಬಂದಾಗ ನಮ್ಮ ಕಣ್ಣು ತೆರೆದವು. ಆಗ ಇದು ಅಧ್ಯಯನದ ವಿಷಯವಾಯಿತು.

ಕವಿರಾಜಮಾರ್ಗಕಾರ ಶ್ರೀವಿಜಯನ ಕಾಲದಿಂದಲೂ ಉಪೇಕ್ಷೆಗೊಳಗಾದ ಜನಪದ ಕವಿಗಳು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ದಾಖಲಿತಗೊಳ್ಳಲಿಲ್ಲ. ಮೌಖಿಕ ಪರಂಪರೆಯಲ್ಲಿದ್ದ ಈ ಸಾಹಿತ್ಯ ಗಾಳಿಯಲ್ಲಿ ತೇಲಿ ಹೋಯಿತು. ಕ್ರಿ. ಶ. ೧೮ ನೇ ಶತಮಾನದ ಕೊನೆಗೆ ಅಥವಾ ೧೯ನೇ ಶತಮಾನದ ಮೊದಲ ದಶಕದಲ್ಲಿ ಬದುಕಿದ ಜನಪದ ಕವಿಗಳ ದಾಖಲೆಗಳೊಂದಿಗೆ ಜನಪದ ಸಾಹಿತ್ಯ ಚರಿತ್ರೆ ತೆರೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಈ ನಾಡಿನ ಹಾರೂಗೇರಿಯ ಕವಿ ಅಲಬ್ಯೈರಿ, ಜಲಾಲಪುರದ ರಾಚೋಟಿ, ಶಿರಗೂರದ ಕಲ್ಮೇಶ್ವರ, ಪರಮಾನಂದವಾಡಿಯ ಮೀರಾಸಾಬ, ಮುಗಳಖೋಡದ ರಾಚಯ್ಯ ಮೊದಲಾದವರು ಪ್ರಮುಖರು.

ನಾಡಿನ ಹಿರಿಯ ಜನಪದ ವಿದ್ವಾಂಸರಲ್ಲಿ ಒಬ್ಬರಾದ ಪ್ರೊ. ಜ್ಯೋತಿ ಹೊಸೂರ ಇದೇ ನಾಡಿನವರು. ಅವರು ಸ್ವಲ್ಪ ಮಟ್ಟಿಗೆ ಇಲ್ಲಿಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿರುವರು.

ಬಾಗೆನಾಡಿನ ಜನಪದ ಸಾಹಿತಿಗಳ ಅಧ್ಯಯನವನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

- ೩.೧ ದಾಖಲಿತ ಜನಪದ ಕವಿಗಳು
- ೩.೨ ದಾಖಲೆಗೊಳ್ಳದ ಜನಪದ ಕವಿಗಳು
- ೩.೩ ಸಂಕಲಿತ ಸಾಹಿತ್ಯ

೩.೧ ದಾಖಲಿತ ಜನಪದ ಕವಿಗಳು :

ದಾಖಲೆಗೆ ಒಳಪಡದಿರುವುದೇ ಜನಪದ ಸಾಹಿತ್ಯದ ಜೀವಂತಿಕೆ. ಅದು ಅಕ್ಷರ ಸಾಹಿತ್ಯವಲ್ಲ; ಧ್ವನಿ ಸಾಹಿತ್ಯ. ಅವರದು ಗ್ರಾಂಥಿಕ ಪರಂಪರೆಯಲ್ಲ. ಮೌಖಿಕ ಪರಂಪರೆ. ಆದರೆ ಇತ್ತೀಚಿಗೆ ಜನಪದ ಸಾಹಿತ್ಯ ಅವಜ್ಞೆಗೆ ಒಳಕಾಗುತ್ತಿರುವುದನ್ನು ಮನಗಂಡು ಜಾನಪದ ವಿದ್ವಾಂಸರು ಅದನ್ನು ಸಂಗ್ರಹಿಸಲು ಹಲವು ಕವಿಗಳ ಭಾಗಶಃ ಸಾಹಿತ್ಯ ದಾಖಲಿತಗೊಂಡಿತು. ಆ ಜನಪದ ಕವಿಗಳಲ್ಲಿ ಹಾರೂಗೇರಿಯ ಅಲಭ್ಯೆರಿ ಹಾಗೂ ಶಿರಗೂರದ ಕಲ್ಮೇಶ ಪ್ರಮುಖವಾಗುತ್ತಾರೆ.

೩.೧.೧ ಹಾರೂಗೇರಿಯ ಕವಿ ಅಲಭ್ಯೆರಿ :

ಅಲಭ್ಯೆರಿ ಜನಪದ ಸಾಹಿತ್ಯದಲ್ಲಿ ಅಗ್ರಗಣ್ಯ ಕವಿ. ರಾಯಬಾಗ ತಾಲೂಕಿನ ಹಾರೂಗೇರಿ ಈತನ ಜನ್ಮಸ್ಥಳ. ಮೂಲ ಹೆಸರು ಅಲ್ಲಪ್ಪ ಸುಬ್ಬಣ್ಣವರ. ಕಾವ್ಯನಾಮ ಅಲಭ್ಯೆರಿ. ತಂದೆ ಧರೆಪ್ಪಾ, ತಾಯಿ ರಾಮವ್ವ. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಅಲ್ಲಪ್ಪನನ್ನು ತಂದೆ ಪ್ರೀತಿಯಿಂದ ಬೆಳೆಸಿದ. ದಿನವಿಡಿ ತಿರುಗಿ ಸಂಜೆ ಮನೆಗೆ ಬರುತ್ತಿದ್ದ ಅಲ್ಲಪ್ಪನನ್ನು ತಂದೆ ತನ್ನೊಡನೆ ಕೆಲಸಕ್ಕೆ ಕರೆದರೂ ಈತ ಹೋಗಲಿಲ್ಲಾ. ನಂತರ ಮನೆಗೆ ಬರುವುದನ್ನು ಬಿಟ್ಟು ಗುಡಿ ಗುಂಡಾರ ಇತರರ ಮನೆಯ ಜಗಲಿಯಲ್ಲಿಯೇ ಇರುತ್ತಿದ್ದನು. ಬೇರೆಯವರ ಮನೆಯ ಜಗಲಿಯ ಮೇಲೆ ಮಲಗಿದ್ದ ಸಮಯದಲ್ಲಿ ಅಲ್ಲಿ ಹುಡುಗರು ಅಕ್ಷರ ಕಲಿಯುತ್ತಿದ್ದರು. ಅವರ ಜೊತೆ ಅಲ್ಲಪ್ಪ ವರ್ಣಗಳನ್ನು ಕಲಿತ, ಮುಂದೆ ಮರಾಠಿ ಬಲ್ಲವನಾದ, ಮೋಡಿ ಲಿಪಿಯನ್ನು ರೂಢಿಸಿ ಕೊಂಡನು.

ಶ್ರೀ ಚನ್ನವೃಷಭೇಂದ್ರ (ದೇವರಗೊಂಡ ಅಜ್ಜ) ಹಾರೂಗೇರಿಯ ಗ್ರಾಮದೈವ. ವೃಷಭೇಂದ್ರರು ಅದ್ವೈತ ಸಿದ್ಧಾಂತವನ್ನು ಅನುಸರಿಸಿಕೊಂಡು ನಡೆದವರು. ಅಲಭ್ಯೆರಿ ಇವರ ಅನುಯಾಯಿಯಾದ. ತತ್ವಪದ, ಭಜನೆ, ಡೊಳ್ಳಿನಹಾಡು, ಲಾವಣಿ ಮುಂತಾದ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಶ್ರೀಮಂತಗೊಳಿಸಿದನು.

ಅಲಭ್ಯೆರಿ ಕುಷ್ಠರೋಗಕ್ಕೆ ತುತ್ತಾದನು. ಜನರಿಂದ ದೂರಾದ ಈತ ಸಾಹಿತ್ಯವನ್ನು ತನ್ನ ಸಂಗಾತಿಯಾಗಿರಿಸಿಕೊಂಡ. ಅದರ ಕಡೆಗೆ ಹೆಚ್ಚು ಒಲವು ತೋರಿಸಿದನು. ತನ್ನ ನೋವನ್ನು ಹಾಡು ಬರೆಯುದರಲ್ಲಿ ಮರೆತ.

ಅಲಭ್ಯೆರಿಯ ಮೊದಲಗುರು ಗುಲಾಬದಾಸ. ಈತ ಗುಜರಾತದ ಸಾದು. ಹಾರೂಗೇರಿಯ ವಗ್ಗರ ಮಠದಲ್ಲಿ ಇರುತ್ತಿದ್ದನು. ಅವರಲ್ಲಿ ಅಲಭ್ಯೆರಿ ಶಿಷ್ಯತ್ವ ಪಡೆದುರುವುದನ್ನು ಅವರ ಅನೇಕ ತತ್ವಪದಗಳು ಪ್ರಮಾಣೀಕರಿಸುತ್ತವೆ.

"ಗುರುವೆಂದು ಭಾವಿಸಿ ಪೂಜಿಸಿ ಅಳಿಯೋ ಮುಮ್ಮಲಾಕುಲಚಲಾ
ಚಿನ್ಮಯ ಚನ್ನಮನ ಹೊಂದಿರದಾವಾಗ ಬತ್ತ ಅಕಲಾ-ಬೋಲಬಲಾ
ಹಾರೂಗೇರಿ ಗ್ರಾಮ ಪ್ರಣೇಶ ಇರುವಂಥಾ ಸ್ಥಳಾ- ಶಂಗಾಲಾಲಾ
ಗುಲಾಬದಾಸ ಮಹಾರಾಜನ ಅನುಕೂಲಾ ಪ್ರಸನ್ನಾಗಿ ಕೊಟ್ಟನ ಮಗಫಲಾ
ಅಲಭ್ಯೆರಿಯ ಸಾರಿದ ಸಣ್ಣಬಾಲಾ[೧]".

ಹುಟ್ಟಿನಿಂದ ಜೈನನಾದ ಅಲಭ್ಯೆರಿ ಅದ್ವೈತ ಸಿದ್ಧಾಂತ ಕಡೆಗೆ ಒಲಿದನು. ಚನ್ನವೃಷಭೇಂದ್ರರ ಕರುಣೆಯಿಂದ, ಅಂದಿನಿಂದ ಅವರೇ ಅಲಭ್ಯೆರಿಗೆ ಗುರುಗಳಾದರು.

"ಹ್ಯಾಂಗ ತಿಳಿದಿತಿಂವಗೆ ಅನುಭಾವಾ
ಹ್ಯಾಂಗ ತಿಳಿದಿತಿಂವಗೆ ಅನುಭಾವಾ

ರಾಗಭೋಗವನು – ನೀಗದೆ ಸುಗುಣದಿ
ಬಗೆಯದೆ ಯೋಗಿಸಂಗ ತ್ಯಾಗ ಮಾಡುವಾ
ಪಾಪರೂಪ ಭವ ತಾಪದಿ ಕೋಪದಿ
ಆಪತ್ತರಿಯದೆ ಭ್ರಮಿಸಿ ತಪ್ಪಿಕೆಡುವಾ
ಹಿಂದು ದೇಶದೊಳ – ಛಂದುಳ್ಳ ಹಾರೂಗೇರಿ
ಸುಂದರದೇವರಕೊಂಡ ಕಂದನಾಗದೆ[೨]"

ಕವಿ ಅಲಭ್ಯೆರಿಯ ಸಾಹಿತ್ಯವನ್ನು ರಾಮು ಸುಬ್ಬಣ್ಣವರ ಹಾಗೂ ಡಾ. ಆರ್. ಬಿ. ಚಿಲಮಿ ಅಲ್ಪ ಪ್ರಮಾಣದಲ್ಲಿ ಸಂಕಲಿಸಿರುವರು.

೧. ಶ್ರೀ ಜಿನಭಕ್ತಿ ಗೀತೆಗಳು
೨. ಭಜನೆಯ (ತತ್ವ) ಪದಗಳು

೧. ಶ್ರೀ ಜಿನಭಕ್ತಿ ಗೀತೆಗಳು :

ಪ್ರಸ್ತುತ ಸಂಕಲನದಲ್ಲಿ ಎಪ್ಪತ್ತು ಜಿನಭಕ್ತಿಗೀತೆಗಳಿದ್ದು, ಇವುಗಳನ್ನು ಕವಿ ಅಲಭ್ಯೆರಿಯ ಮಗ ರಾಮು ಸುಬ್ಬಣ್ಣವರ ಸಂಪಾದಿಸಿರುವರು. ಈ ಗೀತೆಗಳು ಜಿನಧರ್ಮದ ತತ್ವ ಸಿದ್ಧಾಂತಕ್ಕೆ ಸಂಬಂಧಿಸಿವೆ. ಬಹಳಷ್ಟು ಗೀತೆಗಳು ಅರಹಂತನನ್ನು ಸ್ತುತಿಸುತ್ತವೆ. ಜಿನತತ್ವಗಳನ್ನು ಜನಸಾಮಾನ್ಯರಿಗೆ ತಿಳಿಸುವುದು ಇವುಗಳ ಉದ್ದೇಶವಾಗಿದೆ.

ಜಿನ ಧರ್ಮದೊಳಗೆ ಬಂದಿಹುಟ್ಟಿ – ತಿಳಿಗೆಟ್ಟಿ
ದಣದೆಲ್ಲೋ ಉಪರಾಟಿ – ಜಿನ ಧರ್ಮಾ
ಹಗಲು ರಾತ್ರಿ ಹೊಟ್ಟೆಗೊಟ್ಟೆ
ಬಟ್ಟೆಗಾಗಿ ದುಡಿದು ಕೆಟ್ಟೆ

ಜಿನದೇವನ ಮರೆತು ಬಿಟ್ಟಿ
ಪುಸಿ ಮಾಯದಹಂಕಾರ ತೊಟ್ಟಿ
ನಿನ್ನದರೆಷ್ಟಿರುವದು ಖೊಟ್ಟಿ
ಮಹಾ ಮಂತ್ರವು ಜಪಿಸದೆ ಬಿಟ್ಟಿ
ಇನ್ನರೆ ತಿಳಿಯೋss ಭವಬಾಧೆ ಅಳಿಯೊ[೩].

೨. ಭಜನೆಯ (ತತ್ವ) ಪದಗಳು :

ಕವಿ ಅಲಭೈರಿಯ ೧೧೯ ಭಜನೆ ಪದಗಳನ್ನು ಡಾ. ಆರ್. ಬಿ. ಚಿಲಮಿಯವರು ಇದರಲ್ಲಿ ಸಂಕಲಿಸಿರುವರು. ಗಣನಾಥ, ಶಾರದೆ, ಶಿವಸ್ತುತಿಯಿಂದ ಆರಂಭಗೊಳ್ಳುವ ಈ ಪದಗಳು ಹಾರೂಗೇರಿ ಚನ್ನವೃಷಭನ ಮಹಿಮೆಯನ್ನು ವರ್ಣಿಸುತ್ತವೆ.

ಪ್ರಸ್ತುತ ಸಂಗ್ರಹದಲ್ಲಿ ಬೆರಳೆಣಿಕೆಯಷ್ಟು ಅಮೂಲ್ಯ ತತ್ವ ಪದಗಳಿವೆ.

ತೊಗಲಿನದೋ ದೇಹ ತೊಗಲಿನದೋ
ಬರಿಯಲು ಬ್ರಹ್ಮ ಸೃಷ್ಟಿ । ತೊಗಲಿನದಿದು ಸರ್ವ
ತೊಗಲಿನದೊಂದು ಗಂಡು । ತೊಗಲಿನದೊಂದು ಹೆಣ್ಣು
ತೊಗಲಿನೊಳು ತೊಗಲ ಕೂಡಿ ಮಗನು ಮಗಳಾದದ್ದು
ತೊಗಲಿನ ತಾಯಿ–ತಂದೆ । ತೊಗಲಿನ ಅಣ್ಣಾ ತಮ್ಮಾ
ತೊಗಲಿನ ಶತೃಮಿತ್ರ । ತೊಗಲಿನ ಬಂಧು ಬಳಗಾ
ತೊಗಲಿನ ಗೊಂಬಿಗೂಂಟು । ಬಗೆಯಾದ ರೋಗವಾಗಿ
ತೊಗಲು ಸತ್ತದ್ದು ಕಂಡು । ತೊಗಲೇ ಅತ್ತಿತು ತಮ್ಮಾ
ತೊಗಲಿನ ಅವಿಗಿರ್ದ ತೊಗಲಿನ ಮೊಲೆ ಹಾಲು
ತೊಗಲು ತಾ ಹಿಂಡಿಕೊಂಡು ತೊಗಲೇ ಕುಡಿದಿತು ತಮ್ಮಾ
ತೊಗಲಿನ ಆನಿ–ಒಂಟೆ । ತೊಗಲಿನ ಅಶ್ವ–ಎತ್ತು
ತೊಗಲಿನ ಮೇಲೆ ಕೂತು । ತೊಗಲೇ ಸೆಟೆದಾಡಿತು
ತೊಗಲಿನ ರಾಜ ಪ್ರಜಾ । ತೊಗಲಿನ ನ್ಯಾಯದೀಶಾ
ತೊಗಲಿನ ಮೇಲೆ ಹುಕುಂ । ತೊಗಲೇ ನಡೆಸಿತು ತಮ್ಮಾ
ತೊಗಲಿನ ಹಾರೂಗೇರಿ । ತೊಗಲಿನ ಅಲಭೈರಿ
ತೊಗಲಿನ ಒಳಗೊಂದು । ಮಿಗಿಲಾದ ವಸ್ತು ತಿಳಿಯೋ.[೪]

ಇದು ಕವಿ ಅಲಭೈರಿಯ ನೋವಿನ ಅಭಿವ್ಯಕ್ತಿಯಾಗಿರಬಹುದು. ಅವನ ಮೈದೊಗಲು ವಿಕಾರಗೊಂಡಿತ್ತು. ಅದಕ್ಕೆ ಆತ ತೊಗಲಿನ ಹಾಡ ಕಟ್ಟಿರಬಹುದು. ತೊಗಲ ಮೇಲಿನ ವ್ಯಾಮೋಹ

ಅಳಿದು ತೊಗಲಿನೊಳಗಿನ ಮಿಗಿಲಾದ ವಸ್ತುವಿನಡೆಗೆ ಮನಹರಿಸಿದಂತಿದೆ. ಅಲಭೈರಿಯು ಸಂಸಾರ ವಿರಕ್ತಿಯನ್ನು ಬಣ್ಣಿಸುವ ಹಲವು ಪದಗಳು ಇಲ್ಲಿವೆ. ನಿಜಗುಣ ಶಿವಯೋಗಿಗಳ ಅದ್ವೈತ ಅನುಭಾವವೇ ಈ ಎಲ್ಲ ಪದಗಳಿಗೆ ಜೀವಾಳ. ಹೀಗಿದ್ದು ಜೈನ ಧರ್ಮದ ಅಂಟು ಅಲ್ಲಲ್ಲಿ ಅಂಟಿಕೊಂಡಿದೆ.

ಶಿಷ್ಟ ಜಿನ ಧರ್ಮದಲಿ ನಾ ಹುಟ್ಟಿ ।
ಸ್ವಧರ್ಮ ಕರ್ಮವ
ರಿಷ್ಟವೆಂದರಿಯದಲೆ ಮನಮುಟ್ಟಿ ।
ಸಂಸಾರದೊಳು
ಸಾಕಷ್ಟು ಪಾಪವ ಮಾಡಿದೆನು ಖೊಟ್ಟಿ ।
ವ್ಯಸನೇಳರೊಳುಮತಿ
ಭ್ರಷ್ಟನಾಗಿ ತಿರುಗಿದೆನು ಘಟ್ಟಿ ।
ಬಲು ಕೆಡಕ ದೃಷ್ಟಿ
ಕಷ್ಟವನೇ ತೋರಿಸುವ
ಕರ್ಮಗಳಿಟ್ಟಣೆಯ ನೆರೆ
ಮುರಿಯ ಮನಸಿನ ದುಷ್ಟತನವನು
ಬಿಡಿಸು ಬೇಗನೆ
ದಿಟ್ಟ ಹಾರೂಗೇರಿ ಪುರದ ದೇವನೆ [*].

ಅಲಭೈರಿ ಮಲ್ಲಿಕಾರ್ಜುನ, ಪಾಂಡುರಂಗ, ಶ್ರೀಗುರುಚನ್ನವೃಷಭ, ಪ್ರಾಣೇಶ ಮುಂತಾದವರನ್ನು ಸ್ತುತಿಸಿರುವನು. ಅವನ ಕಾವ್ಯಕ್ಕೆ ಇಂಥದೇ ವಸ್ತು ಇರಬೇಕೇನೆಂದಿಲ್ಲ. ಕಂಡ ವಸ್ತುವಿನ ಬಗೆಗೆ ಕುಳಿತಲ್ಲಿಯೇ ಕವನ ಬರೆಯುವ ಆಶುಕವಿ ಅವನು.

ಡಾ. ಎಂ. ಬಿ. ನೇಗಿನಹಾಳ ಅಲಭೈರಿಯ ತತ್ವಪದಗಳ ಸಂಕಲನ ಹೊರತರಲು ಯೋಜಿಸಿದ್ದರು. ಆದರೆ ಕಾರಣಾಂತರಗಳಿಂದ ಅದು ಪ್ರಕಟಗೊಳ್ಳಲಿಲ್ಲ. ಅವರು ಈ ಕವಿಯ ಕುರಿತು ವಿದ್ವತ್‌ಪೂರ್ಣ ಲೇಖನ ಬರೆದು ಪ್ರಕಟಿಸಿರುವರು. ಈ ಲೇಖನದಲ್ಲಿ ಅವರು ಅಲಭೈರಿ ತತ್ವಪದಗಳಲ್ಲದೆ ರಿವಾಯತ್, ಲಾವಣಿ, ಗೀಗೀ (ಮರಾಠಿ ಓವಿ ಛಂದಸಿನಲ್ಲಿ ರಚಿಸಿದ ಕನ್ನಡ) ಅಭಂಗಗಳು ಮತ್ತು ಶಾಹೀರಕೀ (ಜೀಜೀ) ಪದಗಳು ಮೊದಲಾಗಿ ಹಲವು ಪ್ರಕಾರದ ಸಾಹಿತ್ಯ ರಚನೆ ಮಾಡಿದ್ದಾಗಿ ಹೇಳಿರುವವರು. ಅವೆಲ್ಲ ಇಂದು ದೊರೆಯುವುದು ಕಷ್ಟವಾಗಿದೆ. ಬೈಲಾಟಗಳನ್ನು ಕೂಡ ರಚಿಸಿ ತಾವು ಸ್ವತಃ ಆಡಿದ್ದಲ್ಲದೇ ಬೇರೆಯವರಿಂದಲೂ ಅವನ್ನು ಆಡಿಸುತ್ತಿದ್ದರಂತೆ. "ವೈರಾಗ್ಯ ವಿಜಯ, ವಿಧಿಲಿಖಿತ ಲೀಲೆ, ಕಮಲಾಕರ, ಶಂಕರಾರಂಭ, ರಾಧಾನಾಟ ಕಲ್ಲನಾಟ್ಯ (?) ಎಂಬ ಸುಮಾರು ಆರು ಬೈಲಾಟಗಳನ್ನು ಕನ್ನಡದಲ್ಲಿ ರಚಿಸಿದ್ದು ತಿಳಿದು ಬಂದಿದೆ. ತೆಲುಗಿನಲ್ಲಿ ಕೂಡಾ ಒಂದು ಬೈಲಾಟ ಬರೆದಿರುವುದಾಗಿ ಹೇಳುತ್ತಾರೆ"[*]. ಹೀಗೆ ವೈವಿಧ್ಯಪೂರ್ಣ ಸಾಹಿತ್ಯ ಸೃಷ್ಟಿಸಿದ ಅವಧೂತ. ಅಲಭೈರಿಯ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ.

೩.೧.೨ ಕವಿ ಕಲ್ಮೇಶ್ವರ :

ಶಿರಗೂರದ ಕಲ್ಮೇಶ್ವರ ಬಾಗೆನಾಡಿನ ಮತ್ತೊಬ್ಬ ತತ್ವಪದಕಾರ. ಊರು ಕೃಷ್ಣಾತೀರದ ಶಿರಗೂರು. ಅಲ್ಲಿಯ ಕೈವಲ್ಯ ಧಾಮದ ರೂವಾರಿ, ವಚನ ಹಾಗೂ ತತ್ವಪದಗಳನ್ನು ರಚಿಸಿರುವರು. ವಚನಾಂಕಿತ ಕಲೇಶ್ವರ. ಕೆಲವೆಡೆ ಕಲ್ಮೇಶ ಎಂದು ಬಳಸಿದ್ದಾರೆ.

ಇವರು ಕ್ರಿ. ಶ. ೧೮೬೮ ರಲ್ಲಿ ಹುಟ್ಟಿದ ಬಗ್ಗೆ ಮಾಹಿತಿ ಇದೆ. ಕಲಿತದ್ದು ೨–೩ನೇ ತರಗತಿ ಮಾತ್ರ. ಎತ್ತರದ ಆಕರ್ಷಕ ಶರೀರವನ್ನು ಹೊಂದಿದ ಇವರು ಸಂಘಜೀವಿಯಾಗಿದ್ದರು. ಅನಂತರ ಸರ್ಕಸ್ ಕಂಪನಿಯೊಂದನ್ನು ಕಟ್ಟಿ ನಷ್ಟ ಅನುಭವಿಸಿ ತಿರುಗುತ್ತಿದ್ದಾಗ ಉಜ್ಜಯನಿಯ ಸಿದ್ಧೇಶ್ವರ ಸ್ವಾಮಿಗಳು ಆತ್ಮಜ್ಞಾನವನ್ನು ಮಾಡಿಕೊಳ್ಳುವಂತೆ ಬೋಧಿಸಿದರು. ಆ ಮೇಲೆ ಇವರ ಒಲವು ಆಧ್ಯಾತ್ಮದ ಕಡೆ ತುಡಿಯಿತು. ಆತ್ಮಜ್ಞಾನಕ್ಕಾಗಿ ಸಾಧನೆಗೈದ ಕಲ್ಲಪ್ಪ ಕಲ್ಮೇಶ್ವರನಾಗಿ ಗುರುವಾದನು. ಇವರ ಶಿಷ್ಯ ಚಿಂಚಣಿ ತಾತ್ಯಾ ಹಾಡುಗಳನ್ನು ಸಂಗ್ರಹಿಸಿದ್ದಾನೆ. ಇವರು ಸಾವಿರಾರು ತತ್ವಪದ ರಚಿಸಿರುವರು. ಲಾವಣಿ, ಕರ್ಬಲ್ ಮೊದಲಾದ ಜನಪದಗೀತೆಗಳನ್ನು ರಚಿಸಿರುವರೆಂದು ಡಾ. ಎಂ. ಎಸ್. ಲಠ್ಠೆ ತಮ್ಮ ಜನಪದ ಕವಿ ಚರಿತೆಯಲ್ಲಿ ದಾಖಲಿಸಿರುವರು. ಅವರ ತತ್ವಪದಗಳು ಆಧ್ಯಾತ್ಮ ಚಿಂತನೆಯನ್ನು ತುಂಬಾ ಸರಳವಾಗಿ ತಿಳಿಸುತ್ತವೆ. ಈ ಪ್ರದೇಶದಲ್ಲಿ ಅವುಗಳನ್ನು ಭಜನೆಗೆ ಒಗ್ಗಿಸಿಕೊಳ್ಳಲಾಗಿದೆ.

ಸಂಕಲಿತ ಕೃತಿಗಳು :

೧. **ಶ್ರೀ ಗುರು ಗೀತಾಮೃತವು ಪಾರಾಯಣ**

೨. **ಪಾರಮಾರ್ಥ ಜ್ಞಾನ ಜ್ಯೋತಿ**

೩. **ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ**

೧. ಶ್ರೀ ಗುರು ಗೀತಾಮೃತವು ಪಾರಾಯಣ :

ಕಲ್ಮೇಶ್ವರಿಂದ ರಚನೆಗೊಂಡ ವಚನಗಳ ಪಾರಾಯಣ. ಇದರಲ್ಲಿ ಪಾರಾಯಣಕ್ಕೆ ಯೋಗ್ಯವಾದ ಸ್ತುತಿ ಪದ್ಯಗಳಿವೆ. ಇದರಲ್ಲಿ ತತ್ವ ಪದಗಳನ್ನು ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ೧೨೮ ಪದಗಳಿದ್ದು ಎರಡನೇ ಭಾಗದಲ್ಲಿ ೫೮ ಪದಗಳಿವೆ.

೨. ಪರಮಾರ್ಥ ಜ್ಞಾನ ಜ್ಯೋತಿ :

ಮೂವತ್ತಮೂರು ತತ್ವಪದಗಳನ್ನು ಪಾರಮಾರ್ಥ ಜ್ಞಾನ ಜ್ಯೋತಿ ಎಂಬ ಶೀರ್ಷಿಕೆಯಡಿಯಲ್ಲಿ ಶ್ರೀ ಅಲ್ಲಮ ಪ್ರಭುಮಹಾರಾಜರು ಸಂಕಲಿಸಿದ್ದಾರೆ. ಈ ಸಂಪಾದನೆ ತೀರ ಸಾಮಾನ್ಯವಾಗಿದ್ದು, ಎಲ್ಲ ಪದಗಳಿಗೂ ಟೀಕೆಯನ್ನು ಬರೆಯಲಾಗಿದೆ. ಈ ಟೀಕೆ ಮೂಲ ಕವಿಯದೋ ಅಥವಾ ಸಂಕಲನಕಾರರದೋ

ತಿಳಿಯದು. ಕಲ್ಮೇಶ್ವರ ಪದಗಳು ಸರಳ ಹಾಗೂ ಸುಂದರವಾಗಿದ್ದು, ದಿನನಿತ್ಯದ ರೂಪಕಗಳನ್ನೇ ಆಧ್ಯಾತ್ಮದ ಚರ್ಚೆಗೆ ದುಡಿಸಿಕೊಂಡಿವೆ. ಮನುಷ್ಯ ತನ್ನ ಜನ್ಮವನ್ನು ಸಾರ್ಥಕಗೊಳಿಸುವ ದಾರಿಯಲ್ಲಿ ಹೋಗದೆ ಭೋಗಕ್ಕೆ ಸೋತು ಜೀವನದ ಉದ್ದೇಶವನ್ನೇ ಕಡೆಗಣಿಸಿದ ಚಿತ್ರ ಇಲ್ಲಿದೆ.

ಏನ ಹಕ್ಕಿ ತಿನಸಿದ್ಯೊ ನೀ ತಮ್ಮಾ
ನಿನ್ನ ಸುಮ್ಮಚಾಕ್ರಿ ಇಟ್ಟಕೊಂಡೆ ನಾ ಸುಮ್ಮಾ

ನೆರಿಹೊಲದ ನಾರಿಮಾಲ ನಿನ್ನ ಪ್ರೇಮಾ
ಈ ಹಕ್ಕಿಮ್ಯಾಲ ಚಿತ್ತವಿಲ್ಲನಿಂದ ಖಾಯಮಾ

ಕಾಮ ಕ್ರೋಧವೆಂಬು ಐದ ಕಬ್ಬಕ್ಕಿ
ಕಾಳ ತಿಂದ ಹಾಳಮಾಡಿ ಬಿಟ್ಟು ಕಂಕಿ
ಚಿಂತಿ ಎಂಬು ಚಿಟಗುಬ್ಬಿ ಬ್ಹಾಳ ಬೆರಕಿ
ಒಳಗ ಹೊಕ್ಕಬಿದ್ದ ತೆನಿ ತಿತ್ತಕುಕ್ಕಿ

ಇಚ್ಛಾ ಎಂಬುವ ಲುಚ್ಛ್ಯಾ ಬುದ್ಧಿ ಕಾರಿಕೊಂಕಾ
ಅದನ ಯಾಕ ಮೆಟ್ಟ ಮಾಡಿದಿ ಸುಮಕಾ
ಹಕ್ಕಿ ಕರದ ಕಾಗಾಳಿ ನಿನ್ನ ಹೊಲಕಾ
ಬ್ಹಾಳ ತ್ರಾಸ ಕೊಡತಾವಪ್ಪಾ ನಿನ್ನ ಜೀವಕ್ಕಾ

ಗುರು ಕೊಟ್ಟ ಜ್ಞಾನ ಕವಣಿ ಎಲ್ಲಿ ಕಳದಿ
ನೀ ಅರವ ಗೆಟ್ಟ ಮರವಿನೊಳಗ ಹೊತ್ತಗಳದಿ
ಕವನಿ ಇದ್ದರ ಅಂಜತೈತಿ ಕರಿಕಾಗಿ
ಅದನ ಹುಡುಕ್ಯಾಡಿತಗೊಂಡ ಬಾರೊ ಲಗು ಹೋಗಿ

ಇಲ್ಲಿ ಐತಿ ಶಿರಗೂರ ಸಿಸ್ತಗ್ರಾಮಾ
ದೇವ ಕಲ್ಮೇಶ್ವರಗ ನಡಿಯುವ ನಿತ್ಯ ನಿಯಮಾ
ಭಾವದೊಳಗ ಹಿಡಿಯಪ್ಪಾ ಶಿವ ನಾಮ
ಬಿಟ್ಟ ಅಂಜಿ ಓಡತಾನ ಯಮಧರ್ಮ[೭].

ಪ್ರಸ್ತುತ ಪದ್ಯದಲ್ಲಿ ಹಕ್ಕಿ ಕಾಯುವ ಸಾಮಾನ್ಯ ದೃಶ್ಯವನ್ನು ಅತ್ಯಂತ ಪರಿಣಾಮಕಾರಿಯಾದ ರೂಪಕವಾಗಿಸಿ ಬಳಸಿಕೊಳ್ಳಲಾಗಿದೆ. ಹಕ್ಕಿ ಹೊಡೆಯಲು ಕವಣಿಬೇಕು. ಬದುಕಿನಲ್ಲಿ ಕಾಮ ಕ್ರೋಧಾದಿ

ಹಕ್ಕಿಗಳನ್ನು ಹಾರಿಸಿ ಮೋಕ್ಷಕ್ಕೆ ಬೇಕಾಗುವ ಬಿತ್ತುಗಳನ್ನು ತುಂಬಿಕೊಳ್ಳಲು ಗುರುಜ್ಞಾನದ ಕವಣಿಬೇಕು. ಮರೆವು ಜ್ಞಾನದ ಕವಣಿ ಕಸಿದುಕೊಳ್ಳುತ್ತದೆ. ಅದಕ್ಕಾಗಿ ಸದಾ ಅರಿವಿನಿಂದ ಬದುಕು ರಕ್ಷಿಸಬೇಕೆಂಬ ತತ್ವ ಈ ಪದದಲ್ಲಿದೆ. ಆಧ್ಯಾತ್ಮದಲ್ಲಿ ಗುರುವೇ ಗಂಡ, ಸಾಧಕನೆ ಹೆಂಡತಿ ಎನ್ನುವುದನ್ನು ಮನವರಿಕೆ ಆಗುವ ಹಾಗೆ ತಿಳಿಸಿದ್ದಾರೆ. ತನು, ಮನ, ಧನ, ಈ ಮೂರು ಸಂತೋಷದಿಂದ ದೇವನಿಗೆ ಒಪ್ಪಿಸಿ ಆರು ದುರ್ಗುಣಗಳನ್ನು ದೂರ ಮಾಡಿದರೆ ಮೋಕ್ಷ ಎನ್ನುತ್ತಾನೆ ಕಲ್ಮೇಶ್ವರ.

ಆತ ನಿನ್ನನು ಭೂತ ಬಿಡಿಸುವನು ಆ ರೀತಿ ಹೇಳಿ ನಿರ್ಗುಣ
ತೀರ್ಥ ಕುಡಿಸುವನು.
ಪಂಚಾಕ್ಷರವೊಂದು ಗುಳದಾಳಿ ಗಟ್ಟಿಯಾಗಿ ಕಟ್ಟಿಕೊಳ್ಳ
ಬಲ್ಲ ಮತ್ತೊದಿತನ ಪಡಿಯೆ ಕಲಸಿದ್ಧೇಶ್ವರನ ಕೂಡಿ [೯].

೩. ಜ್ಞಾನ ಒಂದ ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ :

ಕಲ್ಮೇಶ್ವರರ ಒಂದು ತತ್ವಪದದ ಹೆಸರೇ ಈ ಪುಸ್ತಕದ ಶೀರ್ಷಿಕೆ. ಅದು "ಜ್ಞಾನ ಒಂದ ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ". ಇದನ್ನು ಶ್ರೀ ಗುರುಪಾದ ವಾಳಕಿ ಸಂಕಲಿಸಿರುವರು ಮತ್ತು ಡಾ. ಪಿ. ಜಿ. ಕೆಂಪಣ್ಣವರ ಸಂಪಾದಿಸಿರುವರು.

ಇಡೀ ಸಂಕಲನದಲ್ಲಿ ಸಂಕಲಿತಗೊಂಡಿರುವ ಇಪ್ಪತ್ತಾರು ತತ್ವಪದಗಳು ವಸ್ತು ವಿಷಯದ ದೃಷ್ಟಿಯಿಂದ ಭಿನ್ನವಾಗಿದ್ದರೂ ಅವೆಲ್ಲವುಗಳ ಹಿಂದೆ ಇರುವ ಧ್ವನಿ ಒಂದೇಯಾಗಿದೆ. ಅಂದರೆ ಲೋಕದ ಹಿತರಕ್ಷಣೆ, ಅಜ್ಞಾನಿಗಳಿಗೆ ಸೂಕ್ತ ಮಾರ್ಗದರ್ಶನ. ಅತ್ಯಂತ ಸರಳ ಭಾಷೆಯನ್ನು ಬಳಿಸಿಕೊಂಡು ಕ್ಲಿಷ್ಟ ವಿಷಯಗಳನ್ನು ಅಲ್ಪಜ್ಞರಿಗೆ ತಿಳಿಸಿಕೊಟ್ಟ ಶ್ರೇಯಸ್ಸು ಕವಿಕಲ್ಮೇಶ್ವರರಿಗೆ ಸಲ್ಲಬೇಕು. ಇಂತಹ ವಿರಳಾತಿವಿರಳ ತತ್ವಪದಗಳನ್ನು ಸಂಕಲಿಸಿ ಕೊಟ್ಟ ಗುರುಪಾದ ವಾಳಕಿ ಇವರ ಶ್ರಮ ಸಾರ್ಥಕವಾಗಿದೆ.

ಶರೀರದ ಆತ್ಮದೊಳಗೆ ಪರಮಾತ್ಮ ಇರುವುದನ್ನು ತಿಳಿಸಿದ್ದಾರೆ. ವಿನಾಕಾರಣ ಬೇರೆ-ಬೇರೆ ದೇವರಗಳನ್ನು ಪೂಜಿಸುವುದನ್ನು ಖಂಡಿಸಿ ಜನರಲ್ಲಿಯ ಮೌಢ್ಯತೆಯನ್ನು ಹೊರ ಹಾಕಲು ಪ್ರಯತ್ನಿಸಿದ್ದಾರೆ. ಇಲ್ಲಿ ಯಾವುದು ಸತ್ಯ ಮತ್ತು ಶಾಶ್ವತವಲ್ಲ. ಈ ಸಂಸಾರ ಎನ್ನುವುದು ಮಾಯಾ ಬಜಾರ. ದೇವರು ಎಲ್ಲಿಯೂ ಇಲ್ಲ. ಆತ ನಮ್ಮ ಮನಸ್ಸಿನ ಭಾವನೆಗಳಲ್ಲಿ ತುಂಬಿಕೊಂಡಿದ್ದಾನೆ.

ಚಿದಾನಂದ ಬೆಳಕಿನೊಳು ಸದಾ ಇರುನು ಬಾರಾ ತಂಗಿ
ಮದಾ ಏರಿ ತಿರುಗುವದು ಇದು ಮಯಾ ಬಾಜಾರ
ಸುಂಟರಗಾಳಿ ಸುಳಿಯಂತೆ ಸುಳ್ಳ ವ್ಯವಹಾರ [೯].

ಚಿದಾನಂದ ಎಲ್ಲಿಯೂ ಇಲ್ಲ; ಆತ ನಮ್ಮ ಆತ್ಮದಲ್ಲಿಯೇ ಇರುವನು. ಹೊರಗೆ ಮಾನವ ಮಾಡಿದ ಕಲ್ಲು ಪೂಜೆ ಬರೀ ತೋರಿಕೆಗೆ ಅಷ್ಟೇ, ಕಾಶಿ ರಾಮೇಶ್ವರದಲ್ಲಿ ದೇವರಿಲ್ಲ. ತಿಳಿದ ನೋಡಿದರ ಮಾನವನ ಅಂತರಂಗವೇ ಒಂದು ಪುಣ್ಯಕ್ಷೇತ್ರ. ಅದನ್ನು ಬಿಟ್ಟು ಮತ್ತೇ ದೇವರು ಇರುವುದಿಲ್ಲ – ಎನ್ನುವುದನ್ನು ಕವಿ ಕಲ್ಮೇಶ್ವರ ಅತಿ ಸರಳವಾಗಿ ವಿವರಸಿದ್ದಾರೆ.

೩.೨ ದಾಖಲೆಗೊಳ್ಳದ ಜನಪದ ಕವಿಗಳು :

ಬಾಗೆನಾಡಿನಲ್ಲಿ ದಾಖಲಿತ ಜನಪದ ಸಾಹಿತ್ಯದ ಪ್ರಮಾಣ ಪ್ರತಿಶತ ಹತ್ತರಷ್ಟು, ದಾಖಲೆಗೊಳ್ಳದ್ದು ಪ್ರತಿಶತ ತೊಂಬತ್ತರಷ್ಟಿದೆ. ಜನಪದ ಕವಿಗಳ ದಾಖಲೀಕರಣವಾಗಲೀ ಇಲ್ಲವೇ ಜನಪದ ಸಾಹಿತ್ಯದ ಸಂಗ್ರಹವಾಗಲೀ ಅಷ್ಟಾಗಿ ನಡೆದಿಲ್ಲ. ಈ ಹಿಂದೆ ಹೇಳಿದಂತೆ ಪ್ರೊ. ಜ್ಯೋತಿ ಹೊಸೂರ ಈ ಭಾಗದ ತ್ರಿಪದಿಗಳನ್ನು 'ಬೆರಸಿ ಇಟ್ಟೀನ ಬೆಲ್ಲ ನೆನಗಡಲಿ'ಯಲ್ಲಿ ಹಾಗೂ ಒಡಪುಗಳನ್ನು 'ಹೆಸರ ಹೇಳ್ತೀನಿ ಒಡಪಕಟ್ಟಿ' ಕೃತಿಯಲ್ಲಿ ಸಂಗ್ರಹಿಸಿರುವರು. ಬಿ. ಎ. ಜಂಬಗಿಯವರ 'ಗೆಜ್ಜೆ ನುಡಿದಾವ' ಈ ನಾಡಿನ ತ್ರಿಪದಿಗಳ ಮತ್ತೊಂದು ಸಂಕಲನ. ಬಾಗೆನಾಡಿನಲ್ಲಿ ಲಾವಣಿ ಕವಿಗಳು ಅನೇಕ. ಡೊಳ್ಳಿನ ಪದ ಕಟ್ಟಿದವರು ಬಹಳ. ಇಲ್ಲಿಯ ನೂರಾರು ರಿವಾಯತ್ ಪದಗಳು ಇಂದಿಗೂ ಜನರ ನಾಲಿಗೆಯ ಮೇಲಿವೆ. ಲಾವಣಿ, ರಿವಾಯತ್, ಡೊಳ್ಳಿನ ಹಾಡು, ತತ್ವಪದ, ಭಜನೆ ಮುಂತಾದವುಗಳನ್ನು ದಾಖಲಿಸಿದರೆ ಹಲವು ಸಂಪುಟಗಳಾಗಬಹುದು. ಪ್ರಸ್ತುತ ಪ್ರಬಂಧದಲ್ಲಿ ಬಾಗೆಯ ಪ್ರಸಿದ್ಧ ಜನಪದ ಕವಿಗಳನ್ನು ಪರಿಚಯಿಸಲಾಗುತ್ತದೆ.

ಕವಿ ರಾಚೋಟಿ :

ಈತ ಬಾಗೆಯ ಅತ್ಯಂತ ಪ್ರಸಿದ್ಧ ಲಾವಣಿಕವಿ. ಈತನ ಊರು ರಾಯಬಾಗ ಸಮೀಪದ ಜಲಾಲಪುರ. ಇವನು ತ್ರಿಭಾಷಾ ಕೋವಿದ. ಕನ್ನಡ, ಮರಾಠಿ ಹಾಗೂ ಉರ್ದು ಭಾಷೆಗಳಲ್ಲಿ ನೂರಾರು ಲಾವಣಿಗಳನ್ನು ರಚಿಸಿರುವನು. ಒಂದೇ ಲಾವಣಿಯಲ್ಲಿ ಮೂರು ಭಾಷೆಗಳನ್ನು ಬಳಸಿ ಮೋಡಿ ಮಾಡಿದ್ದಾನೆ. ವಿಷಾದದ ಸಂಗತಿ ಎಂದರೆ ರಾಚೋಟಿಯ ಲಾವಣಿಗಳನ್ನು ಯಾರೂ ಸಂಗ್ರಹಿಸದಿರುವದು.

ರಾಚೋಟಿಯದು ಜಲಾಲಪುರದ ಚೌಗಲೇ ಮನೆತನ. ಇಂದಿಗೂ ಈ ಊರಲ್ಲಿ ಹಲವು ದಂತ ಕಥೆಗಳು ಪ್ರಚಲಿತದಲ್ಲಿವೆ. ಈತ ಕವಿ ಅಲಭೈರಿಯ ಸಮಕಾಲೀನ. ತಾನು ರಚಿಸಿದ ಲಾವಣಿಗಳನ್ನು ಹಾಡುತ್ತ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಮಹಾರಾಷ್ಟ್ರದ ತುಂಬ ತಿರುಗಿದನು. ಕೇವಲ ಕನ್ನಡದಲ್ಲಿ ಮಾತ್ರವಲ್ಲ ಕೊಲ್ಲಾಪುರದವರು ರಾಚೋಟಿಯ ಲಾವಣಿಗಳನ್ನು ಹಾಡಿ ಹೊಗಳುತ್ತಾರೆ. ಆಗ ಜಲಾಲಪುರವು ಕೊಲ್ಲಾಪುರ ಸಂಸ್ಥಾನದಲ್ಲಿತ್ತು. ಅದನ್ನು 'ಕರವೀರ ನಗರಿ' ಎಂದು ಕರೆಯುತ್ತಿದ್ದರು. ಕವಿ ರಾಚೋಟಿ ತಾನು 'ಕರವೀರ ನಗರಿ' ಜಿಲ್ಲೆಗೊಳಪಟ್ಟ ಜಲಪುರದವನೆಂದು ತನ್ನ ಪದಗಳಲ್ಲಿ ಹೇಳಿಕೊಂಡಿದ್ದಾನೆ.

ರಾಚೋಟಿಯ ಲಾವಣಿಗಳು ನಾಡಿನ ತುಂಬಾ ಹರಡಿವೆ. ಈಗಿನ ಲಾವಣಿಕಾರರು ಅವನನ್ನು ಅತ್ಯಂತ ಗೌರವದಿಂದ ಸಂಭೋದಿಸುತ್ತಾರೆ. ಈತನನ್ನು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ. ಉದಾಹರಣೆಗಾಗಿ ಅವನ ಒಂದು ಲಾವಣಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಉಜ್ಜಯನಿ ನಗರದಾಗ ವಿಕ್ರಮ ಅರಸಾ ಇದ್ದಾನ ಪುಣ್ಯವಂತಾ ।
ಪಲ್ಲ ಃ ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವನ ಸುತ್ತ ।

ವಿಕ್ರಮ ಅರಸ ವಿನೋದ ಮಾಡತಿದ್ದ ತನ್ನ ಸದರದಾಗ ।
ಅಂತರದಿಂದ ಶನಿ ಹೋಗತಿತ್ತ ಅದ ಯಾಳೆದಾಗ ॥
ಹೇಳಿಕೇಳಿಂದ ಅಂವ ಯಾಳೇ ಸಾಧಿಸಿ ಬಂದಾನ ಪ್ಯಾಟ್ಯಾಗ ।
ಕುದರಿ ಮಾರಲಾಕ ತುಗೊಂದ ಬಂದಿದ್ದ ಶನಿ ಸೌದಾಗರ ಸೋಗ ।

ಚಾಲಃ

ಚೆಲು ಪಸಂದ ನೋಡರಿ ಕುದರಿ । ವಿಕ್ರಮ ಕುಂತಾನ ಏರಿ ।
ಅಂವ ತಿರುವತಾನ ಏಳ ಪೆರಿ । ಆ ಕಸಕ ಹೋತ ಹಾರಿ ।

ಕೂಡ ಪಲ್ಲಃ

ಅಂತರ ಕುದರಿ ಮಂತ್ರದಿಂದ ಮಾಡಿತ್ತ ಗಮ್ಮತ್ತಾ ।
ಸಾಡೇ ಸಾತ ಒಂದ ಶನಿ ಕಾಡತಿತ್ತ ಅವನ ಜೀವದ ಸುತ್ತಾ ॥

ಚೌಕ–೧

ಮಾಯದ ಕುದರಿ ಮ್ಯಾಗಿನ ಅರಸ, ಬಿದ್ದಿದಾನ ಕೆಳಗ ।
ಎತ್ತ ನೋಡತಿ ಹೊತ್ತ ಕಾಣವಾತ ಸುದ್ದಿ ಇಲ್ಲದ್ಹಂಗ ॥
ಅಡವಿ ಆರ್‍ಯಾನ, ಗಿಡ ಮಂಜನಾ ಘೋರ ವನದಾಗ ।
ಎತ್ತ ನೋಡತಿ ಅತ್ತ. ಕತ್ತಲ ಕಾಣತೈತಿ ಸುದ್ದಿ ಇಲ್ಲದಾಂಗ ॥
ತಿರಗುತ ತಿರಗುತ ಅರಸ ಬಂದಾನು ತಾಮಲಿಂಗಪುರದಾಗ ।
ಚಿಂತಿ ಮಾಡುತ ಬಂದ ಕುತ್ತ ಒಬ್ಬ ಸಾವಕಾರನ ಅಂಗಡ್ಯಾಗ ॥

ಚಾಲ ಃ

ಅಂಗಡ್ಯಾಗ ಬೆಳತರಿ ರೊಕ್ಕ । ಸಾವಕಾರ ತಿಳದ ತನ್ನ ಮನಕ ॥
ಇವನ ಕಾಲಗುಣಾ ಒಳೇ ಠಿಕಾ । ಕರದ ಓದಾನ ಅವನ ಊಟಕ ॥

ಕೂಡ ಪಲ್ಲಃ

ಸಾವಕಾರ ತನ್ನ ಮಗಳನ ಕೊಡುವುದು ಮಾಡಿದ್ದ ಮಸಲತ್ತ ।
ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವದ ಸುತ್ತ ।

ಚೌಕ–೨

ಮಗಳ ಅಂತಾಳ ಮನಸ ನೋಡಬೇಕ ಇಂದಿನ ರಾತ್ರ್ಯಾಗ ।
ಚೆಂದ ಆಗಿ ಆನಂದಿಲೇ ಹೋಗ್ಯಾಳ ಅರಸನ ಖೋಲೆದಾಗ ।
ಹೋಗಿ ಎಬ್ಬಿಸತಾಳ ವಿಕ್ರಮ ಅರಸಗ ನಿದ್ದಿ ಹತ್ತಿತ್ತ ಆಗ ।

ಚಂದ್ರಹಾರ ಗೂಟಕ ಹಾಕಿ ಮಲಗಿದಾಳ ಕೆಳಗ ।
ಎಚ್ಚರಿಕೆ ಆಗಿ ನೋಡಿದ ವಿಕ್ರಮ ಎದ್ದಿದಾನ ಆಗ ।
ಯಾರ ಹೆಣ್ಣ ಇಲ್ಲ್ಯಾಕ ಬಂದೈತಿ, ಹಾರ ಗೂಟದ ಮ್ಯಾಗ ।

ಚಾಲः

ಗ್ವಾಡಿ ಮ್ಯಾಲ ಬರದ ಚಿತ್ರ ಜೀವ ತುಂಬಿ ನುಂಗಿತೋ ಹಾರ ।
ರಾಜಾ ಆಗಿದಾನೋ ದಿಲಗೇರಾ, ಮುಂದ ಆಗುದ ಕೇಳರಿ ಹುನ್ನಾರ ।

ಕೂಡ ಪಲ್ಲः

ಬೆಳಗ ಆದ ಮ್ಯಾಲ ಬಾಯ ಮಾಡತಾಳ ಹಾರ ಕೊಡರಿ ಅಂತಾ ।
ಸಾಡೇ ಸಾತ ಒಂದ ಶನಿ ಕಾಡತಿತ್ತ ಅವನ ಜೀವನ ಸುತ್ತಾ ।

ಚೌಕ–೩

ಊರ ಅರಸಗ ಹೋಗಿ ಪಿರ್ಯಾದಿ ಆದಾನ ಸಾವಕಾರ ।
ಪೋಲೀಸ ಪೋಜಾರ, ಸಿಪಾಯಿ ಬಡಿಯತಾರ ಬಾಳ ಮಾಡಿ ಜಬರಾ ॥
ಕಬಲ ಆಗಲಿಲ್ಲ ಕೈಕಾಲ ಕಡದ ಮಾಡ್ಯಾರ ಚೂರಾ ।
ಊರ ಬಿಟ್ಟ ದೂರ ಒಗದ ಬಂದಾರೋ, ವಿಕ್ರಮ ಆದೋ ಜೇರಾ ॥
ಅದ ಊರೀಗಿ ಬರತಿದ್ದಳ ಗಾಣೀಗೇರ ಪೋರಿ । ಉಜ್ಜಯನಿ ತವರೂರ ।
ಕೂನಾ ಹಿಡದ ತನ್ನ ಮಾವಗ ಹೇಳಿ ಮನಿಗೆ ತಂದಾಳ ಸುಂದರಾ ॥

ಚಾಲः

ಆ ಊರ ಅರಸನ ಮಗಳ ರೇಮವ್ವನ । ಆಕಿ ಹಾಕಿದಾಳ ಅಲ್ಲಿ ಪಣಾ ।
ದೀಪರಾಗ ಮಾಡಿದವನ । ನಾ ಆಗತೇನ ಲಗ್ನ ॥

ಕೂಡ ಪಲ್ಲः

ದೀಪರಾಗ ಮಾಡಿದ ವಿಕ್ರಮ । ಗಾಣಿಗ್ಯಾರ ಗಾಣದ ಮ್ಯಾಲ ಕುಂತ ।
ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವನ ಸುತ್ತ ।

ಚೌಕ–೪

ಬೆಂಕಿ ಇಲ್ಲದ ದೀಪ ಹತ್ತಿದ್ದು ಪಣಾಯಮಕ ಶುದ್ಧ ।
ಸ್ವಾರ ಸಿಪಾಯ್ಯಾರ ಹುಡುಕುತ ಬಂದಾರ ಗಾಣೀಗೇರ ಮನಿಮುಂದ ॥
ಲೋದನ ಓದ ಮದವಿ ಮಾಡಿದಾನ ಶನಿ ದೇವರ ಬಂದ ।
ಕೈಕಾಲ ಚಿಗತ ವಿಕ್ರಮ ನಿಂತಾನ ಕೈ ಮುಗದ ॥
ಸಾವಕಾರನ ಮನಿಗೆ ಹ್ವಾದಾರು । ಚಿತ್ರ ನಿಂತಿತ್ತ ಎದ್ದ ।
ನುಂಗಿದ ಹಾರ ಉಗುಳುದ ನೋಡಿ ಆದಾರೋ ಆನಂದ ॥
ಸಾವಕಾರ ತನ್ನ ಮಗಳನ ಕೊಟ್ಟ ಲಗ್ನಾ ಮಾಡಿದ್ದಾ ।
ಇಬ್ಬರು ಹೆಂಡಿರನ ತಗೊಂಡ ವಿಕ್ರಮ ಉಜ್ಜಯನಿ ಊರಿಗೆ ಬಂದ ॥

ಚಾಲ :

ಹಿಂಗೈತಿ ಶನಿಯ ಮಹಾತ್ಮಾ । ಕೇಳಿದವರಿಗಿ ಸ್ವಾರ್ಥಕರಿ ಜಲ್ಮಾ ।
ಜೀವಪ್ಪ ರುದ್ರ ನಿಯಮು । ತುರಾ ಹಚ್ಚಿ ಹಾಡಿದಾರ ಕಲಮಾ ।

ಕೂಡ ಪಲ್ಲ:

ಕವಿ ರಾಚೋಟಿ ಕವಿಯ ಕೊರಳಾಗ । ಕಂಠಿಯ ತಾಯತಾ ।
ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವನ ಸುತ್ತ ॥

ಪ್ರಸ್ತುತ ಲಾವಣಿ ಆತನ ಭಾಷೆ, ಭಾವ, ಅಲಂಕಾರ, ಪ್ರಾಸ ವಿಲಾಸದ ಗತ್ತುಗಳನ್ನು ನಮ್ಮ ಗಮನಕ್ಕೆ ತಂದು ಕೊಡುತ್ತದೆ.

ಮೀರಾಸಾಬ ಮುಲ್ಲಾ : (ಕ್ರಿ. ಶ. ೧೯೨೨–೨೦೦೦)

ಈತ ಕುಡಚಿಯ ಸಮೀಪದ ಪರಮಾನಂದವಾಡಿಯವನು. ತಂದೆಯ ಹೆಸರು ಶಿರಾಜಸಾಬ. ಆಧ್ಯಾತ್ಮ ಜೀವಿಯಾಗಿದ್ದ ಇವನು ತತ್ವಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದನು. ಇವನು ಸ್ವತ: ತತ್ವಪದ ಹಾಗೂ ರಿವಾಯತಗಳನ್ನು ರಚಿಸಿ ಹಾಡುತ್ತಿದ್ದನು. ಇವನ ಪದಗಳನ್ನು ತಾವು ಕೇಳಿರುವುದಾಗಿ ಡಾ. ಎಂ ಎಸ್. ಲಠ್ಠೆ ದಾಖಲಿಸಿದ್ದಾರೆ.

ಮೀರಾಸಾಬನ ಉದ್ಯೋಗ ಒಕ್ಕಲುತನ. 'ಮೀರಾ ಮುಲ್ಲಾ' ಈತನ ಮುದ್ರಿಕೆ. ಈತ ತತ್ವಪದ, ಲಾವಣಿ, ಸ್ತೋತ್ರ ಪದಗಳನ್ನು ರಚಿಸಿದ್ದಾನೆ. ಈತ ಬ್ರಹ್ಮಾನಂದ ಶಿವಯೋಗಿಗಳ ಪ್ರೇರಣೆಯಿಂದ ಪದ ಬರೆದನು. ಈತನ ಅನೇಕ ಪದಗಳ ಧ್ವನಿಸುರುಳಿ ಬಿಡುಗಡೆಗೊಂಡಿವೆ. ಅದರಲ್ಲಿ ಬ್ರಹ್ಮಾನಂದ ಶಿವಯೋಗಿಗಳ ಭಕ್ತಿಗೀತೆಗಳು ಮತ್ತು ಇನ್ನೂ ಅನೇಕ ಪದಗಳಿವೆ. ಈತನ ಪದಗಳು ಸಂಕಲಿತಗೊಂಡು ಕೃತಿರೂಪದಲ್ಲಿ ಪ್ರಕಟಗೊಂಡಿಲ್ಲ. ಶರೀಫರಂತೆ ಈ ಭಾಗದಲ್ಲಿ ಇವರ ಪದಗಳನ್ನು ಹಾಡುತ್ತಾರೆ.

ಮೀರಾಸಾಬ ಮುಲ್ಲಾ ತನ್ನ ಹಾಡುಗಳ ಮೂಲಕ ಹಿಂದೂ–ಮುಸ್ಲಿಂ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದನು. ಪರಮಾನಂದವಾಡಿಯ ಶ್ರೀ ಗುರುದೇವ ಆಶ್ರಯದಲ್ಲಿ ಈಗಲೂ ಈತನ ಹಾಡುಗಳು ನಿನದಿಸುತ್ತವೆ.

ಇಲ್ಲಿ ಆತನ ಒಂದು ಸ್ತೋತ್ರ ಪ್ಧದ, ರಿವಾಯತ್ ಪದದ ಕೆಲಭಾಗಗಳನ್ನು ಉದಾಹರಿಸಲಾಗಿದೆ.

೧) **ಶ್ರೀ ಗುರುದೇವ ಬ್ರಹ್ಮಾನಂದ ಸ್ತೋತ್ರ ಪದ:**

ಶರಣೆಂದು ಕೈ ಮುಗಿವೆ ಕರುಣೆಯಾಗಲಿ
ಬ್ರಹ್ಮನಂದ ಹರಸೆಮಗೆ ಪರಮಾನಂದವಾಗಲಿ ।
ಪರಮಾನಂದವಾಗಲಿ ॥

ಸಂಸಾರದಿ ಭವದಿ ಬೆಂದು ಶರಣು ಬಂದೆನು
ಸಂಸಾರದಿ ಪಾಪ ಕಲಹದಲಿ ಸೋತೆನು
ನಿನ್ನ ಜ್ಞಾನ ತೇಜದಿಂದ ಧಾರೆ ನೀಡು
ಮನವ ಶುಚಿಯನು ಮಾಡು

೨) ರಿವಾಯ್ತು ಪದ :

ನಮೋ ನಮಸ್ಕಾರ ಸ್ವಾಮಿ ಪಾದಕ
ರಿವಾಯ್ತಿ ಹೇಳಿವ್ರೀ ಕೇಳ ಒಂದಾ
ದಯಾ ಇರಲಿ ನಮ್ ಗುರುವಿಂದಾ

ದೇಹದೊಳಗ ಮೂರನೂರಾ ಅರವತ್ತು ಅದು ಹೇಳಿ ಐದಾನ ಚಂದಾ
ಅದರ ಹೆಸರ ಹೇಳ ಬೇಕ ಒಂದೊಂದಾ

ಶೇಖ ಮೀರಾಸಾಬ ನಮ್ ವಸ್ತಾದ
ವೈರಿಗೆ ಹಾಕಂದ ಮೂಗದಾನ
ಸೂಜಿದಾರ ಪೋಣಿಸಿ ತಂದ.

ಬಾಬಾಜಿ ಜಮಾದಾರ :

ಈತನ ಊರು ದಿಗ್ಗೇವಾಡಿ. ಇದನ್ನು ಶಾಸನಗಳಲ್ಲಿ ದಿಗ್ಗಜವಾಡ ಎಂದು ಕರೆಯಲಾಗಿದೆ. ಜಲಾಲಪುರ ಹಾಗೂ ದಿಗ್ಗೇವಾಡಿ ಕೃಷ್ಣಾತೀರದ ಜೋಡಿ ಗ್ರಾಮಗಳು.

ಬಾಬಾಜಿ ಜಮಾದಾರ ಮುಸ್ಲಿಂ ಧರ್ಮದವನು. ಲಾವಣಿ ಹಾಗೂ ರಿವಾಯತ ಪದಗಳನ್ನು ರಚಿಸಿರುವನು. ಕವಿ ರಾಚೋಟಿಯ ಸಮಕಾಲೀನ. ಆದರೆ ರಾಚೋಟಿಯಷ್ಟು ಪ್ರತಿಭಾವಂತನಲ್ಲ. ಪ್ರಾಯಶ: ಈ ಕಾರಣದಿಂದಲೇ ಈತನ ಹಾಡುಗಳು ಸಿಗುತ್ತಿಲ್ಲವೆಂದು ಅನಿಸುತ್ತದೆ.

ರಾಚಯ್ಯ :

ಈತ ರಾಚಯ್ಯ ಹಿರೇಮಠ. ಈ ನಾಡಿನ ಇನ್ನೊಬ್ಬ ಜನಪ್ರಿಯ ಜನಪದ ಕವಿ. ಈತನ ಕವಿತ್ವದ ಕುರಿತು ಜನರು ಉತ್ಪ್ರೇಕ್ಷಿಸಿ ಹೇಳುವರಾದರೂ ವೈಯಕ್ತಿಕ ವಿವರಗಳು ಹಾಗೂ ಪದಗಳು ಲಭ್ಯವಿಲ್ಲ.

ಯಮುನಪ್ಪ ಚಲವಾದಿ :

ಯಮುನಪ್ಪ ಚಲವಾದಿ ನಿಡಗುಂದಿಯವನು. ಈತನ ಹೆಸರಿನ ಉಲ್ಲೇಖವನ್ನು ಹೊರತು ಪಡಿಸಿ ಬೇರಾವ ಸಂಗತಿಗಳು ತಿಳಿಯುವುದಿಲ್ಲಾ. ಈತ ಲಾವಣಿ ಹಾಗೂ ರಿವಾಯತ ಪದಗಳನ್ನು ರಚಿಸಿರುವುದಾಗಿ ಹೇಳುವರು.

ರಾಣಬಾ ಕದಮ್ :

ಈತ ಹಿಡಕಲ್ಲ ಗ್ರಾಮದವನು. ಲಾವಣಿ, ಕರ್ಬಲ್, ಡೊಳ್ಳಿನ ಹಾಡುಗಳನ್ನು ರಚಿಸಿದ್ದಲ್ಲದೆ ಬಯಲಾಟಗಳನ್ನು ಬರೆದಿದುದಾಗಿ ಹೇಳುವರು. ಈತ ಸ್ವಾತಂತ್ರ್ಯ ಹೋರಾಟಗಾರ ಸ್ವಾತಂತ್ರ್ಯ ಸಂಗ್ರಾಮದ ಆ ಕಾಲದಲ್ಲಿ ಚಳುವಳಿಗೆ ಪ್ರೇರಣೆ ನೀಡುವ ಅನೇಕ ಪದಗಳನ್ನು ರಚಿಸಿರುವನು.

ಬಾರೋ ಚದುರಾ
ಹೇಳುವೆ ಹಿಂದೂಸ್ತಾನದ ಚಾರಿತ್ರಾ
ನಮಗೆ ಇಲ್ಲಾ ಸ್ವಾತಂತ್ರ
ಕಾಲ ಕೇದ್ರಿ ರಾಜ್ಯ ಆಳ್ಯರ
ಮಂಗ್ಯಾ ಇಂಗ್ರಜರಾ

ಗ್ರಾಮ ಹಿಡಕಲ್ಲ
ಪತ್ರೀಶನ ವರದ ಭರಪೂರ
ಮಂದಮತಿ ರಾಣು
ಹೇಳಿದ ಇದರ ವಿಸ್ತಾರ.

ಈತ ಹಿಡಕಲ್ಲಿನ ಬಲಭೀಮನ ಮುದ್ರಿಕೆಯಲ್ಲಿ ಪದಗಳನ್ನು ರಚಿಸಿದ್ದಾನೆ. ಒಮ್ಮೆ ವಿಜಾಪೂರದಲ್ಲಿ ಮೂರು ರಾತ್ರಿ, ಮೂರು ಹಗಲು ಅಖಂಡವಾಗಿ ಹಾಡಿ ಕಟ್ಟಿದ ಬೆಳ್ಳಿ ಕಡಗ ಬಿಚ್ಚಿ ತಂದನೆಂದು ಅವನ ಮಗ ಕಥಿಸುತ್ತಾನೆ. ಹಿಡಕಲ್ಲಿನಲ್ಲಿ ಈತ ರಚಿಸಿದ ಅನೇಕ ಪದಗಳು ಇಂದಿಗೂ ಪ್ರಚಲಿತದಲ್ಲಿವೆ.

ಸ್ವಾತಂತ್ರ ಸಂಗ್ರಾಮದ ಸಂದರ್ಭದಲ್ಲಿ ಹಿಡಕಲ್ಲ ಗ್ರಾಮ ರಾಯಬಾಗ ತಾಲೂಕಿನಲ್ಲಿಯೇ ಹೆಚ್ಚು ಕ್ರಿಯಾಶೀಲವಾಗಿತ್ತು. ಈ ಭಾಗದಲ್ಲಿ ಸ್ವಾತಂತ್ರ್ಯದ ಕಿಚ್ಚು ಹತ್ತಿದ್ದೆ ಹಿಡಕಲ್ಲದಲ್ಲಿ. ಇಲ್ಲಿಯ ಇಮಾಮಸಾಬ ಮುಲ್ಲಾ ಒಂದು ಸಂದರ್ಭದಲ್ಲಿ ಜಿಲ್ಲೆಯ ಹೋರಾಟದ ಮುಂಚೂಣಿಯಲ್ಲಿದ್ದನು. ಇವನೊಂದಿಗೆ

ಹಿಡಕಲ್ಲಿನ ಒಂದು ತಂಡವೇ ಮಾತೃಭೂಮಿಗಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧಗೊಂಡಿತ್ತು. ರಾಣಾ ಕದಮ್ ಅವರ ಪದಗಳಲ್ಲಿ ಹಿಡಕಲ್ಲಿನ ಸ್ವಾತಂತ್ರ್ಯ ಪ್ರೇಮಿಗಳ ಹೋರಾಟದ ಚಿತ್ರ ಸ್ಪಷ್ಟವಾಗಿ ಮೂಡಿದೆ.

ಹಿಡಿದಾರೋ ಹಿಡಕಲ್ಲ ಇಮಾಮುನಾ
ಬಡಿಗೇರ ಭೀಮು, ಕಂಕಣವಾಡಿ ರಾಮುನ್ನಾ
ಅವರಿಂದ ಹಿಡಕಲ್ಲ ಉದ್ಧರನಾ
ಸ್ವರಾಜ ತಗೊಂದಾರೋ ಹಾಕಿ ಪನಾ.

ಇಮಾಮಸಾಬ ಮುಲ್ಲಾ ಅವರ ಹೆಸರು ದಿಲ್ಲಿಯವರೆಗೂ ವ್ಯಾಪಿಸಿತ್ತು. ಇವನು ತೀರಿಕೊಂಡಾಗ ದಿಲ್ಲಿಯಲ್ಲಿ ಇವನಿಗಾಗಿ ಶೋಕ ಸಭೆ ಹಮ್ಮಿಕೊಂಡಿತ್ತೆಂದು ಹೇಳಲಾಗುತ್ತದೆ.

ಯಲ್ಲಪ್ಪ ಗುಳೇದಾರ :

ಈತ ಬಾಗೆನಾಡಿನ ಯಲ್ಪಾರಟ್ಟಿಯವನು. ಈತನ ಉದ್ಯೋಗ ಒಕ್ಕಲುತನ, ಇವನು ಡೊಳ್ಳಿನ ಹಾಡುಗಳ ಮೇಳ ಮಾಡಿಕೊಂಡಿದ್ದನು.

ಗುರು ಆರ್ಯಾಣ ಸಿದ್ಧನ ಶಿಷ್ಯ ಯಲ್ಲಪ್ಪ
ಕವಿ ಮಾಡಿ ನಮಗ ಅವ ಹೇಳಿದ್ದನೋ
ಕಲಿಯೊ ತಮ್ಮ ನೀ ತೆಲಿಯ ಕೆಳಗ
ಏಕಲಾಖ ಮಾಡಿದ್ದ ಕಲಿ

ಈತ ಅಕ್ಷರ ಬಲ್ಲವನಾಗಿರಲಿಲ್ಲ, ಬರಿ ನೆನಪಿನಲ್ಲಿಯೇ ಹಾಡು ದಾಖಲಿಸಿದ್ದನು. ಈಗ ಸಿದ್ರಾಮ ಲಾಳಿ, ಅದ್ರಶ್ಯಪ್ಪ ಮೆಟಗುಡ, ದಾನಪ್ಪ ಗುಳೇದಾರ ಮುಂತಾದವರು ಹಾಡುತ್ತಾರೆ.

ಸಿದ್ರಾಮ ಲಾಳಿ :

ಈತ ಯಲ್ಪಾರಟ್ಟಿಯವನು. ಈತನ ಓದು ೪ನೇ ತರಗತಿ. ಉದ್ಯೋಗ ಕುರಿಕಾಯುವದು. ಈತನ ವಯಸ್ಸು ೬೦. ಈತನು ಡೊಳ್ಳಿನ ಪದ ಸ್ವತ ರಚಿಸಿ ಹಾಡುತ್ತಾನೆ.

ತಂದಿನ ಬಿಡಬ್ಯಾಡೊ ತಮ್ಮ
ತಾಯಿನ ಮರಿಬ್ಯಾಡೊ
ತಾಯಿ–ತಂದಿನ ಮರತ ನಡದರ
ಆಗುವುದಿಲ್ಲೋ ಪಾಡೊ

—————————————

ಆಧುನಿಕ ವಿಷಯಗಳನ್ನು ಸೇರಿಸಿ ಪದಮಾಡುವದರಲ್ಲಿ ಪ್ರವೀಣ. ಈತ ಗುರುವಿನ ಗೌರವಕ್ಕಾಗಿ ತನ್ನ ಹಾಡುಗಳಿಗೆ ತನ್ನ ಮುದ್ರಿಕೆ ಹಾಕಿಲ್ಲ.

ಕವಿ ಸಿದ್ಧಪ್ಪ ಮಗದುಮ್ಮ :

ಈತ ಹಿಡಕಲ್ಲದ ಮತ್ತೊಬ್ಬ ಜನಪದ ಕವಿ. ಈತ ಗತಿಸಿ ೪೦ ವರ್ಷಗಳು ಕಳೆದಿವೆ. ಅವನು ನೂರಕ್ಕೂ ಹೆಚ್ಚು ಪದಗಳನ್ನು ರಚಿಸಿರುವುದಾಗಿ ಹೇಳುವರು. ಅವನು ದುಂದುಮಿ(ಹೋಳಿ) ಪದಗಳನ್ನು ರಚಿಸಿದ್ದಾನೆ.

ಲಕ್ಕಣ್ಣ ಘಂಟಿ :

ಇವನು ಡೊಳ್ಳಿನ ಹಾಡಿನ ಕವಿ. ಹದಿನೈದು ವರ್ಷಗಳ ಕಾಲ ಡೊಳ್ಳಿನ ಮೇಳವನ್ನು ಕಟ್ಟಿ ಹಾಡುತ್ತ ತಿರುಗಿದನು. ಇವನ ಹಾಡುಗಳನ್ನು ಲಗಮಣ್ಣ ಘಂಟಿ, ಧೂಪದಾಳ ಸಹೋದರರು ಹಾಡುತ್ತಾರೆ.

ಹಂದಿಗುಂದ ವೀರಭದ್ರಪ್ಪ ತೇರದಾಳ :

ನಾಡು–ನುಡಿ–ಸಂಸ್ಕೃತಿಯ ಕುರಿತು ಲಾವಣಿಗಳನ್ನು ರಚಿಸಿರುವರು. ಸಂದರ್ಭನುಸಾರವಾಗಿ ಲಾವಣಿ ಕಟ್ಟುವುದರಲ್ಲಿ ನಿಷ್ಣಾತರು. ನೂರಾರು ಪದಕಟ್ಟಿ ಹಾಡಿದ್ದಾರೆ. ಕುಟುಂಬ ಕಲ್ಯಾಣ, ಶಿಕ್ಷಣ ಅಭಿಯಾನ, ಏಡ್ಸ ಜಾಗೃತಿ ಮುಂತಾದ ಜಾಥಾಗಳಲ್ಲಿ ಲಾವಣಿ ಕಟ್ಟಿ ಹಾಡುವುದು ಅವರ ಹವ್ಯಾಸ.

ಏಡ್ಸ್ ರೋಗ ಬಂದೈತಿ
ಬಲು ಮಂದಿನ ಒಯ್ತು
ಹರೆಯದವರಿಗೆ ತಿಳಿಸಿ ಹೇಳುವ
ಕೇಳಿರಿ ಕವಿಮಾನ.

ಮನಸ ಗಟ್ಟಿ ಹಿಡಿಯಬೇಕ
ಅದಕ ಮುಗದಾನ ಹಾಕಬೇಕ
ಮನ ಉಡಾಳ ದನ
ಹತ್ತಬ್ಯಾಡ್ರಿs ಅದರs ಬೆನ್ನ
ತಿಳಿದ ನೋಡಬೇಕ.

ಇವರು ಕಲಿತದ್ದು ಕನ್ನಡ ಆರನೇ ತರಗತಿ. ಉದ್ಯೋಗ ಒಕ್ಕಲುತನ. ಹವ್ಯಾಸ ಹಾಡುಗಾರಿಕೆ. ಡಪ್ಪು ಹಿಡಿದು ಸಭೆ ಸಮಾರಂಭಗಳಲ್ಲಿ ಹಾಡಲು ನಿಂತರೆ ಎಲ್ಲರನ್ನು ಆಕರ್ಷಿಸುವ ವ್ಯಕ್ತಿತ್ವ ಇವರದು.

ಸಾಕs ತಂಗಿ
ಹಡಿಯುವುದು ಇನ್ ಸಾಕ
ಈಗ ಮನೆಯೊಳಗಿರುವ
ಎರಡ ಮಕ್ಕಳನs ಸಾಕ.

ಮಿತ ಸಂತಾನದ ಕುರಿತು ವಿವರಿಸುವ ಈ ಪದದಲ್ಲಿಯ 'ಸಾಕ' ಪದದ ಅರ್ಥ ವೈವಿಧ್ಯತೆ ಗಮನಿಸುವಂಥದ್ದು.

೧೯೩೬ರಲ್ಲಿ ಜನಿಸಿರುವ ಇವರಿಗೆ ಈಗ ೭೩ ವರ್ಷ ವಯಸ್ಸು. ಸರಕಾರದ ಯಾವುದೇ ಧನ ಸಹಾಯ ಪಡೆಯದೆ ಜನಪದ ಸೇವೆಯಲ್ಲಿ ತೊಡಗಿಕೊಂಡಿರುವರು. ಆದರೆ ಇವರ ಪದಗಳು ಕೃತಿ ರೂಪದಲ್ಲಿ ಸಂಕಲಿತಗೊಂಡಿಲ್ಲ.

ಪರಿಮಿತ ಅವಧಿಯ ಕ್ಷೇತ್ರಕಾರ್ಯದಲ್ಲಿ ನನ್ನ ಗಮನಕ್ಕೆ ಬಂದ ಬಾಗೆನಾಡಿನ ಬಹುಪಾಲು ಜನಪದ ಕವಿಗಳನ್ನು ಇಲ್ಲಿ ದಾಖಲಿಸಲು ಪ್ರಯತ್ನಸಿದ್ದೇನೆ. ಹೆಚ್ಚು ಅವಧಿಯನ್ನಿಟ್ಟುಕೊಂಡು ಕ್ಷೇತ್ರ ಕಾರ್ಯ ಕೈಗೊಂಡಲ್ಲಿ ಇನ್ನೂ ಹಲವು ಕವಿಗಳು ಅಧ್ಯಯನದ ವ್ಯಾಪ್ತಿಗೆ ಒಳಪಡಬಹುದು.

೩.೩ ಸಂಕಲಿತ ಸಾಹಿತ್ಯ :

ಈ ನಾಡಿನ ಶ್ರೇಷ್ಠ ಜನಪದ ವಿದ್ವಾಂಸರಲ್ಲರೊಬ್ಬರಾದ ಬಾಗೆನಾಡಿನ ಪ್ರೊ. ಜ್ಯೋತಿ ಹೊಸೂರ ಈ ಭಾಗದ ಜನಪದ ಸಾಹಿತ್ಯವನ್ನು ಸಂಕಲಿಸಿ ಪ್ರಕಟಿಸಲು ಯತ್ನಿಸಿದರು. ಅವರ "ಬೆರಸಿ ಇಟ್ಟೀನ ಬೆಲ್ಲ ನೆನಗಡಲಿ" ತ್ರಿಪದಿಗಳ ಸಂಕಲನ. "ಹೆಸರ ಹೇಳ್ತೀನಿ ಒಡಪ ಕಟ್ಟಿ" ಒಡಮುಗಳ ಸಂಗ್ರಹ.

'ಬೆರಸಿ ಇಟ್ಟೀನ ಬೆಲ್ಲ ನೆನೆಗಡಲಿ' ಜ್ಯೋತಿ ಹೊಸೂರರ ಮೊದಲ ಜನಪದ ಸಂಗ್ರಹ ಕೃತಿ. ಇದು ಜನಪದ ಮಂಟಪದ ಮೊದಲ ಪ್ರಕಟಣೆ. ಜನಪದ ತ್ರಿಪದಿಗಳ ಈ ಸಂಕಲನ ಪ್ರಕಟಗೊಂಡಿದ್ದು ೧೯೭೯ರಲ್ಲಿ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸ ಮಂಡಳಿ ೧೯೭೮ರಲ್ಲಿ ಈ ಕೃತಿಯನ್ನು ಬಿ.ಎ. ಭಾಗ ೧ ರ ಕನ್ನಡ ಉಪಪ್ರಧಾನ ವಿಷಯಕ್ಕೆ ಪಠ್ಯವಾಗಿ ಸ್ವೀಕರಿಸಿದ್ದು 'ನೆನೆಗಡಲಿಯ' ಹೆಗ್ಗಳಿಕೆ. ಡಾ. ಆರ್. ಸಿ. ಹಿರೇಮಠ ಅವರ ವಿದ್ವತ್‌ಪೂರ್ಣ ಮುನ್ನುಡಿ ನೆನೆಗಡಲಿಗೆ ಬೆಲ್ಲ ಕೂಡಿಸಿದಂತಾಗಿದೆ.

ಬೆಟಗೇರಿ ಕೃಷ್ಣಶರ್ಮರು ೧೯೨೮ರಲ್ಲಿ 'ಬೀಸುಕಲ್ಲಿನ ಹಾಡುಗಳು' ಎಂಬ ಹೆಸರಿನಲ್ಲಿ ತ್ರಿಪದಿಗಳನ್ನು ಸಂಗ್ರಹಿಸಿ ಪ್ರಕಟಿಸಿದರು. 'ಬೀಸುಕಲ್ಲಿನ ಹಾಡು'ಗಳೇ 'ಗರತಿ ಹಾಡು'ಗಳಿಗೆ ಸ್ಫೂರ್ತಿ. ೧೯೩೧ರಲ್ಲಿ ಹಲಸಂಗಿ ಗೆಳೆಯರು ಇದನ್ನು ಸಂಪಾದಿಸಿದರು. 'ಗರತಿ ಹಾಡಿ'ನ ೩೮ ವರ್ಷಗಳ ನಂತರ ಅದರಷ್ಟೇ ತೂಕದ ಕೃತಿಯನ್ನು ಸಂಪಾದಿಸಿದ ಕೀರ್ತಿ ಹೊಸೂರ ಅವರಿಗೆ ಸಲ್ಲುತ್ತದೆ. ಡಾ. ಆರ್. ಸಿ. ಹಿರೇಮಠ ಅವರು ಗುರುತಿಸಿರುವಂತೆ "ಅದೇ ಮಾದರಿಯ, ಅಷ್ಟೇ ಎತ್ತರದ ಕೃತಿಯಿದು."

ಇದರಲ್ಲಿ ೩೮೩ ತ್ರಿಪದಿಗಳಿವೆ. ಇವುಗಳನ್ನು ೬ ವಿಭಾಗಗಳಲ್ಲಿ ಹೀಗೆ ವರ್ಗೀಕರಿಸಲಾಗಿದೆ–

೧.	**ಏಳುತಲೆ ನೆನದೀನ ಏಳೆಂಟು ದೇವರನ**	–	**೫೬ ತ್ರಿಪದಿಗಳು**
೨.	**ಸುತ್ತಿರುವ ಬಳಗ ಸುಖಿಯಿರಲಿ**	–	**೧೫೧ ತ್ರಿಪದಿಗಳು**
೩.	**ಕಾಮುಕಸ್ತೂರಿ ನಿನ್ನ ಕಾಣದೆ ಇರಲಾರೆ**	–	**೫೭ ತ್ರಿಪದಿಗಳು**
೪.	**ಹ್ಯಾಂಗೀಸಿ ಬರಲಿ ಜಗದಾಗ**	–	**೩೨ ತ್ರಿಪದಿಗಳು**
೫.	**ಹಾಕ್ಯಾಡತಾವ ಗಜನಿಂಬಿ**	–	**೪೩ ತ್ರಿಪದಿಗಳು**
೬.	**ಬಿಳಿ ಮುತ್ತಿನ್ಹಾಂಗ ಬಿಳಿಜ್ವಾಳ**	–	**೪೪ ತ್ರಿಪದಿಗಳು**

ಮೊದಲ ವಿಭಾಗದ ತ್ರಿಪದಿಗಳೆಲ್ಲ ದೇವತಾ ಸ್ತುತಿಗಳು. ಜಾನಪದರು ದೇವರನ್ನು ನೆನೆಯುತ್ತಲೆ ಏಳುವರು.

ಹರಿಯಾಗ ಏಳತಲಿ ಹರಿ ನಿನ್ನ ನೆನದೀನ
ಹರಿ ನಾಮದಾಗ ಪಂಡರಪುರ ವಿಠ್ಠಲನ
ಎದ್ದೊಂದು ಗಳಿಗಿ ನೆನದೀನ

ಎರಡನೇ ಭಾಗದ ತ್ರಿಪದಗಳು ಸಮೂಹ ಪ್ರಜ್ಞೆಯನ್ನು ಅಭಿವ್ಯಕ್ತಿಸುತ್ತವೆ. ಜನಪದರಿಗೆ ಅವಿಭಕ್ತ ಕುಟುಂಬದೆಡೆಗೆ ಹೆಚ್ಚಿನ ಒಲವು. ತಂದೆ, ತಾಯಿ, ಅಕ್ಕ, ತಂಗಿ, ಗಂಡ, ಮಾವ, ಅತ್ತೆ ಮುಂತಾದ ಬಳಗದ ನಡುವೆ ಬದುಕುವುದು ಅವರಿಗೆ ಹೆಮ್ಮೆ. ಆದರೆ ಒಮ್ಮೊಮ್ಮೆ ಈ ಸಂಬಂಧಗಳು ಹಳಸುವುದು ಉಂಟು.

ಅತ್ತೆವ್ವ ಸಾಯಲಿ ಹತ್ತೆಮ್ಮೆ ಕಟ್ಟಲಿ
ಮಾವಗ ಮರಗಿ ಹಾಯಲಿ / ಮನಿಯಾನ
ಮೈದುನಗ ಹಾವ ಹರಿಯಾಲಿ

‘ಹೆಸರ ಹೇಳ್ತೀನಿ ಒಡಪಕಟ್ಟಿ’ ಇದು ಹಾರೂಗೇರಿಯ ಜಾನಪದ ಮಂಟಪದ ಪ್ರಕಟಣೆ. ೧೯೩೧ರಲ್ಲಿ ಮೊದಲು ಪ್ರಕಟಣೆಗೊಂಡ ಇದು ಎರಡೇ ವರ್ಷಗಳಲ್ಲಿ ಮರುಮುದ್ರಣ ಕಂಡಿದೆ. ಬೇಟಗೇರಿ ಕೃಷ್ಣಶರ್ಮ ಇದಕ್ಕೆ ಮುನ್ನುಡಿ ಬರೆದಿದ್ದಾರೆ.

ಇಲ್ಲಿ ಒಡಮುಗಳನ್ನು ಅವರು ಹೆಣ್ಣು ಮಕ್ಕಳ ಒಡಮು ಮತ್ತು ಗಂಡು ಮಕ್ಕಳ ಒಡಮು ಎಂದು ಎರಡು ವಿಭಾಗಗಳಲ್ಲಿ ವಿಂಗಡಿಸಿದ್ದು, ಮೊದಲ ಭಾಗದಲ್ಲಿ ಹೆಣ್ಣು ಮಕ್ಕಳ ೨೨೦ ಒಡಮುಗಳಿವೆ. ಗಂಡು ಮಕ್ಕಳ ೭೮ ಒಡಮುಗಳು ಎರಡನೇ ಭಾಗದಲ್ಲಿವೆ.

ಸಾಮಾನ್ಯವಾಗಿ ಶುಭಕಾರ್ಯದಲ್ಲಿ ಹೆಸರು ಹೇಳುವಂತೆ ಅವರನ್ನು ಗೆಳತಿಯರು ಪೀಡಿಸುತ್ತಾರೆ. ಆಗ ಅವಳು ಸರಳವಾಗಿ ಗಂಡನ ಹೆಸರನ್ನು ಹೇಳದೆ ಒಡಮು ಹೊಸೆದು ಹೇಳುವಳು. ಹೆಣ್ಣು ತಮ್ಮ ಗಂಡನನ್ನು ಹೆಸರಿನಿಂದ ಕರೆದರೆ ಆತನ ಆಯುಷ್ಯ ಕಡಿಮೆಯಾಗುವುದು ಎನ್ನುವುದು ಪರಂಪರಾಗತ ಭಾವನೆ. ಆದ್ದರಿಂದ ಅವರು ಗಂಡನ ಹೆಸರು ಹೇಳುವದು ಒಂದು ಅಪರೂಪದ ಸಂದರ್ಭ. ಒಡಮು ಕಟ್ಟಿ ಹೆಸರು ಹೇಳುವುದರಲ್ಲಿಯೇ ಗ್ರಾಮೀಣ ಹೆಣ್ಣು ಮಕ್ಕಳ ಸುಂದರ ಕನಸುಗಳು ಅಭಿವ್ಯಕ್ತಗೊಳ್ಳುತ್ತವೆ. ಅವರು ಅನಕ್ಷರಸ್ಥರಾಗಿದ್ದರೂ ಕಾವ್ಯಮಯ ಭಾಷೆಯಲ್ಲಿ ಧ್ವನಿಪೂರ್ಣವಾಗಿ ಒಡಮು ಹೇಳುತ್ತಾರೆ. ಈ ಭಾಗದಲ್ಲಿ ಪ್ರಚಲಿತದಲ್ಲಿರುವ ಸತಿ–ಪತಿ ಹೇಳುವ ಒಡಮುಗಳು ಈ ಸಂಕಲನದಲ್ಲಿವೆ.

ಹೆಣ್ಣು ಮಕ್ಕಳ ಒಡಮುಗಳು ನಯ ನಾಜೂಕತೆಯಿಂದ ಕೂಡಿರುತ್ತವೆ. ಗಂಡು ಮಕ್ಕಳು ಹೆಣ್ಣನ್ನು ತುಚ್ಛ ಮತ್ತು ಕೀಳರಿಮೆಯಿಂದ ಕಾಣುವ ಒಡಮುಗಳಿವೆ.

ಹೆಣ್ಣು ಮಕ್ಕಳ ಒಡಮು :

ಕಟ್ಟಿ ಮ್ಯಾಲ ಕುತ್ತ ಕಾರಭಾರ ಮಾಡತಾನ
ಆನಿಮ್ಯಾಲ ಕುತ್ತ ದಾನಾ ಮಾಡತಾನ
ಮಂಚದ ಮ್ಯಾಲ ಕುತ್ತ ಮಗನ ಆಡಸತಾನ [೧೦]...

ಬಿಳಿ ಕುದರಿ ಬೆಳ್ಳಿ ಲಗಾಮು
ಬೆಳಗಾವಿ ಹೋಗಿ ಗಳಿಗ್ಯಾಗ ಬರತಾನ [೧೧]...

ಹಳ್ಳಿಗರು ದಾಂಪತ್ಯ ಪ್ರೇಮವನ್ನು ಹೇಗೆ ಪ್ರಕಟಿಸಬಲ್ಲರೆಂಬುದಕ್ಕೆ ಈ ಒಡಪದ ಸಾಹಿತ್ಯ ಸುಂದರ ಪ್ರಮಾಣಗಳನ್ನು ಒದಗಿಸಿ ಕೊಡಬಲ್ಲದು. ಅದರಲ್ಲಿಯೂ ಹೆಣ್ಣು ಮಕ್ಕಳು ಹೇಳುವ ಒಡಮುಗಳಂತೂ ಮಾಧುರ್ಯದ ಮೋದಕಗಳಿಂತಿವೆ.

ಪ್ರಾದೇಶಿಕ ಭಾಷೆಯಿಂದ ಮೈತುಂಬಿಕೊಂಡಿರುವ ಈ ಒಡಪುಗಳು ಹೆಚ್ಚು ಭಾವ ಪ್ರಧಾನವಾಗಿದೆ.

ಹಗ್ಗಲೆ ಬಡಿದರ
ಮಗ್ಗಲಾಗ ಬರತಾಳ [೧೨]....

ಗಣಕೋಳಲೆ ಬಡದರ
ಕುಣಕೋತ ಬರತಾಳ [೧೩].

– ಇವು ಗಂಡಸರು ಹೇಳುವ ಒಡಪುಗಳಿಗೆ ಉದಾಹರಣೆಗಳು.

ಜ್ಯೋತಿ ಹೊಸೂರರ ಗರಡಿಯಲ್ಲಿ ಪಳಗಿದ ಬಾಲಕೃಷ್ಣ ಜಂಬಗಿ ಈ ಭಾಗದ ಜನಪದ ತ್ರಿಪದಿಗಳನ್ನು ಸಂಕಲಿಸಲು ಪ್ರಯತ್ನಿಸಿದರು. ಅದು ಅವರ 'ಗೆಜ್ಜೆ ನುಡಿದಾವ', ಒಟ್ಟು ನಾಲ್ಕನೂರು ತ್ರಿಪದಿಗಳ ಸಂಕಲನ. ವಸ್ತುವಾಧರಿಸಿ ಅವುಗಳನ್ನು ೧೪ ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಹಿರಿಯ ಜಾನಪದ ವಿದ್ವಾಂಸ ಜ್ಯೋತಿ ಹೊಸೂರರ ಮುನ್ನುಡಿ ಈ ಕೃತಿಯ ಮೌಲ್ಯ ಹೆಚ್ಚಿಸಿದೆ.

"ಕಡದ ಕಬ್ಬಿನ ಗಣಕಿ, ಒಡೆದ ಟೆಂಗಿನ ಹೊಳಕ
ಆ ನಾಡದ ಬೆಲ್ಲ ಅವಲಕ್ಕಿ । ಹಡದವ್ವ ।
ಬಾಳಾನ ಬಂಕೀಗಿ ಕಳಿವ್ಯಾಳ [೧೪]".

ತವರಿನ ಮೇಲೆ ಹೆಣ್ಣಿಗಿರುವ ಪ್ರೀತಿಗೆ ಅಳತೆಯಿಲ್ಲ. ಅಂಥ ಪ್ರೀತಿಯ ಆಳವನ್ನು ಅಭಿವ್ಯಕ್ತಿಸುವ ತ್ರಿಪದಿಗಳು ಸಂಖ್ಯೆಯಲ್ಲಿ ಅಸಂಖ್ಯ. ಅಂತಹ ತ್ರಿಪದಿ ಜಂಬಗಿಯವರ ಗೆಜ್ಜೆ ನುಡಿದಾವ ಸಂಕಲನದಲ್ಲಿ ಮನ ಸೆಳೆಯುತ್ತದೆ.

ಹುಟ್ಟಿದ ಊರನ ಬಿಟ್ಟು, ಕೊಟ್ಟೂರಿಗಿ ಹೋಗುವಾಗ
ಹೊಟ್ಯಾಗಿನ ದುಃಖ ನಲನಲದ ತವರ ಮನಿಯ
ಬಿಟ್ಟ ನನ ಕಾಲ ಬಾರಽವ [೧೫]॥

ಹೆಣ್ಣು ತವರ ಮನೆಯನ್ನು ಬಿಟ್ಟು ಹೋಗುವಾಗ ಅವಳಿಗೆ ಆಗುವ ದುಃಖ ಮತ್ತು ತವರಿನ ಮೇಲಿರುವ ಪ್ರೀತಿ ಎದ್ದು ಕಾಣುತ್ತದೆ. ತುಂಬ ಅರ್ಥದಿಂದ ಕೂಡಿದ ಈ ತ್ರಿಪದಿಗಳು ಎಂಥವರ ಮನಸ್ಸನ್ನು ಕರಗಿಸುತ್ತವೆ.

ದೇವ ದೇವತೆಯರನ್ನು ಸ್ತುತಿಸುವ ತ್ರಿಪದಿಗಳು ಈ ಸಂಕಲನದ ಮೊದಲ ಭಾಗದಲ್ಲಿವೆ. ೦೦ಈ ನಾಡಿನ ದೇವರಿಗೆ ಮೊರೆ ಹೋದುದನ್ನು ಕಾಣುತ್ತೇವೆ.

ಚಿಂತೀಯ ಬಿಡಿಸವ್ವ ಚಿಂಚಲಿ ಮಾಯವ್ವ
ಚಿಂತೆಲ್ಲ ಹೋಗಿ ಪರಿಹಾರ । ಆದಿಂದ
ನನ ಚಿತ್ತಾಕದ ಮ್ಯಾಲ ನಿನರೂಪ [೧೬].

: ಟಿಪ್ಪಣಿಗಳು :

೧) ಎಂ ಬಿ. ನೇಗಿನಹಾಳ : ನೇಗಿನಹಾಳ ಪ್ರಬಂಧಗಳು : ಪುಟ–೨೫.

೨) ಅದೇ. ಪುಟ–೮೧

೩) ರಾಮು ಸುಬ್ಬಣ್ಣವರ (ಸಂ) : ಜಿನ ಭಕ್ತಿಗೀತೆಗಳು : ಪುಟ–೪೮.

೪) ಆರ್. ಬಿ. ಚಿಲಮಿ (ಸಂ) : ಭಜನೆಯ (ತತ್ವ) ಪದಗಳು : ಪುಟ–೭.

೫) ಅದೇ. ಪುಟ–೩೪

೬) ಎಂ ಬಿ. ನೇಗಿನಹಾಳ : ನೇಗಿನಹಾಳ ಪ್ರಬಂಧಗಳು : ಪುಟ–೮೮.

೭) ಪರಮಾರ್ಥ ಜ್ಞಾನ ಜ್ಯೋತಿ (ಸಂ) : ಶಿರಗೂರ ಗ್ರಾಮದ ಭಕ್ತರು, ಪುಟ–೫೦.

೮) ಅದೇ. ಪುಟ–೪೪.

೯) ಗುರುಪಾದ ವಾಳಕಿ (ಸಂ) : ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ : ಪುಟ–೧೬.

೧೦) ಜ್ಯೋತಿ ಹೊಸೂರ (ಸಂ) : ಹೆಸರ ಹೇಳ್ತೀನಿ ಒಡಪ ಕಟ್ಟಿ : ಪುಟ–೪೫.

೧೧) ಅದೇ.

೧೨) ಅದೇ. ಪುಟ–೭೭.

೧೩) ಅದೇ.

೧೪) ಬಿ. ಎ. ಜಂಬಗಿ (ಸಂ) : ಗೆಜ್ಜೆ ನುಡದಾವ : ಪುಟ–೨೯.

೧೫) ಅದೇ. ಪುಟ–೨೭.

೧೬) ಅದೇ. ಪುಟ–೨೪.

ಅಧ್ಯಾಯ – ೪

ಆಧುನಿಕ ಸಾಹಿತ್ಯ

ಅಧ್ಯಾಯ – ೪

ಆಧುನಿಕ ಸಾಹಿತ್ಯ

ಬಾಗೆನಾಡಿನಲ್ಲಿ ಆಧುನಿಕ ಸಾಹಿತ್ಯ ಹುಲುಸಾಗಿ ಬೆಳೆಯುತ್ತಲಿದೆ. ಅನೇಕ ಹೊಸ ಭರವಸೆಗಳು ಮೂಡುತ್ತಿವೆ. ನಾಡಿನ ಪ್ರತಿಷ್ಠಿತ ಪ್ರಶಸ್ತಿ, ಪುರಸ್ಕಾರಗಳು ಈ ಪರಿಸರದತ್ತ ವಾಲುತ್ತಿವೆ. ಕಾವ್ಯ, ಕಥನ, ವಿಮರ್ಶೆ, ಸಂಶೋಧನೆ, ಸಂಪಾದನೆ, ಮಕ್ಕಳ ಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಸಮೃದ್ಧ ಸಾಹಿತ್ಯ ಸೃಷ್ಟಿಗೊಳ್ಳುತ್ತಲಿರುವದು ಶ್ಲಾಘನೀಯ. ಬಾಗೆ ನಾಡಿನ ಆಧುನಿಕ ಸಾಹಿತ್ಯದ ಅವಲೋಕನವನ್ನು ಅಧ್ಯಯನದ ಅನುಕೂಲತೆಗಾಗಿ ಹೀಗೆ ವರ್ಗೀಕರಿಸಬಹುದು.

೪.೧ ಕಾವ್ಯ

೪.೨ ಕಥನ ಸಾಹಿತ್ಯ

೪.೩ ವಿಮರ್ಶೆ ಮತ್ತು ಸಂಶೋಧನೆ

೪.೪ ಮಕ್ಕಳ ಸಾಹಿತ್ಯ

೪.೫ ಇತರ

೪.೧ ಕಾವ್ಯ :

ಕಲ್ಲೇಶ ಕುಂಬಾರ, ಅನಸೂಯಾ ಕಾಂಬಳೆ, ಶಿವಾನಂದ ಬೆಳಕೂಡ, ಡಾ. ಆರ್. ಬಿ. ಚಿಲಮಿ, ಶ್ರೀಕಾಂತ ರಾಯಮಾನೆ, ಭಾಸ್ಕರ ಪತ್ತಾರ, ಕುಮಾರ ಅವಳೆ, ಅಪರಾಯ ಗಸ್ತಿ, ಡಾ. ವ್ಹಿ. ಎಸ್. ಮಾಳಿ, ಎಸ್. ವಾಯ್. ಹಂಜಿ, ಜಿ. ಎಸ್. ಮಠಪತಿ ಮುಂತಾದ ಹಲವು ಕವಿಗಳು ಇಲ್ಲಿ ಕಾವ್ಯ ಕೃಷಿಮಾಡುತ್ತಿರುವರು. ಇವರಲ್ಲಿ ಇತ್ತೀಚಿನ ಅತ್ಯಂತ ಭರವಸೆಯ ಕವಿ ಕಲ್ಲೇಶ ಕುಂಬಾರ. ಅವರ ಹಲವು ಕವಿತೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅವರ "ಪುರುಷ ದಾರಿಯ ಮೇಲೆ" ಕವನ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ನಿಧಿ ಬಹುಮಾನ ಬಂದಿದೆ. ಅಕ್ಕ–ಅಲ್ಲಮರ ಸಖ್ಯಕ್ಕಾಗಿ ಹಂಬಲಿಸುವ ಕಲ್ಲೇಶ ಕುಂಬಾರರ ಸೂಕ್ಷ್ಮ ಸಂವೇದನೆ, ಸರಳ ಮತ್ತು ಪ್ರಮಾಣಿಕವಾದ ಅಭಿವ್ಯಕ್ತಿ ಗಮನ ಸೆಳೆಯುತ್ತವೆ.

"ಕಾರಿರುಳ ಕತ್ತಲೆಯಲ್ಲಿ
ಅಗ್ನಿ ಸುಡುವಾಗ
ಕಾರ್ಮೋಡಗಳು ಕರಗಿ
ಮಳೆಯು ಸುರಿವಲ್ಲಿ
ಉದಕವನ್ನು ತೊಳೆವಾಗ
ನೆತ್ತಿ ಸುಡುವ ಬಿರುಬಿಸಿಲಿನಲ್ಲಿ

ವಾಯುವನ್ನು ಮೆಟ್ಟಿನಿಂತು
ಅಂಗೈಯಲ್ಲಿ ಆಕಾಶವನ್ನು ಹಿಡಿವಾಗ
ನನ್ನೆದೆಯೊಳಗೆ ನೀನಿದ್ದೆ
ಅಲ್ಲಮ ಅಲ್ಲಿ ಬೆಚ್ಚಗೆ ಮನೆಮಾಡಿದ್ದೆ"[೧]

"ಅಕ್ಕ, ಅಲ್ಲಮರಿಗಾಗಿ ಕಲ್ಲೇಶ ಹಂಬಲಿಸುವ, ತಹತಹಿಸುವ ರೀತಿ ವಿಶಿಷ್ಟವಾದದ್ದು. ತನ್ನನ್ನು ತಾನು ಪೂರ್ಣವಾಗಿ ಕೊಟ್ಟುಕೊಂಡಲ್ಲದೆ ಇಂಥ ತಳಮಳ ಹುಟ್ಟುವುದಿಲ್ಲ. ಕಲ್ಲೇಶ ಕೊಟ್ಟುಕೊಳ್ಳುವ ರೀತಿಯನ್ನು ಅವರ ಕಾವ್ಯದ ಭಾಷೆ ಮತ್ತು ಅದರ ತೀವ್ರತೆ ತಿಳಿಸಿಕೊಡುತ್ತವೆ. ವಚನದ ಭಾಷೆಯನ್ನು ಬಳಸಿಕೊಂಡು ಅಕ್ಕ-ಅಲ್ಲಮರನ್ನು ಗ್ರಹಿಸಲು, ಅವಾಹಿನಿಕೊಳ್ಳಲು ಕಲ್ಲೇಶ ಯತ್ನಿಸುತ್ತಾರೆ. ವಚನ ಭಾಷೆಯನ್ನು ತಿರುವುತ್ತ, ಹರಿಯುತ್ತ, ಛಿದ್ರಗೊಳಿಸುತ್ತ, ಮತ್ತೆ ಕಾವ್ಯಕ್ಕೆ ಬಿಸಿಯನ್ನು, ಕಸುವನ್ನು ತುಂಬುವ ಯತ್ನವನ್ನು ಮಾಡುತ್ತಾರೆ. ಅವರ ಈ ನಡೆ ಕುತೂಹಲವನ್ನು ಕೆರಳಿಸುತ್ತದೆ. ಅವರ ಕಾವ್ಯದ ಸೆಳವು, ರಭಸ, ಓಘ, ಗತಿ ಎಲ್ಲವೂ ಚೈತನ್ಯಪೂರ್ಣವಾಗಿ ಕಾಣುತ್ತವೆ. ಸೊಕ್ಕಿ, ಉಕ್ಕಿ, ಕೊಚ್ಚಿ ಎಲ್ಲವನ್ನು ತನ್ನೊಳಗೆ ತಂದುಕೊಳ್ಳುವ, ತನ್ನನ್ನು ಸಂಪೂರ್ಣವಾಗಿ ಕೊಟ್ಟುಕೊಳ್ಳುವ ಈ ಕಾವ್ಯದ ರೀತಿ ವಿಭಿನ್ನವಾಗಿ ತೋರುತ್ತದೆ."[೨]

ಈ ಮೊದಲು ಇಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಶಕ್ತಿಯುತವಾಗಿತ್ತು. ಚಂದ್ರಶೇಖರ ಪಾಟೀಲ ಅವರ ಶಿಷ್ಯ ಬಳಗ ಹೆಚ್ಚು ಒತ್ತು ಕೊಟ್ಟಿತ್ತು. ಆ ಮೂಲಕ ಶಿವಾನಂದ ಬೆಳಕೂಡ, ವಾಯ್. ಬಿ. ಹಿಮ್ಮಡಿ, ಅನಸೂಯಾ ಕಾಂಬಳೆ, ಕುಮಾರ ಅವಳೆ, ವಿಠ್ಠಲ ಮಸಾಳೆ, ಮನೋಹರ ಹೊಸಮನಿ ಮುಂತಾದವರು ಕಾವ್ಯಲೋಕವನ್ನು ಪ್ರವೇಶಿಸಿದರು.

ಶಿವಾನಂದ ಬೆಳಕೂಡ ಆ ಸಂಘಟನೆಯ ಶಕ್ತಿ ಕವಿಯಾಗಿದ್ದರು. ತುಮುಲ ಹಾಗೂ ಮೆಟ್ಟು ಸಂಕಲನಗಳ ಮೂಲಕ ಭರವಸೆ ಮೂಡಿಸಿದ್ದರು.

"ಆಧುನಿಕ ಕನ್ನಡ ಕಾವ್ಯ ತಾನು ಹಾದು ಬಂದ ಮಾರ್ಗಗಳನ್ನು ಅನ್ವೇಷಿಸುತ್ತಾ ಹೊರಟಂತೆ ದಲಿತ-ಬಂಡಾಯದ ಛಾಪು ಈ ನೆಲದ ಮೇಲೆ ದಟ್ಟವಾಗಿ ಮೂಡಿರುವಾಗ, ಅದರ ಪ್ರಭಾವದಿಂದ ಅಲ್ಲಿ ಬರುವ ಬಂಡಾಯ ಕವಿ ಬರಹಗಾರರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೇನೊ ಎಂಬಂತೆ ಬೆಳಕೂಡರ ಬಿಡಿ ಕವನಗಳ ಕೆಲವು ಕವಿತೆಗಳಲ್ಲಿ 'ಚಂಪಾ'ರವರ ಪ್ರಭಾವ ಎದ್ದು ಕಂಡರೂ, ಬೆಳಕೂಡರು ಮೈಕೊಡವಿಕೊಂಡು ಭಿನ್ನವಾಗಿ ನಿಲ್ಲುವ ಓಟವನ್ನು ಸಾಧಿಸುತ್ತಾರೆ. ಹೀಗಾಗಿ ಈ ಕವಿಯ ಕಾವ್ಯದ ಬಗ್ಗೆ ಅಭಿಮಾನ ಭರವಸೆ ಮೂಡುತ್ತದೆ"[೩]. ಎಂದು ಎನ್. ಗರಿಸಿದ್ದ ಬಳ್ಳಾರಿ 'ಮೆಟ್ಟು' ಕವನ ಸಂಕಲನದ ಮುನ್ನುಡಿಯಲ್ಲಿ ಹೇಳಿರುವರು.

ತುಮುಲ ಶಿವಾನಂದ ಬೆಳಕೂಡರ ಮೊದಲ ಕವನ ಸಂಕಲನ. ಇದರಲ್ಲಿ ಸೃಜನಶೀಲ ಮನಸ್ಸಿನ ಅನೇಕ ತುಮುಲಗಳಿವೆ. ತನ್ನೊಳಗಿನ ನೋವುಗಳನ್ನು ಕಾವ್ಯವಾಗಿಸುವ ಪ್ರಯತ್ನವಿದು.

ನಮ್ಮ ಈ ಇಂಡಿಯಾದಲ್ಲಿ
ಕೆಲವು ಗಂಡಸರಿಗೂ ಬಂಕೆ ಹತ್ತುತ್ತವೆ.

ಹೊಟ್ಟೆಯಲ್ಲಿನ ಕೂಸು ಹೊರಗೆ
ಹಾಕಲು ಕಿಂಡಿಯೇ ಇಲ್ಲ.
ಆಪರೇಶನ್ನಂತೂ ಮಾಡುವವರೆ ಇಲ್ಲ.
ಒಂಬತ್ತು ತುಂಬಲೇಬೇಕು
ಹೊಟ್ಟೆ ಹರಿದು ಕೂಸು ಹೊರಗೆ
ಜಿಗಿಯಲೇಬೇಕು ನನ್ನಾಣೆ [೪].

ದನಿಯರ ಬಿಳಿಯ ಬೆಕ್ಕುಗಳ ಹಂಗಿನಿಂದ ಹಕ್ಕಿ ಬಿಡಿಸುವ ಹಂಬಲ ಈ ಕವಿಯದು. ಅದಕ್ಕೆ ದಾರಿದ್ರ್ಯವನ್ನು ಮೆಟ್ಟಿ ನಿಲ್ಲಲು ಕರೆಕೊಡುವರು. ನೆಲದೊಳಗಿನಿಂದ ಜ್ವಾಲಾಮುಖಿಯಾಗಿ ಹೊರ ಬಂದು ಬಂಗ್ಲೆ ಸುಟ್ಟು ಸಮಾನತೆ ಸಾಧಿಸಲು ಗುಡುಗುವರು. ಅದಕ್ಕೆ ತಮ್ಮ ಕವನ ಸಂಕಲನವನ್ನು ಮೆಟ್ಟನಿಂದ ಗುರುತಿಸಿದ್ದಾರೆ.

ರಾಷ್ಟ್ರ ಬದುಕಿನ ದುರಂತ ಕವಿಯ ಮೇಲೆ ತೀವ್ರ ಪರಿಣಾಮ ಬೀರಿದಂತಿದೆ.

“ಎಲ್ಲಽ ಮಕ್ಕಳು ಒಂದಽ ಅಂತ
ಹಡಗನ್ಯಾಗ ಕುಂಡರಿಸಿಕೊಂಡ
ದಡಾ ಸೇರಬೇಕೆನ್ನೂ ನಿನ್ನ ಬೆನ್ನಿಗೆಽ
ಚೂರಿಹಾಕಿದ ನಿನ್ನ ಪ್ರೀತಿ ಮಕ್ಕಳು
ಹಡಗನ್ಯಾಗಽ ಮುಳಗಿಸಿ
ಮಜಾ ನೋಡಬೇಕಂತ ಮಾಡ್ಯಾರ ಬೆ ತಾಯಿ
ಮಜಾ ನೋಡಬೇಕಂತ ಮಾಡ್ಯಾರು. [೫]

ಶಿವಾನಂದ ಬೆಳಕೂಡರ ಸಾಹಿತ್ಯದಲ್ಲಿ ಲೈಂಗಿಕ ಪ್ರತಿಕೆಗಳು ಹೇರಳ. ಇದು ಅವರ ಹಿನ್ನಡೆಗೂ ಕಾರಣವಾಯಿತು.

ಬೆಳಕೂಡರು ೧೯೮೬ ರಲ್ಲಿ ತಮ್ಮ ‘ಸಂಘರ್ಷ ಸಾಹಿತ್ಯ ಕೂಟ’ ಪ್ರಕಾಶನ ಸಂಸ್ಥೆ ಹೊರ ತಂದರು. ಅದು ರಾಯಬಾಗ ತಾಲೂಕಿನ ಕವಿಗಳ ಪ್ರಾತಿನಿಧಿಕ ಕವನ ಸಂಕಲನ “ಪಂಜು ಮತ್ತು

ಪರಾಗ". ಇಲ್ಲಿ ೫೫ ಕವಿಗಳ ಅರವತ್ತೇಳು ಕವನಗಳಿವೆ. ಕಾಲನಂತರದಲ್ಲಿ ಪಂಜಿನಲ್ಲಿರುವ ಪ್ರಖರತೆಯನ್ನು ಉಳಿಸಿಕೊಂಡವರು ಕೇವಲ ಅನಸೂಯಾ ಕಾಂಬಳೆ ಮಾತ್ರ.

ಅನಸೂಯಾ ಕಾಂಬಳೆ ಈ ನಾಡಿನ ಮಹತ್ವದ ಕವಯಿತ್ರಿ. ಅವರ "ಮುಳ್ಳು ಕಂಟಿಯ ನಡುವೆ" ಕವನ ಸಂಕಲನವನ್ನು ಬೆಂಗಳೂರಿನ ಹೊಸದಿಕ್ಕು ಪ್ರಕಾಶನ ೧೯೯೯ ರಲ್ಲಿ ಪ್ರಕಟಿಸಿದೆ. ದಲಿತ ಸಮುದಾಯದ ನೋವಿಗೆ ಅಭಿವ್ಯಕ್ತಿ ನೀಡುವ ಅವರ ಕಾವ್ಯ ಸಾಮಾಜಿಕ ಚಿಂತನೆಯ ವೈಚಾರಿಕ ನೆಲೆಯಲ್ಲಿ ಧ್ವನಿಸುತ್ತದೆ.

"ಕವಯಿತ್ರಿ ಅನಸೂಯಾ ಕಾಂಬಳೆ ಅವರ "ಮುಳ್ಳುಕಂಟಿಯ ನಡುವೆ" ಹಿಂದೂ ಧರ್ಮದ ಅಸಮಾನತೆಯ ದುಳ್ಳುರಿಯಲ್ಲಿ ಬೆಂಕಿಯಾಗಿ ಎದ್ದು ಬಂದ ಧ್ವನಿ. ಈ ಧ್ವನಿಯಲ್ಲಿ ಅಸಹಾಯಕತೆಯ ಅಕ್ರೋಶವಿದೆ. ವೈಚಾರಿಕ ಉದ್ವೇಗವಿದೆ. ಇದೆಲ್ಲದರ ನಡುವೆ ಕಾವ್ಯಕಟ್ಟುವ ಕ್ರಿಯೆ ಆಕೃತಿಯಾಗಿ ಹೊರಹೊಮ್ಮಿದೆ. ಅನುಭವಕ್ಕೆ ಕಾವ್ಯದ ಧ್ವನಿ ಹೊಂದಿಸುವ ಸೃಜನಶೀಲ ಪ್ರಕ್ರಿಯೆಯಲ್ಲಿ ಸಾಕಷ್ಟು ಸಂಯಮ ತೋರಿದ್ದಾರೆ.[೪]"

ಅಕ್ಕಾss
ಹೂವ ತರುವವರ ಮನೆಗೆ
ಹುಲ್ಲು ತಾರೆನಂದಿ ಅಂದು,
ಜಗದಲ ಮುಗಿಲಗಲ
ಹುಲ್ಲಾಗಬೇಕು ನಾನಿಂದು[೫].

'ಮಹಾದೇವಿಯಕ್ಕನಿಗೆ' ಈ ಸಂಕಲನದ ಮಹತ್ವದ ಕವಿತೆ. ವಚನ ಚಳುವಳಿ ಕಾಲದ ಅಕ್ಕಮಹಾದೇವಿಯ ಮನಸ್ಸಿನ ವಿಚಾರ ಹಿಡಿದು ಹೊರಡುವ ಈ ಕವಿತೆ. ಹೆಣ್ಣಿನ ಬದುಕಿನ ನೋವು ಹೆಕ್ಕುತ್ತದೆ.

"ಮುಳ್ಳ ಕಂಟಿಯ ನಡುವೆ" ಕವನದಲ್ಲಿ ಹೆಣ್ಣಿನ ಜೀವನದ ಚಿತ್ರಣ ಮೂಡಿ ಬಂದಿದೆ. 'ಕಣ್ಣು ತೆರೆದರೆ ಸುತ್ತ ಕುಕ್ಕುವ ಗೊನೆ ಮುಳ್ಳು' ಮಣ್ಣು ತೂರೆದರೆ ಸಾಕು ಬಾಡುವ ಬಳ್ಳಿ ಮೊಗ್ಗು ಹಿಗ್ಗುವ ಆಸೆ ಎದೆಯೊಳಗೆ ಕೊಳೆತಾವು ಎಂಬಂಥ ಸಮರ್ಥ ಶಿಲ್ಪವೊಂದು ಒಡಮೂಡಿ ಹೃದಯಕ್ಕೆ ತಟ್ಟುತ್ತವೆ. ಅನುಭವದ ಜೊತೆಜೊತೆಗೆ ಎದೆಯಲ್ಲಿ ಅರಳುವ ಹೂವು ಕೊಳೆಯುವ ಬಗೆ ಹೇಗೆ ಇದ್ದೀತು ಎಂಬುದರ ಅನಾವರಣ ಇಲ್ಲಿದೆ.

ಹೆಣ್ಣಿನ ಮನದಾಳದ ನೋವುಗಳೆಲ್ಲ ಮುಳ್ಳು ಕಂಟಿಯ ನಡುವೆ ಕವಿತೆಯಾಗಿ ಅರಳಿವೆ. ಈ ಸಂಕಲನದ 'ನನ್ನ ಪ್ರೇಮದ ಕತೆ ಬರೆಯಬೇಡ' ಅರ್ಥ ಗರ್ಭಿತ ಕವಿತೆ.

"ಹೆಣ್ಣೆಂದರೆ ಕಣ್ಣಗಲಿಸುವ
ಈ ನಾಡಿನಲ್ಲಿ
ನನ್ನ ಪ್ರೇಮದ ಕಥೆ ಬರೆಯಬೇಡ ಗೆಳೆಯ
ಸತಿಯರ ಸಾಲಿನಲಿ ಕಲ್ಲಾಗಿಸಬೇಡ

ಬೆಳೆತೆಗೆದ ಮೇಲೆ ಬೇಲಿಯನು ಕಿತ್ತೊಗೆದಂತೆ
ನೀ ಕೊಟ್ಟ ಮಾತುಗಳ ಬಳ್ಳಿ ಕಿತ್ತು ಬಿಸಿಲಿಗೆಸೆಯಬೇಡ
ನಿನ್ನ ಹಳೆಯ ಬಣ್ಣದ ಉಡುಪು ಕಳಚಿ ಬದಿಗೆಸೆದಂತೆ
ಹೂ ನಗೆಯಲ್ಲಿ ಬಿಸಿಯೇರುವಂತೆ ಅವುಕಿ ಅಟ್ಟಿದ್ದು ಕಡೆಗಣಿಸಬೇಡ
ಕ್ರೌಂಚ ಪಕ್ಷಿಯ ಒಂಟಿ ಧ್ವನಿಯಾಗಿಸಬೇಡ ಗೆಳೆಯ
ಹಾಡುವಿಯಾದರೆ
ಬತ್ತಿದ ನನ್ನ ದೇಹಕೊಳಲಿನಲಿ ಸರಿಗಮವ ನುಡಿಸು ‘"

ಸಾಮಾಜಿಕ ಮೌಲ್ಯಗಳ ಹೆಸರಿನಲ್ಲಿ ಹೆಣ್ಣಿನ ಬಲಿ ನಿಲ್ಲಬೇಕೆನ್ನುವ ಕಳಕಳಿ ಅನಸೂಯಾ ಅವರ ಕವಿತೆಗಳಲ್ಲಿ ವ್ಯಕ್ತವಾಗಿದೆ. ಅವರ ಉತ್ತರ ಕರ್ನಾಟಕದ ದಲಿತ ಕುಸುಮ. ಅಂಬೇಡ್ಕರವಾದಿ ದಲಿತ ಬಂಡಾಯ ಕವಯಿತ್ರಿ ಎಂದು ಗಂಗಾರಾಂ ಚಂಡಾಳ ಹೇಳಿದ್ದಾರೆ.

ಭಾಸ್ಕರ ಪತ್ತಾರ ಹಾಗೂ ಹಂದಿಗುಂದದ ಶ್ರೀ ಶಿವಾನಂದ ಸ್ವಾಮೀಜಿ ಅಧ್ಯಾತ್ಮವನ್ನು ಕವಿತೆಗೆ ಒಗ್ಗಿಸಿದವರು. ೧೯೮೩ರಲ್ಲಿ ಕಾಲಗತಿ ಪ್ರಕಾಶನದಿಂದ ಪತ್ತಾರರ 'ಹೇಳುವಾಂಗ ಆತು' ಕವನ ಸಂಕಲನ ಪ್ರಕಟಗೊಂಡಿತು. ಇದಕ್ಕೆ ಮುನ್ನುಡಿ ಬರೆದಿರುವ ಖ್ಯಾತ ಕವಿ ಬಿ. ಎ. ಸನದಿ. "ರಾಯಬಾಗ ನೆಲದ ಜಾನಪದ ಸತ್ವವನ್ನು ಹೀರಿಕೊಂಡು ತನ್ನದೇ ಆದ ಧ್ವಜ ಹಾರಿಸಬಲ್ಲ, ಶಕ್ತಿ "ಹೇಳುವಾಂಗ ಆತು" ಕವಿಗಿದೆಯೆಂದು ಹೇಳಿದ್ದರು.' ಅವರಲ್ಲಿ ಬಹಳಷ್ಟು ಭರವಸೆ ಬಯಸಿದ್ದರು. ಆದರೆ ಕವಿಯ ಮತ್ತೊಂದು ಸಂಕಲನವೇ ಬರಲಿಲ್ಲ. ಜ್ಯೋತಿ ಹೊಸೂರ 'ಇವರು ರಾಯಬಾಗ ತಾಲೂಕಿನ ಮೊದಲ ಕವಿಯೆಂದು ಗುರುತಿಸಿರುವರು'.

'ಹೇಳುವಾಂಗ ಆತು' ಕವನ ಸಂಕಲನದಲ್ಲಿ ನವ್ಯ, ದಲಿತ, ಬಂಡಾಯದ ಧ್ವನಿಗಳಿವೆ.

"ಪಟ್ಟಭದ್ರಪ್ಪಾ
ಬಂಡಾಯವೆನ್ನುವದು ಬರಿ ಕೂಗು
ಆಕ್ರೋಶವೆಂದು ನೀ ಮೂದಲಿಸಬೇಡ
ಇದು ಕಾವ್ಯವೋ ? ಸಾಹಿತ್ಯವೋ ?
ಎಂದು ನಮ್ಮತ್ತ ಹಂದಿಗಳ ಹೊಡೆಯಬೇಡ.

\-------------------------

\-------------------------

ಹುಟ್ಟಿತು ಜೀವನದ ಹೊಸಹಾಸು ಹೊಕ್ಕು!

ಬರೆದೇವು ನಾವದರ ಮೇಲೆ

ನವ ಜೀವನದ ಕಾವ್ಯ.'"

ಈ ಕವನ ಸಂಕಲನ ಅವರ ಮೊದಲ ಪ್ರಯತ್ನವೂ ಹೌದು; ಕೊನೆಯ ಕೃತಿಯೂ ಹೌದು. ಇಲ್ಲಿಯ ಕವನಗಳ ಅಂದ ಆಶಾದಾಯಕವೆನಿಸುವುದಿಲ್ಲ. ಜ್ಯೋತಿ ಹೊಸೂರ ಅವರ ವಲಯದಲ್ಲಿ ಭಾಸ್ಕರ ಪತ್ತಾರ ಕವಿಯಾಗಲು ಯತ್ನಿಸಿದ್ದು ಮಾತ್ರ ಪ್ರಶಂಸನೀಯ.

ಹಂದಿಗುಂದಿ ಶ್ರೀ ಶಿವಾನಂದ ಸ್ವಾಮಿಗಳ ನಾಲ್ಕು ಕೃತಿಗಳು ಹೊರಬಂದಿದ್ದು ಅವುಗಳಲ್ಲ ಎರಡು ಕವನ ಸಂಕಲನ ಹಾಗೂ ಒಂದು ಆಧುನಿಕ ವಚನ ಸಂಕಲನ. ಅವರ ಮೊದಲ ಕವನ ಸಂಕಲನ ಪ್ರಕಟಗೊಂಡದ್ದು ೧೯೯೪ರಲ್ಲಿ. ಅನಂತರ ಕ್ರಮವಾಗಿ 'ನನ್ನೆದೆಯ ಹಾಡು' 'ತುಂತುರ ತುಷಾರ' ಹೊರಬಂದವು. ೨೦೦೫ರಲ್ಲಿ ಹುಬ್ಬಳ್ಳಿಯ ರುದ್ರಾಕ್ಷಿಮಠ ಅವರ ಆಧುನಿಕ ವಚನಗಳನ್ನೊಳಗೊಂಡ 'ವಚನದಾಂಗುಡಿ'ಯನ್ನು ಪ್ರಕಟಿಸಿದೆ. ವಚನದಾಂಗುಡಿಯನ್ನು ಹೊರತುಪಡಿಸಿ ಉಳಿದೆಲ್ಲ ಕೃತಿಗಳು ಹಂದಿಗುಂದ ಸಿದ್ಧೇಶ್ವರ ಪ್ರಕಾಶನದಿಂದ ಪ್ರಕಟಗೊಂಡಿವೆ. ಈ ಪ್ರಕಾಶನ ಸಂಸ್ಥೆ ಇವಲ್ಲದೆ ಡಾ. ಅಶೋಕ ನರೋಡೆಯವರ 'ಏಕಲವ್ಯ ಒಂದು ಅಧ್ಯಯನ' ಹಾಗೂ 'ಬೆಳಗಾವಿ ಬಳುವಳಿ' ಎಂಬ ಕೃತಿಗಳನ್ನು ಪ್ರಕಟಿಸಿದೆ. ಹಂದಿಗುಂದ ಶ್ರೀಯವರ ವಚನಾಂಕಿತ ಆನಂದ ಶಿವಸಿದ್ಧೇಶ್ವರ ಪ್ರಭುವೇ".

ಮೈ ಬೇವರೇ ಶುದ್ಧೋದಕ

ಲಿಂಗಪೂಜೆಗೆ,

ಭಕ್ತಿಜ್ಞಾನ ವೈರಾಗ್ಯದ

ಬೆಳಗೆ ಶುಭ್ರಭಸಿತವು,

ಸಹನೆಗಂಧ ತ್ಯಾಗದಕ್ಷತೆ ಕಾಳು

ನಿಜದರ್ಶನೆಗೆ,

ಪ್ರೀತಿ ಪ್ರೇಮವೇ ಪತ್ರ ಪುಷ್ಪ

ಕ್ಷಮ ದಯ ಧೂಪದೀಪ,

ಕೋಪನಾಶವೇ ದಕ್ಷಿಣೆ,

ಸಮಾಜ ಸೇವೆಯೇ ಪ್ರದಕ್ಷಣೆ,

ನಿತ್ಯ ಲಿಂಗ ಪೂಜೆಗೆ,

ಅದುವೇ ಗುರು ಜಂಗಮದರ್ಶನೆ ನೋಡಾ

ಆನಂದಶಿವ ಸಿದ್ಧೇಶ್ವರ ಪ್ರಭುವೇ.

ಈ ಭಾಗದ ಇನ್ನೊಬ್ಬ ವಚನಕಾರ ಡಾ. ಆರ್. ಬಿ. ಚಿಲಮಿಯವರು. ಅವರ ವಚನಾಂಕಿತ ಶ್ರೀ ಗುರು ಚನ್ನ ವೃಷಭ. ಡಾ. ಚಿಲಮಿಯವರು ೨೦೦೭ ರಲ್ಲಿ ತಮ್ಮ ಮೊದಲ ಕವನ ಸಂಕಲನ 'ಬತ್ತೀಸ ರಾಗ' ಪ್ರಕಟಿಸಿದರು. ಅನಂತರ ೨೦೦೮ರಲ್ಲಿ ಅವರ 'ಅಪ್ಪ ಅವ್ವ ಮತ್ತು ನಾನು' ಪ್ರಕಟಗೊಂಡಿತು. ಆಧುನಿಕ ಕವನಸಂಕಲನ 'ವಚನ ವೃಷಭ' ಇತ್ತೀಚಿಗೆ ಬೆಳಕು ಕಂಡಿತು. ನವ್ಯೋದಯ ಜಾಡಿನಲ್ಲಿ ಬರೆಯುವ ಈ ಕಾವ್ಯದ ಒಡನಾಟ ಬದುಕಿನ ಆಪ್ತತತೆಗೆ ಕಾರಣವಾಗಿದೆ.

'ಬತ್ತಿಸ ರಾಗ' ಡಾ. ಆರ್. ಬಿ. ಚಿಲಮಿಯವರ ಮೊದಲ ಕವನ ಸಂಕಲನ. ಇದು ೨೦೦೭ರಲ್ಲಿ ಪ್ರಕಟಗೊಂಡಿದೆ. ಈ ಸಂಕಲನದಲ್ಲಿಯ ೩೨ ಕವಿತೆಗಳು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ ಹಿರಿಯರನ್ನು ಆರಾಧಿಸುತ್ತವೆ. ಅವರ ವೃತ್ತಿ ಪ್ರವೃತ್ತಿಗಳ ಮೇಲೆ ಬಹುತೇಕ ಕನ್ನಡ ಕವಿಗಳ ಪ್ರಭಾವ ದಟ್ಟವಾಗಿ ಹರಡಿಕೊಂಡಿದೆ. ಒಡಲಾಳದ ಛಲಕ್ಕೆ ಭಾವದ ತಂತಿ ಬಿಗಿದು ಬದುಕು ಶ್ರುತಿಗೊಳಿಸಿ ಬತ್ತಿಸ ರಾಗ ಹಾಡುವ ಚಿಲಮಿಯವರು ಪ್ರತಿಭಾ ಸಂಪನ್ನರು. ಕವಿತೆಗೂ ಮುಗ್ಧತೆಗೂ ಹತ್ತಿರದ ನಂಟು. ಬದುಕಿನೊಳಗಿನ ಮುಗ್ಧತೆಯ ಶೋಧವೇ ಕವಿತೆಯ ಆಶಯ.

'ಕವಿ' ಎಂಬ ಕವಿತೆ ಭಿನ್ನ ಮಾದರಿಯ ಕವಿಗಳ ಬಗ್ಗೆ ಹೇಳುತ್ತದೆ.

ನಾಲ್ಕೇ ನಾಲ್ಕು ಸಾಲು ತಮಗ ತೋಚಿದ್ದನ್ನ ಗೀಚಿ
ಕವಿಗಳೆನಿಸಿಕೊಳ್ಳೂ ಖ್ಯಾತಿಯ ಬೆನ್ನು ಹತ್ತಿದ ಜನಾ ಭಾಳ
ಹಾಂಗ ನನಗೂ ಕವಿತಾ ಬರಿಯೂ ಗುಂಗು ಹೀಡಿತು
ಅದರಾಗ ನನಗ ಪ್ರಭಾವ ಬೀರಿದ ಉದ್ದಾಮ ಕವಿಗಳ
ಕವನ ರಚನಾ ಚಾತುರ್ಯ ಮುದ್ದಾಮ ಓದಿಯೇ!
ಬೇರಗಾಗಿ ನಾನು ಯಾಕ ಕವನಾ ಬರೀಬಾರದು?

ಕರ್ನಾಟಕದೊಳಗ ಎಲ್ಲಾ ನಮೂನೆ ಕವಿಗಳದಾರು
ತಂತಮ್ಮ ಗತ್ತು, ಲಯ, ಭಾವಾರ್ಥ, ಅವರವರಿಗೇ ಗೊತ್ತು
ಮತ್ತೊಬ್ಬರಿಗೆ ತಿಳಿಯೂ ಹಾಂಗ ಹೇಳೂದು ಕವಿಧರ್ಮ
ಮುಸಕಿನ್ಯಾಗ ಹಾಕಿ ಬಡದ್ದಾಂಗ ವ್ಯಂಗವಾಗಿ ಹೇಳೂದು
ನಮ್ಮ ಗುಟ್ಟು ರಟ್ಟಾದೀತು ಅನ್ನೂ ಜಾಯಮಾನದವ್ರದಾರು
ಕೆಲವರು ಕ್ಲಿಷ್ಟ ಶ್ಲೇಷ ಪದ ಹುಡಿಕ್ಯಾಡಿ ಜೋಡಿಸಿ
ತ್ರಾಸ ತಗೊಂಡ ಪ್ರಾಸ ಹೊಂದಿಸೂ ಒಂದು ಗುಂಪಿನ ಜನಾ[೧೦]

'ತಂತಮ್ಮ ಗತ್ತು, ಲಯ, ಭಾವಾರ್ಥ ಅವರವರಿಗೇ ಗೊತ್ತು' ಎಂದು ವ್ಯಂಗ್ಯವಾಗಿ ಇರಿಯುತ್ತ, ತ್ರಾಸ ತಗೊಂಡು ಪ್ರಾಸ ಹೊಂದಿಸುವವರನ್ನು ಪೀಡಿಸುತ್ತಾರೆ. ಸಮಾಜದೊಳಗಿನ ಲೋಪ–ದೋಷಗಳನ್ನು ನಿವಾರಣಾ ಮಾಡುವ ಕಾರ್ಯ ಕವಿ ಮಹಾಶಯನದ್ದು ಎಂದು ನಂಬಿರುವ ಕವಿ ಚಿಲಮಿಯವರು ಆದರ್ಶದ ದಾರಿ ತುಳಿಯುತ್ತಾರೆ. ಕುವೆಂಪು, ರವೀಂದ್ರನಾಥ ಟ್ಯಾಗೋರ, ಹಳಕಟ್ಟಿ, ಮೃತ್ಯುಂಜಯಪ್ಪನವರು, ಕಿಟ್ಟೆಲ್, ಕಿತ್ತೂರ ಚೆನ್ನಮ್ಮ ಮುಂತಾದವರ ವ್ಯಕ್ತಿತ್ವವನ್ನು ಮಂತ್ರಮುಗ್ಧರಾಗಿ ಚಿತ್ರಿಸುತ್ತಾರೆ.

"ಪ್ರಾಚೀನ ಕವಿ ಪುಂಗವ ವಾಲ್ಮೀಕಿ–ವ್ಯಾಸ ರತ್ನದ್ವಯರು
ಇಂತಿವರ ವಾರಸುದಾರರರೆಂಬಂತೆ ಪಂಪ–ಪೊನ್ನ–ರನ್ನ ರತ್ನತ್ರಯರು
ಕುಮಾರವ್ಯಾಸ ಚಾಮರಸ ಲಕ್ಷ್ಮೀಶ ಎಂಥಾ ಮೇಧಾವಿಗಳಂತೀರಿ?
ಅವರ ಮಹಾಕಾವ್ಯಗಳೇ ನಮಗೆ ಸಾಕ್ಷಿ ಅಲ್ಲೇನು?
ಅವು ನಾಡು–ನುಡಿಗೆ ಕೀರ್ತಿ ತಂದು; ಮೇರು ಕೃತಿಗಳಾಗಿ
ಮುಗ್ಧರನ್ನಾಗಿಸ್ಯಾವು! ಓದುವ ಗುಂಗು ಹಿಡಿಸ್ಯಾವು!"[೧೧]

ಹೀಗೆ ಹಿರಿಯರನ್ನು ಸ್ತುತಿಸುತ್ತಾರೆ.

ಬರಗಾಲದ ಭೀಕರತೆಯಿಂದ ಕಂಗಾಲಾದ ರೈತರ ಬದುಕಿನ ದುಸ್ಥಿತಿಯನ್ನು ಮನ ಮಿಡಿಯುವಂತೆ ವಿವರಿಸಿದ್ದಾರೆ. ಯುಗಾದಿ ಕವಿತೆಯಲ್ಲಿ ಕವಿ ಸುಖ ದುಃಖಗಳ ಬಗ್ಗೆ ವಿವರಿಸಿದ್ದಾರೆ.

ಬೇವಿನೆಸಳು ನಾರಿಯ ಕುಡಿಹುಬ್ಬು ನೋಡಽ
ಬೇವು ಕಡ್ಡಿಯೆನಿಸಿದರೂ ಬದುಕಿನಲಿ ಅದನು
ದಿನವೂ ಸವಿದವನ ಮಹಾ ಕಾಯಿಲೆ ದೂರ ನೋಡಽ

ಬೇವು ಬಿಟ್ಟು ಬರೀ ಸಕ್ಕರೆ ಬೆಲ್ಲ ಸವಿದವರ ಬಾಳು
ದೂರವಾಗಿರುವ ಮುಸಣಗಟ್ಟೆ ತೀರ ಹತ್ತಿರ ನೋಡಽ
ಚೈತನ್ಯದ ಯುಗಾದಿ ಬಂದಽದ ನೋಡಽ [೧೨]

ಬೇವು ಹಾಗೂ ಯುಗಾದಿಗಳೆರಡೂ ಕವಿಗೆ ಚೈತನ್ಯದ ಸಂಕೇತಗಳಾಗಿವೆ. 'ಬತ್ತಿಸ ರಾಗ' ವಸ್ತು ವೈವಿಧ್ಯತೆಯೊಂದಿಗೆ ಆದರ್ಶದ ನೆಲೆಗಟ್ಟಿನ ಮೇಲೆ ಹೊಸ ಸಮಾಜ ನಿರ್ಮಾಣದ ಕನಸುಗಳನ್ನು ಸಂವಹನಗೊಳಿಸುತ್ತದೆ. ಕವಿಗೆ ಛಲಗಾರಿಕೆ ಇದೆ.

ಗುರುನಾಥ ಚಿಕ್ಕಟ್ಟಿ ೨೦೦೧ರಲ್ಲಿ 'ಸೃಷ್ಟಿ' ಸಂಕಲನವನ್ನು ಸಂಪಾದಿಸಿ ಪ್ರಕಟಿಸಿದರು. ಅದು ಈ ಭಾಗದ ಕವಿಗಳ ಮತ್ತೊಂದು ಪ್ರಾತಿನಿಧಿಕ ಕವನ ಸಂಕಲನ. ಇತ್ತೀಚಿಗೆ ಹಿಡಕಲ್ಲದ ಶ್ರೀಕಾಂತ ರಾಯಮಾನೆ ಕಾವ್ಯದಲ್ಲಿ ಹೆಚ್ಚು ಆಸಕ್ತಿ ತೋರಿಸಿದ್ದಾರೆ. ಆದರೆ ಕವಿಗೆ ಅಧ್ಯಯನದ ಬಲ ಸಾಲದು. ಪ್ರೊ. ಜಿ. ಎಸ್. ಮಠಪತಿ, ಆಯ್. ಆರ್. ಮಠಪತಿ, ಭಾಸ್ಕರ ಪತ್ತಾರ,

ವ್ಹಿ. ಎಸ್. ಮಾಳಿ, ಶಿವಾನಂದ ಬೆಳಕೂಡ, ಪಿ. ಜಿ. ಕೆಂಪಣ್ಣವರ ಆರಂಭದಲ್ಲಿ ಚಿಗುರಿದ ಭರವಸೆ ಅನಂತರ ಉಳಿಸಿಕೊಳ್ಳಲಿಲ್ಲವೆಂದೇ ಹೇಳಬೇಕು. ಸದ್ಯದ ಮಟ್ಟಿಗೆ ಕಲ್ಲೇಶ ಕುಂಬಾರ ಹಾಗೂ ಅನಸೂಯಾ ಕಾಂಬಳೆ ಈ ನಾಡಿನ ಕಾವ್ಯಲೋಕದ ಬೆಳ್ಳಿ ನಕ್ಷತ್ರಗಳು.

೪.೨ ಕಥನ ಸಾಹಿತ್ಯ :

ಬಾಗೆನಾಡಿನ ಕಥೆ ಹಾಗೂ ಕಾದಂಬರಿಗಳ ಸಮೀಕ್ಷೆಯನ್ನು ಕಥನ ಸಾಹಿತ್ಯದಲ್ಲಿ ಸಂಯೋಜಿಸಲಾಗಿದೆ. ಉತ್ತರ ಕರ್ನಾಟಕದ ದಲಿತ ಲೇಖಕರಲ್ಲೊಬ್ಬರಾದ ಶಿವರುದ್ರ ಕಲ್ಲೋಳಕರ ರಾಯಬಾಗ ತಾಲೂಕಿನ ಯಬರಟ್ಟಿಯರು. ಅವರ 'ಹೊಲಗೇರಿಯ ರಾಜಕುಮಾರ' ಕನ್ನಡದ ಬಹುಚರ್ಚಿತ ಕಾದಂಬರಿಗಳಲ್ಲೊಂದು. ದಲಿತನೊಬ್ಬನ ಸಾಮಾಜಿಕ ಒಳಸೆಳೆತಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಈ ಕಾದಂಬರಿ ನಾಡಿನ ಗಮನ ಸೆಳೆದು ಎರಡು ಆವೃತ್ತಿಗಳನ್ನು ಕಂಡಿದೆ.

ಕಲ್ಲೇಶ ಕುಂಬಾರರ 'ಸಂಭವಾಮಿ ಯುಗೇ ಯುಗೇ' ಅಭಿವ್ಯಕ್ತಿಯ ನಾವಿಣ್ಯತೆಯಿಂದ ಅಧ್ಯಯನ ಯೋಗ್ಯವಾಗಿದೆ. 'ಭವಕ್ಕೆ ಬೀಜವಾಗುವದು' ಎಂಬ ಕಥೆಗೆ ೨೦೦೨ ರಲ್ಲಿ ಪ್ರಜಾವಾಣಿ ದೀಪಾವಳಿ ಕಥಾ ಪ್ರಶಸ್ತಿಯಲ್ಲಿ ತೃತೀಯ ಬಹುಮಾನ ಬಂದಿದೆ. 'ಉರಿಯ ನಾಲಿಗೆ' ಕಥೆಗೆ ಪಾಪು ಕಥಾ ಪ್ರಶಸ್ತಿ ಸಂದಿದೆ. ಕವಿ ಅಮರೇಶ ನಡೋಣಿ, ಮೋಗಳ್ಳಿ ಗಣೇಶರಂತೆ ತುಂಬ ಸೂಕ್ಷ್ಮ ಅವಲೋಕನದಿಂದ ಕಥೆ ಬರೆಯುವ ಕಲ್ಲೇಶ ಮುಂದೊಂದು ದಿನ ನಾಡಿನ ಒಳ್ಳೆಯ ಕಥೆಗಾರಲ್ಲಿ ಒಬ್ಬರಾಗುವ ವಿಶ್ವಾಸವಿದೆ.

ಶಿವಾನಂದ ಬೆಳಕೂಡ ಅವರ ಸಂಘರ್ಷ ಸಾಹಿತ್ಯ ಕೂಟದ 'ಗೀರುಗಳು' ೧೯೬೧ರಲ್ಲಿ ಪ್ರಕಟಗೊಂಡಿರುವ ಬಾಗೆನಾಡಿನ ಕಥೆಗಾರರ ಪ್ರಾತಿನಿಧಿಕ ಕಥಾ ಸಂಕಲನ. ಇದರಲ್ಲಿ ಒಟ್ಟು ೧೨ ಕಥೆಗಳಿವೆ. ಇದು ಯಶಸ್ವಿ ಸಣ್ಣ ಕಥೆಯ ಸಾಧ್ಯತೆಗಳನ್ನು ಶೋಧಿಸುವ ಪ್ರಾಮಾಣಿಕ ಪ್ರಯೋಗ. ಈ ಸಂಕಲನದಲ್ಲಿ ಟಿ. ವಾಯ್. ಸೊನ್ನಲಗಿ, ಶಿವಾನಂದ ಬೆಳಕೂಡ ಅವರನ್ನು ಹೊರತು ಪಡಿಸಿದರೆ ಉಳಿದವರೆಲ್ಲರು ಕಥಾ ಸಾಹಿತ್ಯಕ್ಕೆ ಹೊಸಬರು.

ಈ ನಾಡಿನ ಕಥನ ಸಾಹಿತ್ಯಕ್ಕೆ ಶಿವಾನಂದ ಬೆಳಕೂಡ, ಟಿ. ವಾಯ್. ಸೊನ್ನಲಗಿ, ಡಾ. ವ್ಹಿ. ಎಸ್. ಮಾಳಿಯವರು ನೀಡಿದ ಕೊಡುಗೆ ಸ್ಮರಣೀಯ. ೧೯೮೩ರಲ್ಲಿ ಬೆಳಕೂಡರ ಚೊಚ್ಚಲ ಕಥಾಸಂಕಲನ ಕೆಂಪು ನೆರಳು ಹೊರ ಬಂದಿತು. ಅಲ್ಲಿಯ ಎಂಟು ಕಥೆಗಳು ವಿಷಯ ವೈವಿಧ್ಯ ಹಾಗೂ ಭಾಷಾ ಬಳಕೆಯ ಸೊಗಸಿನಿಂದ ಗಮನಸೆಳೆಯುತ್ತವೆ. ಅದಕ್ಕೂ ಮೊದಲು ಜ್ಯೋತಿ ಹೊಸೂರ ಅವರೊಂದಿಗೆ 'ಹೀಚು-ಹಣ್ಣು' ಸಂಕಲನವನ್ನು ಸಂಕಲಿಸಿದ್ದರು. 'ಯಜ್ಞಪಶು' ಬೆಳಕೂಡರ ಕಾದಂಬರಿ. ಇದು ಅತಿಕಾಮಿ ಮಹಿಳೆಯೊಬ್ಬಳ ಕಥೆ. ಲೈಂಗಿಕತೆಯ ಜಿಜ್ಞಾಸೆ ಕಾದಂಬರಿಯ ವಸ್ತು. ಸೆಕ್ಸನ್ನು ವೈಜ್ಞಾನಿಕವಾಗಿ ವಿಶ್ಲೇಸಿಸುವ

ಪ್ರಯತ್ನ ಇಲ್ಲಿದೆ. ಇದು ಬೆಳಕೂಡರ ಚೊಚ್ಚಿಲು ಕಾದಂಬರಿ. ದುರಂತವೆಂದರೆ 'ಯಜ್ಞಪಶು' ಬೆಳಕೂಡರ ಸೃಜನತೆಯನ್ನು ಬಲಿತೆಗೆದು ಕೊಂಡಿತು. ೧೯೯೦ರ ತರುವಾಯ ಅವರು ಸೃಜನಶೀಲತೆಯನ್ನು ಕಳೆದುಕೊಂಡರು.

ಸಂಘರ್ಷ ಸಾಹಿತ್ಯಕೂಟ ೧೯೮೦ರಲ್ಲಿ ಆರಂಭಗೊಂಡು, ಬೆಳಕೂಡರ ಕವನ ಸಂಕಲನ ತುಮುಲದ ಮೂಲಕ ಆಕಾರ ಪಡೆಯಿತು. ಅನಂತರ 'ಗೀರುಗಳು' ಕಥಾ ಸಂಕಲನ ಪ್ರಕಟಿಸಿತು. ಸಂಘರ್ಷ ಸಾಹಿತ್ಯ ಕೂಟದ ಮೂರನೇ ಕೃತಿ 'ತೀರದ ದಾಹ'. ಟಿ. ವಾಯ್. ಸೊನ್ನಿಲಗಿಯವರ ಕಾದಂಬರಿ, ಸೊನ್ನಲಿಗಿಯವರು ರಾಯಬಾಗದವರು. ತೀರದ ದಾಹ ಉದ್ವಿಗ್ನ ಪ್ರಣಯ ಕಥೆ. ಅನಂತರ ಅವರು 'ಅಂಕುರ' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದರು. ಆ ಮೇಲೆ ಸಾಹಿತ್ಯದ ವಲಯದಿಂದಲೇ ದೂರವಾದರು.

'ಕೂಡಲದ ಕಲ್ಪತರು' ಡಾ. ವ್ಹಿ. ಎಸ್. ಮಾಳಿಯವರ ಕಾದಂಬರಿ ಚಾರಿತ್ರಿಕ ವಸ್ತುವನ್ನು ಕಥನಕ್ಕೆ ಒಗ್ಗಿಸುವ ಪ್ರಯತ್ನವಿದು. ರಮ್ಯ ನಿರೂಪಣೆಯ ಮೂಲಕ ಮನ ಸೆಳೆಯುವ ಕೃತಿ ಇದು. ಕೂಡಲದ ಕಲ್ಪತರು ಕಾದಂಬರಿಯ ತರುವಾಯ ಮಾಳಿಯವರು ಸೃಜನ ಕ್ಷೇತ್ರದಿಂದ ದೂರ ಸರಿದರು. ತಮ್ಮನ್ನು ಸಂಶೋಧನೆ ಹಾಗೂ ವಿಮರ್ಶೆಯಲ್ಲಿ ಗುರುತಿಸಿಕೊಂಡರು.

೪.೩ ವಿಮರ್ಶೆ – ಸಂಶೋಧನೆ – ಸಂಪಾದನೆ :

ವಿಮರ್ಶೆ, ಸಂಶೋಧನೆ, ಸಂಪಾದನೆ ಕ್ಷೇತ್ರಗಳಲ್ಲಿ ಬಾಗೆನಾಡಿನ ಸಾಹಿತ್ಯಿಕ ಸಾಧನೆ ಉಲ್ಲೇಖನೀಯವಾದದು. ೨೦ನೇ ಶತಮಾನದ ೭೦ರ ದಶಕದಲ್ಲಿ ಪ್ರೊ. ಜ್ಯೋತಿ ಹೊಸೂರ ಇಲ್ಲಿಯ ಸಾಹಿತ್ಯ ಚಟುವಟಿಕೆಗಳ ಕೇಂದ್ರ ವ್ಯಕ್ತಿಯಾಗಿದ್ದರು. ಅವರು ಸ್ವಭಾವತಹ ಸಂಶೋಧಕರು. ಅವರ ಸಂಶೋಧನೆಯ ಆದ್ಯತಾ ಕ್ಷೇತ್ರ ಜಾನಪದ. ಅವರು ಜಾನಪದ ಕ್ಷೇತ್ರದಲ್ಲಿ ಮಾಡಿದ ಕೆಲಸ ನಾಡು ಮೆಚ್ಚುವಂತದ್ದು. 'ಜನಪದ–ಜಾನಪದ' 'ಜಾನಪದ ಉಪಾಸನೆ' 'ಜಾತಿಗಾರರ ಜಾತಕ' 'ಜನಪದ ಕುರಿತು' ಅವರ ಪ್ರಮುಖ ಜಾನಪದ ಸಂಶೋಧನೆಗಳು. ಪ್ರೊ. ಜ್ಯೋತಿ ಹೊಸೂರರ ಜಾನಪದ ಉಪಾಸನೆ ಮತ್ತೊಂದು ಸಂಪಾದನಾ ಕೃತಿ. ತಮ್ಮ ಕಾಲಗತಿ ಪ್ರಕಾಶನದಿಂದ ೧೯೮೧ರಲ್ಲಿ ಪ್ರಕಟಿಸಿದರು. ಇದು ಎಂಟು ಲೇಖನಗಳ ಸಂಪಾದನೆ. ಈ ಬಿಡಿಲೇಖನಗಳು ವಿವಿದೆಡೆ ಮಂಡಿಸಲ್ಪಟ್ಟಿವೆ. ಇಲ್ಲಿರುವ ಮೊದಲ ಲೇಖನ 'ಕನ್ನಡ ಜನಪದ ಸಾಹಿತ್ಯದ ವಿಮರ್ಶೆ' ಇದು ಅಖಿಲ ಕರ್ನಾಟಕ ಮೊದಲನೆಯ ಜನಪದ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧವಾಗಿದೆ. 'ಗ್ರಂಥಸ್ತ ಗಾದೆಗಳು', 'ಕನ್ನಡದ ವಾಗ್ರೂಢಿಗಳು' ಮತ್ತು 'ಜೇಂಗೊಡ' ಇವು 'ಕರ್ನಾಟಕ ಭಾರತಿ' ತ್ರೈಮಾಸಿಕದಲ್ಲಿ ಪ್ರಕಟವಾದ ಲೇಖನಗಳು. ಜನಪದ ಸಾಹಿತ್ಯದಲ್ಲಿ 'ದೇವ ದೇವತಾ ಸಾಮರಸ್ಯ' ಮತ್ತು ಜಾನಪದದಲ್ಲಿ ಸಹಕಾರ ಇವೆರಡು ಸಂಭಾವನಾ ಗ್ರಂಥಗಳಾಗಿ ಬರೆದ ಲೇಖನಗಳು.

'ಜಾತಿಗಾರರ ಜಾತಕ' ಕಾಲಗತಿ ಪ್ರಕಾಶನದಿಂದ ೧೯೮೫ರಲ್ಲಿ ಬೆಳಕು ಕಂಡಿತು. ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿಯ ಅತ್ಯಂತ ಮಹತ್ವದ ಅಂಗವಾಗಿರುವ ಜಾತಿಗಾರರನ್ನು ಕುರಿತು ಸಾಧಾರ ಪೂರ್ವಕವಾಗಿ ನಿರೂಪಿಸಲು ಇಲ್ಲಿ ಪ್ರಯತ್ನಿಸಲಾಗಿದೆ. "ಜಾತಿಗಾರರು ಕಲಾವಿದರು; ಅದರಲ್ಲಿಯೂ ವೃತ್ತಿ ಕಲಾವಿದರು. ವಿವಿಧ ಬಗೆಯ ಸೋಗು ಹಾಕುವುದು; ಲಾಗ ಕಸರತ್ತುಗಳ ಪ್ರದರ್ಶನ ಮಾಡುವದು ಇವರ ಕಲೆಗಾರಿಕೆಯ ಕಾಯಕಗಳು. ಇಂದಿಗೂ ಈ ವೃತ್ತಿಗಳು ಇವರಲ್ಲಿದ್ದರೂ ಬಹಳಷ್ಟು ಜನರು ಬೇರೆ ವೃತಿಗಳಿಗೆ ಇಳಿದಿದ್ದಾರೆ. ಇವರು ಅವಲಂಬಿಸಿರುವ ಮತದಲ್ಲೂ ಸ್ಥಿತ್ಯಂತರವಾಗಿದೆ. ಹಿಂದೆ ಹಿಂದೂಗಳಾಗಿದ್ದರು. ಈಗಿವರು ಮುಸಲ್ಮಾನ ಮತಸ್ಥರು"[೧೪].

ಜ್ಯೋತಿ ಹೊಸೂರರವರದು ವೈಚಾರಿಕ ಮನೋಧರ್ಮ. ಅವರು ಶಂ. ಬಾ. ಜೋಶಿ ಚಿಂತನೆಯಿಂದ ಪ್ರಭಾವಿತರಾದವರು. ಶಂ. ಬಾ. ಜೋಶಿ ಅಧ್ಯಯನಕ್ಕೆ ಅಧೀಕೃತ ಮುದ್ರಿಕೆ ಹಾಕಿದ ಶ್ರೇಯಸ್ಸು ಇವರದು. ಸತ್ಯಾನ್ವೇಷಕ ಡಾ. ಶಂ. ಬಾ. ಜೋಶಿ ಇದಕ್ಕೆ ಸಾಕ್ಷಿ. ಜೋಶಿಯವರ ಮೂರು ಕೃತಿಗಳನ್ನು 'ಕಾಲಗತಿ' ಪ್ರಕಾಶನ ಪ್ರಕಟಿಸಿತು. ಹೊಸೂರು ಬಾಗೆ ಪರಿಸರದ ಪ್ರತಿಭೆಗಳಿಗೆ ನೀರಾಗಿ, ನೆರಳಾಗಿ, ಬರಡು ನೆಲವನ್ನು ಹುಲುಸಾಗಿಸಿದರು.

ಪ್ರೊ. ಜ್ಯೋತಿ ಹೊಸೂರ ಸಂಪಾದಿಸಿರುವ "ಶಿವಶರಣರ ಕ್ರಾಂತಿಕಾರಿ ಮೌಲಿಕ ವಚನಗಳು" ಅವರ ಕಾಲಗತಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದರಲ್ಲಿ ೧೯ ಭಾಗಗಳಿದ್ದು ಶರಣರು ಮೌಢ್ಯವನ್ನು ಖಂಡಿಸುವಂತಹ ವಚನಗಳನ್ನು ಸಂಗ್ರಹಿಸಲಾಗಿದೆ. ಶಿವಶರಣರು ಸರ್ವತಂತ್ರ ಸ್ವತಂತ್ರ ಮನಸ್ಸಿನ ವಿಚಾರಶೀಲರು. ತಮ್ಮ ಮನಸ್ಸಿನಲ್ಲಿ ಹೊಳೆದ ಆಲೋಚನೆಗಳಲ್ಲಿಯ ಸತ್ವ ಮತ್ತು ಸತ್ಯವನ್ನು ವಿವಿಧ ರೀತಿಯಿಂದ ಪರಾಮರ್ಶಿಸಿ, ತಾಳ ಮೇಳದಿಂದ ಪರಿಶೀಲಿಸಿ, ಸರಿ ತಪ್ಪುಗಳನ್ನು ಅರಿತುಕೊಳ್ಳುವ ಜಿಜ್ಞಾಸುಗಳು ತಾವು ಸತ್ಯವೆಂದು ಕಂಡುಕೊಂಡುದನ್ನು, ಒಳ್ಳೆಯದೆಂದು ಸ್ವೀಕರಿಸಿದ್ದನ್ನು ಇನ್ನುಳಿದವರಿಗೆ ಎಷ್ಟೇ ಅಪ್ರೀಯವೆನಿಸಿದರೂ ತಮ್ಮ ವಚನಗಳ ಮೂಲಕ ಅಭಿವ್ಯಕ್ತಗೊಳಿಸಿದರು. ಸುತ್ತಮುತ್ತಲಿನ ಪರಿಸರವನ್ನು, ಸಾಮಾಜಿಕ ಆಗು-ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿದವರು. ವಿಶಿಷ್ಟ ಹಿತಾಸಕ್ತಿಯ ವ್ಯಕ್ತಿ-ಶಕ್ತಿಯಿಂದ ಗುಂಪು ವ್ಯವಸ್ಥೆಯ ಕುತಂತ್ರದಿಂದ ಅಂದು ಆಗುತ್ತಿದ್ದ ಶೋಷಣೆ, ವಂಚನೆಗಳನ್ನು ಬಯಲುಗೊಳಿಸಿ ಜನ ಜಾಗೃತಿ ಮಾಡಿದರು." ಆ ಆಶಯದ ವನನಗಳು ಇದರಲ್ಲಿವೆ.

ಜ್ಯೋತಿ ಹೊಸೂರ ಅವರ ನಂತರ ಅಂದರೆ ತೊಂಬತ್ತರ ದಶಕದಲ್ಲಿ ಈ ಪರಿಸರಕ್ಕೆ ಹೊಸ ಚೈತನ್ಯ ತುಂಬಿದವರು ಡಾ. ವ್ಹಿ. ಎಸ್. ಮಾಳಿ ಅವರು. ಈ ತಾಲೂಕಿನಲ್ಲಿ ಪ್ರಥಮ ಡಾಕ್ಟರೇಟ ಪ್ರಶಸ್ತಿ ಪಡೆದವರು. ಜ್ಯೋತಿ ಹೊಸೂರವರಂತೆ ತಮ್ಮೊಂದಿಗೆ ಸಾಹಿತ್ಯಕ ಪರಿಸರವನ್ನು ನಿರ್ಮಾಣ ಮಾಡಿದವರು.

ಅವರ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಎಂಬ ಮಹಾಪ್ರಬಂಧ ಪಾತ್ರ ಕೇಂದ್ರಿತ ಅಧ್ಯಯನದ ಕನ್ನಡದ ಮೊದಲ ಕೃತಿ. ಇದು ಅಧ್ಯಯನದ ಹೊಸ ಕ್ಷಿತಿಜವನ್ನು ತೆರೆಯಿತು. ಈ ಕೃತಿಯನ್ನು

ಹಿಂಬಾಲಿಸಿ ಏಕಲವ್ಯ. ಭೀಷ್ಮ, ಕುಂತಿ, ದುರ್ಯೋಧನ, ಸೀತೆ, ಗಾಂಧಾರಿ, ದ್ರೌಪದಿ, ಮೊದಲಾದ ಪಾತ್ರ ಕೇಂದ್ರಿತ ಅಧ್ಯಯನಗಳು ಹೊರಬಂದವು.

ಭೂಮ ವಿಸ್ತಾರ, 'ಅಥಣಿ ತಾಲೂಕ: ಸಾಹಿತ್ಯ ದರ್ಶನ', ಅರಳು, ಹಳಗನ್ನಡ ಕಾವ್ಯ ಸಂಚಯ ಮುಂತಾದವು ಮಾಳಿಯವರ ಪ್ರಮುಖ ಸಂಪಾದನೆಗಳು. ಹಳಗನ್ನಡ ಕಾವ್ಯ ಸಂಚಯ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿತ್ತು. ರಸಾಲ ಹಾಗೂ ಸ್ಪಂದನ ಅವರ ವಿಮರ್ಶಾ ಕೃತಿಗಳು.

ಡಾ. ವ್ಹಿ. ಎಸ್. ಮಾಳಿ, ಡಾ. ಪಿ. ಜಿ. ಕೆಂಪಣ್ಣವರ, ಡಾ. ಆರ್. ಬಿ. ಚಿಲಮಿ, ಡಾ. ವಾಯ್. ಬಿ. ಹಿಮ್ಮಡಿ, ಡಾ. ಅನಸೂಯಾ ಕಾಂಬಳೆ, ಇಲ್ಲಿಯ ಪ್ರಮುಖ ಸಂಶೋಧಕರು.

ಡಾ. ಪಿ. ಜಿ. ಕೆಂಪಣ್ಣನವರ ಕ್ರಿಯಾಶೀಲ ಸಂಶೋಧಕರು. ಕೃಷ್ಣಾತೊರೆ (ಭುಜೇಂದ್ರ ಮಹಿಶವಾಡಿಯವರ ಸಮಗ್ರ ಕಾವ್ಯ) ಜೈನ ಧರ್ಮ ಮತ್ತು ಐತಿಹ್ಯಗಳು. ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ ಮುಂತಾದವು ಅವರ ಪ್ರಮುಖ ಸಂಪಾದನಾ ಕೃತಿಗಳು.

ಡಾ. ವಾಯ್. ಬಿ. ಹಿಮ್ಮಡಿಯವರು ದಲಿತ ಬಂಡಾಯ ನೆಲೆಯ ವೈಚಾರಿಕ ಚಿಂತಕರು. ಚನ್ನಬಸವಣ್ಣನ ವಚನಗಳಲ್ಲಿ ಬಂಡಾಯ ಪ್ರಜ್ಞೆ, ಬುದ್ಧ ಮತ್ತು ಜಗತ್ತಿಗೆ ಆತನ ಸಂದೇಶ ಇವರ ಪ್ರಮುಖ ಕೃತಿಗಳು. ಕನ್ನಡ ಪುಸ್ತಕ ಪ್ರಾಧಿಕಾರದ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಲ್ಲಿ ಪ್ರಕಟಗೊಂಡ 'ಚನ್ನದಾಸರ' ಒಂದು ಜನಾಂಗಿಕ ಅಧ್ಯಯನ.

ಚೆನ್ನದಾಸರ ಸಮುದಾಯ ಕುರಿತು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಮೊದಲ ಕೃತಿ ವಾಯ್. ಬಿ. ಹಿಮ್ಮಡಿಯವರದು. ಈ ಕೃತಿಯನ್ನು ಹತ್ತು ಭಾಗಗಳಲ್ಲಿ ವಿಭಾಗಿಸಲಾಗಿದೆ. ದಾಸರ ಜಾತಿಯ ಮೂಲ ಹೇಳುವಾಗ ವಿವಿಧ ಪಂಗಡಗಳ ಪಟ್ಟಿಕೊಡಲಾಗಿದೆ. "ಇವರು ಮಾಂಸಾಹಾರಿಗಳು ಮತ್ತು ಕೈಯಲ್ಲಿ ಕೋಲನ್ನು ಹಿಡಿದು ಭೀಕ್ಷಾಟನೆ ಮಾಡುವರು. ಹಾಗೂ ತಂಬೂರಿಯ ವಾದನದೊಂದಿಗೆ ಪದವನ್ನು ಹಾಡುವರು. ಹಾಡಿನ ಕೊನೆಗೆ ಗೋವಿಂದ ಗೋವಿಂದ"[೧೩] ಎಂದು ಹೇಳುತ್ತಾರೆ.

ಡಾ. ಹಿಮ್ಮಡಿಯವರ ಮತ್ತೊಂದು ಮಹತ್ವದ ಕೃತಿ 'ಬುದ್ಧ ಮತ್ತು ಜಗತ್ತಿಗೆ ಆತನ ಸಂದೇಶ'. ಇದನ್ನು ಆರು ವಿಧದಲ್ಲಿ ವಿವರಿಸಿದ್ದು ೧೯೯೯ರಲ್ಲಿ ಬೆಳಕು ಕಂಡಿತು. ಬುದ್ಧನ ಸಂದೇಶ ಮತ್ತು ವಿವೇಕಾನಂದರ ವಿಚಾರಗಳು ಹೊರ ಜಗತ್ತಿಗೆ ತಿಳಿಸುವ ಹೊಸದೃಷ್ಟಿಕೋನದ ಸಾಕ್ಷಾತ್ಕಾರ ಈ ಕೃತಿಯಲ್ಲಿ ಕಾಣುತ್ತಿದೆ.

ಡಾ. ವ್ಹಿ. ಎಸ್. ಮಾಳಿಯವರು ಈ ನಾಡಿನ ಪ್ರಮುಖ ವಿಮರ್ಶಕರಲ್ಲೊಬ್ಬರು. ಅವರದು ರಸವಿಮರ್ಶೆ. ಅವರ 'ರಸಾಲ' ಹಾಗೂ 'ಸ್ಪಂದನ' ಪ್ರಮುಖ ವಿಮರ್ಶಾ ಕೃತಿಗಳು.

'ರಸಾಲ' ಡಾ. ವ್ಹಿ. ಎಸ್. ಮಾಳಿಯವರ ವಿಮರ್ಶಾ ಲೇಖನಗಳ ಮೊದಲ ಸಂಕಲನ. ಇದರಲ್ಲಿ ಒಂಬತ್ತು ಲೇಖನಗಳಿವೆ. ಇವು ಬಿಡಿಬಿಡಿಯಾಗಿ ಹಲವೆಡೆಗಳಲ್ಲಿ ಪ್ರಕಟಗೊಂಡಿದ್ದು 'ರಸಾಲ' ಪುಸ್ತಕ ರೂಪದಲ್ಲಿ ಒಂದೆಡೆ ಮೂಡಿ ಬಂದಿವೆ. ಇದರಲ್ಲಿಯ ಮೊದಲ ನಾಲ್ಕು ಲೇಖನಗಳು ಕುವೆಂಪು ಹಾಗೂ ಮೊಯಲಿ ರಾಮಾಯಣಗಳಿಗೆ ಸಂಬಂಧಿಸಿದೆ. ಐದನೇ ಲೇಖನ ಇದೀಗ ತಾನೆ ಬೆಳಕು ಕಂಡಿರುವ ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಶ್ರೀ ನಿರುಪಾದೀಶ್ವರರ 'ಸಂಗನ ಬಸವ ವಿಜಯ' ಮಹಾಕಾವ್ಯದ ಕುರಿತಾಗಿದೆ. ಅನಂತರದ ಲೇಖನ ಮಂಕುತಿಮ್ಮನ ಕಗ್ಗ ವಿಶ್ಲೇಷಿಸುತ್ತದೆ. ಕೊನೆಯ ಲೇಖನ ೧೯೮೭ರಲ್ಲಿ ಬರೆದದ್ದು ಉಳಿದಲ್ಲ ಲೇಖನಗಳು ಇತ್ತೀಚಿನವು. ಈ ಕೃತಿ ಶ್ರೀ ಗುರು ಚನ್ನಬಸವೇಶ್ವರ ಗ್ರಂಥಮಾಲೆಯಿಂದ ೨೦೦೫ರಲ್ಲಿ ಪ್ರಕಾಶನಗೊಂಡಿದೆ.

ಮೊಯಲಿಯವರ ರಾಮಾಯಣವನ್ನು 'ಜನತಾ ರಾಮಾಯಣ' ಎಂದು ಕರೆಯುವ ಮಾಳಿಯವರು ಅಲ್ಲಿಯ ರಾವಣನ ಸಾಮ್ರಾಜ್ಯವನ್ನು ಹೀಗೆ ವಿಶ್ಲೇಷಿಸುತ್ತಾರೆ.

"ಜನತಾರಾಜ್ಯವೇ ರಾಮರಾಜ್ಯ. ಅದನ್ನು ಭೂತದಲ್ಲಿ ಕೆದಕದೆ ಭವಿಷ್ಯದಲ್ಲಿ ಹುಡುಕಬೇಕು. ಗುಮ್ಮಟಗಳನ್ನುರುಳಿಸಿ ಮಂದಿರ ನಿರ್ಮಿಸಿದ ಮಾತ್ರಕ್ಕೆ ರಾಮರಾಜ್ಯ ಬಾರದು. ಅದು ಜನತೆಯ ಅಂತರಂಗದಿಂದ ಮೂಡಿಬರಬೇಕು. ಜನಪದರು ರಾಮರಾಜ್ಯದ ಶಿಲ್ಪಿಗಳು. ಸಂವಹನ, ಸಂವಾದ, ಚರ್ಚೆ, ವಿಮರ್ಶೆಗಳಿಗೆ ಅವಕಾಶವಿಲ್ಲದ ಸರ್ವಾಧಿಕಾರಿ ಆಡಳಿತವನ್ನು ಮೊಯಲಿ ರಾವಣ ರಾಜ್ಯವೆಂದು ಕರೆಯುವರು"[೧೪]. ಅದೊಂದು ಸಾಂಸ್ಕೃತಿಕ ಪತನ : ಉತ್ಪಾತ ಅಲ್ಲಿಯ ಆಡಳಿತಗಾರರೆಲ್ಲ ಉಗ್ರಗಾಮಿಗಳು. ಅದು ಮೃತ್ಯುಲೋಕದ ನರಕ.

ಒಟ್ಟಿನಲ್ಲಿ 'ರಸಾಲ' ರಸದೌತಣದ ಸ್ವಾದಿಷ್ಟ ಮಾವಿನ ಹಣ್ಣಿನಂತಿದೆ. ಆಧುನಿಕ ಕನ್ನಡ ಮಹಾಕಾವ್ಯಗಳ ಪರಂಪರೆಯ ಬಗೆಗೆ ತೋರಿದ ಆಸಕ್ತಿಯ ಫಲವೇ ಈ 'ರಸಾಲ'.

ಸ್ಪಂದನ ಡಾ. ಮಾಳಿಯವರ ವಿಮರ್ಶಾ ಲೇಖನಗಳ ಎರಡನೇ ಸಂಕಲನವಾಗಿದ್ದು, ೨೦೦೭ರಲ್ಲಿ ಪ್ರಕಟಗೊಂಡಿದೆ. ಸ್ಪಂದನವನ್ನು ಎರಡು ಭಾಗವಾಗಿ ವಿಂಗಡಿಸಿದ್ದು, ಮೊದಲ ಭಾಗದಲ್ಲಿ ಏಳು ಲೇಖನಗಳು ಮತ್ತೆ ಎರಡನೆಯ ಭಾಗದಲ್ಲಿ ಏಳು ಲೇಖನಗಳು. ಒಟ್ಟು ಹದಿನಾಲ್ಕು ಲೇಖನಗಳ ಸಂಕಲನವಿದು. ಮೊದಲ ಏಳು ಲೇಖನಗಳು ಕಾವ್ಯಕ್ಕೆ ಸಂಬಂಧಿಸಿವೆ. ಎರಡನೆಯ ಭಾಗದಲ್ಲಿಯ ಲೇಖನಗಳು ಗದ್ಯ ಸಾಹಿತ್ಯವನ್ನು ದರ್ಶಿಸುತ್ತವೆ.

ಮೊದಲ ವಿಭಾಗದಲ್ಲಿಯ ಲೇಖನಗಳು ಆಧುನಿಕ ಕಾವ್ಯದ ಒಲವುಗಳನ್ನು ಹುಡುಕುತ್ತವೆ. ಉತ್ತರ ಕರ್ನಾಟಕದ ಹಿರಿ–ಕಿರಿಯ ಕವಿಗಳ ಕಾವ್ಯಗಳ ಅವಲೋಕನ ಇಲ್ಲಿದೆ. ಇಲ್ಲಿಯ ಕೆಲವು ಲೇಖನಗಳು ಕಾವ್ಯಸಮೀಕ್ಷೆಗೆ ಮೀಸಲಾಗಿದ್ದರೆ ಮತ್ತೆ ಕೆಲವು ಪರಿಚಯಕ್ಕೆ ಮಾತ್ರ ಸೀಮಿತ. ಅದೂ ಓದುಗನ ಸ್ಪಂದನೆಯ ತರಂಗಗಳು ಅವುಗಳಲ್ಲಿ ದಾಖಲಿತಗೊಂಡಿವೆ. ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಮನುಷ್ಯನ ಹುಟುಕಾಟ, ನೆಲದ ನಂಟಿನ ಗಂಧರ್ವ ಕಾವ್ಯ : ಗೀತಗಾಂಧಾರ, ಜೀವನ ಸಂಗೀತದ ಜೀವ : ಭಾವ ಪರಿಚಯ, ಡಾ. ಸಂಗಮೇಶ ಹಂಡಗಿಯವರ ಕಾವ್ಯ ಸಂಗಮ. ಕಡಲ ಪ್ರೇಮಿಯ ಸುಕುಮಾರಿ : ಕರಾವಳಿ, ಗರಿಗೆದರುವ ತತ್ವ–ಭಾವ : ಭಾವಾಂತರ, ಈಶ್ವರ ಸಣಕಲ್ಲರ ಕಾವ್ಯವಲೋಕನ ಇವು ಮೊದಲ ಭಾಗದ ಕಾವ್ಯದ ಅವಲೋಕನಕ್ಕೆ ಸಂಬಂದಿಸಿದ ಲೇಖನಗಳು.

ಎರಡನೆಯ ಭಾಗವಾದಲ್ಲಿ ಹಲವು ಗದ್ಯ ಕೃತಿಗಳನ್ನು ಅವಲೋಕಿಸಸಲಾಗಿದೆ. ಬ. ಗಿ. ಯಲ್ಲಟ್ಟಿಯವರ ಗದ್ಯ, ಡಾ. ಕಲಬುರ್ಗಿಯವರ ಖರೇ ಖರೇ ಸಂಗ್ಯಾಬಾಳ್ಯಾ, ಪರಿಸರ ಪ್ರಜ್ಞೆಯ ಬಸವ ಚಿಂತನೆ. ಬಸವಣ್ಣನವರ ದೇವರು, ಜನಪದ ಸಂಸ್ಕೃತಿಯ ಸಾಕ್ಷಚಿತ್ರ : ಜಾನಪದ ಸೌಂದರ್ಯ, ಬಸವ ಭಾವದ ಸುತ್ತ : ಒಂದು ಸುತ್ತು, ಮನದ ಭಾರ ಹಗುರಗೊಳಿಸುವ ಅರ್ಧಾಂಗಿಯ ಸಂಗ, ಅಧ್ಯಯನದ ಆಕರ : ಜಾನಪದ ಸಮಾಲೋಕನ ಲೇಖನಗಳು ಈ ಭಾಗದಲ್ಲಿವೆ.

೪.೪ ಮಕ್ಕಳ ಸಾಹಿತ್ಯ :

ಗುರುಸಿದ್ದಪ್ಪ ಬಾಣಸಿ ಹಾಗೂ ಎಲ್. ಎಸ್. ಚೌರಿ ಬಾಗೆನಾಡಿನ ಉಲ್ಲೇಖನಿಯ ಮಕ್ಕಳ ಸಾಹಿತಿಗಳು. ನಿವೃತ್ತ ಶಿಕ್ಷಕರಾಗಿರುವ ಗು. ಸಿ. ಬಾಣಸಿ ಬೆಕ್ಕೇರಿಯವರು. 'ನವಿಲಗರಿ', 'ಕಾಡಿನ ಹಕ್ಕಿ' ಹಾಗೂ 'ಹೊನ್ನಗರಿಗಳು' ಎಂಬ ಮೂರು ಮಕ್ಕಳ ಕವನ ಸಂಕಲನಗಳನ್ನು ಪ್ರಕಟಿಸಿರುವರು. ಅವರ ನವಿಲಗರಿ ಕೃತಿಗೆ ಪುಸ್ತಕ ಸೊಗಸು ಪ್ರಶಸ್ತಿ ಲಭಿಸಿದೆ.

ಎಲ್. ಎಸ್. ಚೌರಿ ಕುಡಚಿಯವರು. 'ಮಗು ನೀ ನಗು' ಅವರ ಮೊದಲ ಕವನ ಸಂಕಲನ. 'ನೂರು ಹನಿ' ಹನಿಗವನಗಳ ಸಂಕಲನ. 'ಮಾವಿನ ಮರ' ಮಕ್ಕಳ ಕಥಾ ಸಂಕಲನ. 'ಆಕಾಶ ಕಾವ್ಯ' ಹೊಂಬೆಳಕು. 'ಉಪ್ಪಾರ ಕ್ರಾಂತಿ', 'ಸಂಗೀತ ದರ್ಶನ' ಅವರ ಸಂಪಾದನಾ ಕೃತಿಗಳು.

೧೯೮೯ರಲ್ಲಿ ಎಸ್. ಟಿ. ಅಥಣಿ 'ಮಕ್ಕಳ ಮಧುರಗೀತೆ'ಗಳನ್ನು ಪ್ರಕಟಿಸಿದರು. ಅವರು 'ಮಗುವಿನ ಮೊದಲ ಬರಹ', 'ಕಲಿಯುಗದ ಭೀಮ', 'ಸಂಗೋಳ್ಳಿ ರಾಯಣ್ಣ', 'ಕರ್ನಾಟಕ ಮಹಿಮೆ', 'ಮಾನವ ಸಂಪನ್ಮೂಲ' ಕೃತಿಗಳನ್ನು ಪ್ರಕಟಿಸಿದ್ದಾರೆ.

ಅವಳೆ ಕುಮಾರ, ಈ ತಾಲೂಕಿನ ಮತ್ತೊಬ್ಬ ಮಕ್ಕಳ ಸಾಹಿತಿ. 'ಯುಗಪ್ರವರ್ತಕ ಡಾ. ಅಂಬೇಡ್ಕರ'(ಜೀವನ ಚರಿತ್ರೆ), 'ಝಾಂನ್ಸಿರಾಣಿ ಲಕ್ಷ್ಮೀಬಾಯಿ'(ಮಕ್ಕಳ ನಾಟಕ), 'ನನ್ನೊಡಲ ಹಾಡು' (ಕವನ ಸಂಕಲನ), 'ಆಧುನಿಕ ಏಕಲವ್ಯ'(ನಾಟಕ) ಇವು ಪ್ರಕಟಿತ ಕೃತಿಗಳು.

೪.೫ ಇತರ :

'ತೆನೆತುಂಬಿ ನಿಂತಾವ' ಕವನ ಸಂಕಲನದ ಶಿವಾನಂದ ಗುರವ, 'ಪಂಚರಂಗಿ ಪುಟ್ಟ' ಮಕ್ಕಳ ಕವನ ಸಂಕಲನದ ಅನೀಲ ಶಿರಹಟ್ಟಿ, 'ಹೊಸ ಹೆಜ್ಜೆಗಳು' ಸಂಕಲನದ ಮನೋಹರ ಕಾಂಬಳೆ ಮೊದಲಾದವರನ್ನು ದಾಖಲಿಸಲೇಬೇಕು. ಡಾ. ಚಂದ್ರಶೇಖರ ಕಂಬಾರ, ಬಿ, ಎ, ಸನದಿ, ಡಾ. ಬಸವರಾಜ ಸಬರದ, ಡಾ. ಅಶೋಕ ನರೋಡೆ, ಎ. ಎಂ. ಅಲಿಬಾದಿ ಈ ನಾಡಿನಲ್ಲಿ ಕೆಲವು ದಿನ ಇದ್ದು ಹೋದವರು. ಡಾ. ಬಿ. ವಿ. ಗುಂಜಟ್ಟಿ, ಎಸ್. ವಾಯ್. ಹಂಜಿ, ಡಾ. ಬಿ. ಎಂ. ಪಾಟೀಲ, ಇದೇ ತಾಲೂಕಿನವರು. ಗುಂಜಟ್ಟಿಯವರು ಈಗ ಧಾರವಾಡದವರು, ಹಂಜಿ ಚಿಕ್ಕೋಡಿಯವರು, ಬಿ. ಎಂ. ಪಾಟೀಲ ಮಹಾಲಿಂಗಪೂರದವರು. ಈ ಕಾರಣದಿಂದ ಅವರ ಸಾಹಿತ್ಯ ಕೃಷಿಯನ್ನು ಇಲ್ಲಿ ಪ್ರಸ್ತಾಪಿಸಿರುವುದಿಲ್ಲ.

ಬಾಗೆನಾಡಿನ ಸಾಹಿತ್ಯ ಕೃಷಿಯಲ್ಲಿ ಈ ಐದು ಪ್ರಕಾಶನ ಸಂಸ್ಥೆಗಳ ಪಾತ್ರ ತುಂಬ ಮುಖ್ಯವಾದದ್ದು.

೧. **ಕಾಲಗತಿ ಪ್ರಕಾಶನ, ರಾಯಬಾಗ**
೨. **ಸಂಘರ್ಷ ಸಾಹಿತ್ಯ ಕೂಟ, ರಾಯಬಾಗ**
೩. **ಸ್ನೇಹಕುಂಜ ವಿಚಾರ ವೇದಿಕೆ, ಹಾರೂಗೇರಿ**
೪. **ಶರಣ ವಿಚಾರವಾಹಿನಿ, ಹಾರೂಗೇರಿ**
೫. **ಸಿದ್ಧೇಶ್ವರ ಪ್ರಕಾಶನ ಸಂಸ್ಥೆ, ಹಂದಿಗುಂದ**

೧. ಕಾಲಗತಿ ಪ್ರಕಾಶನ :

ದಟ್ಟ ಜಾನಪದ ಪರಿಸರವನ್ನು ಪಡೆದ ರಾಯಬಾಗ ತಾಲೂಕಿಗೆ ಸಾಹಿತ್ಯ ಜ್ಯೋತಿಯಾಗಿ ಬಂದವರು ಪ್ರೊ. ಜ್ಯೋತಿ ಹೊಸೂರ. ಈ ನಾಡಿನ ಧೀಮಂತ ಲೇಖಕರ ಪಂಕ್ತಿಯಲ್ಲೊಬ್ಬರು. ಇವರು ಪ್ರಸ್ತುತ ತಾಲೂಕಿನ ಸಾಹಿತ್ಯ ಕೃಷಿಯನ್ನು ಬೆಳಸಿ, ಉಳಿಸಿ ಸಮೃದ್ಧಗೊಳಿಸಿದವರೆಂದರೆ ತಪ್ಪೇನಿಲ್ಲ.

೧೯೭೮ ರಲ್ಲಿ ಪ್ರೊ. ಜ್ಯೋತಿ ಹೊಸೂರವರು ಕಾಲಗತಿ ಪ್ರಕಾಶನ ಸಂಸ್ಥೆ ಪ್ರಾರಂಭಿಸಿದರು. ೨೫ ಕ್ಕೂ ಹೆಚ್ಚು ಕೃತಿಗಳನ್ನು ಕಾಲಗತಿ ಪ್ರಕಟಿಸಿದೆ. ಕಾಲಗತಿ ಪ್ರಕಾಶನದ ಕೆಲವು ಕೃತಿಗಳು ನಿಜವಾಗಿಯೂ ಅಮೂಲ್ಯ. ಶಂ. ಬಾ. ಜೋಶಿಯವರ ಮೂರು ಕೃತಿಗಳು ಕಾಲಗತಿಯಲ್ಲಿ ಬೆಳಕು ಕಂಡಿವೆ. ಗೌರೀಶ ಕಾಯ್ಕಣಿ, ಬಿ. ಎ. ಸನದಿ, ನಿಂಗಣ್ಣ ಸಣ್ಣಕ್ಕಿಯಂಥ ಪ್ರಸಿದ್ಧ ಸಾಹಿತಿಗಳ ಕೃತಿಗಳನ್ನು ಪ್ರಕಟಿಸುವ ಮೂಲಕ 'ಕಾಲಗತಿ' ಕಾಲವನ್ನು ಮೀರಿ ನಿಂತಿದೆ. ಇತ್ತೀಚಿಗೆ ಕಾಲಗತಿ ನಿಂತಿದೆ. ಚಟುವಟಿಕೆ ಕೇಂದ್ರವಾಗಿದ್ದ ರಾಯಬಾಗದಲ್ಲಿ ಶೂನ್ಯ ತುಂಬಿದೆ. ಕಾಲಗತಿ ಪ್ರಕಾಶನದ ಪ್ರಕಟಿತ ಪುಸ್ತಕಗಳ ಪಟ್ಟಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

೨. ಸಂಘರ್ಷ ಸಾಹಿತ್ಯ ಕೂಟ :

ಕಾಲಗತಿ ಪ್ರಕಾಶನಕ್ಕೆ ಸಮಾಂತರವಾಗಿ ಶಿವಾನಂದ ಬೆಳಕೂಡರು ೧೯೮೦ರಲ್ಲಿ ಸಂಘರ್ಷ ಸಾಹಿತ್ಯ ಕೂಟ ಆರಂಭಿಸಿದರು. ಅದು ೧೫ ವರುಷಗಳಲ್ಲಿ ೧೪ ಕೃತಿಗಳನ್ನು ಈ ನಾಡಿಗೆ ನೀಡಿದೆ. ಇದು ಬಾಗೆನಾಡಿನ ಪ್ರತಿಭೆಗಳಿಗೆ ಅಭಿವ್ಯಕ್ತಿ ವೇದಿಕೆಯಾಗಿ ದುಡಿಯಿತು.

೩. ಸ್ನೇಹ ಕುಂಜ ವಿಚಾರ ವೇದಿಕೆ :

ಕಾಲಗತಿ ಹಾಗೂ ಸಂಘರ್ಷ ಸಾಹಿತ್ಯ ಕೂಟಗಳ ಧೋರಣೆಗೆ ಭಿನ್ನವಾಗಿ ಮೈದೆಳದ ಮತ್ತೊಂದು ಈ ನಾಡಿನ ಪ್ರಕಾಶನ ಸಂಸ್ಥೆ 'ಸ್ನೇಹ ಕುಂಜ ವಿಚಾರ ವೇದಿಕೆ'. ಇದು ಆಯ್. ಆರ್. ಮಠಪತಿಯವರ ಸಾಧನೆಯ ಹಿರಿಮೆ. ೧೯೮೫ರಲ್ಲಿ ಆರಂಭಗೊಂಡ ಸ್ನೇಹ ಕುಂಜ ವಿಚಾರ ವೇದಿಕೆ ವಿನೂತನ ಪ್ರಯೋಗಗಳನ್ನು ಜಾರಿಗೊಳಿಸಿತು. ಕಾವ್ಯ, ಕಥಾ ಕಮ್ಮಟಗಳನ್ನು ಏರ್ಪಡಿಸಿ, ಉಪನ್ಯಾಸ ಕಾರ್ಯಕ್ರಮಗಳನ್ನು ಸಂಯೋಜಿಸಿ, ಜನಪದ ಕಲಾಮೇಳ ಜರುಗಿಸಿ, ಸಾರ್ವಜನಿಕ ಸಾಹಿತ್ಯ ವೇದಿಕೆಯಾಗಿ ಮೆರೆಯಿತು. ಏಳಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಬಾಗೆನಾಡಿನ ಸಂಸ್ಕೃತಿಕ ಇತಿಹಾಸದಲ್ಲಿ ಸ್ನೇಹದ ಹೆಜ್ಜೆಗಳನ್ನು ದಾಖಲಿಸಿತು.

ಶ್ರೀ ಆಯ್. ಆರ್. ಮಠಪತಿಯವರ ಸ್ನೇಹಕುಂಜ ವಿಚಾರ ವೇದಿಕೆಯು ವಿನೂತನ ಪ್ರಯೋಗ ಜಾರಿಗೊಳಿಸಿದ್ದು, ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಪ್ರಯೋಗವಾಗಿತ್ತು. ಕನ್ನಡ ಕಥಾ ಪರಂಪರೆಯ ಪರಿಚಯ, ಪ್ರಯೋಗಿಕ ವಿಮರ್ಶೆ. ಸ್ವಂತ ಬರಹಗಳ ಚರ್ಚೆ, ಸೃಜನಶೀಲ ಸಾಹಿತಿಗಳೊಂದಿಗೆ ಸಂವಾದ ಮತ್ತು ಉಪನ್ಯಾಸಗಳ ಮೂಲಕ ಅರಿವನ್ನುಂಟುಮಾಡಿಕೊಡುವ ಉದ್ದೇಶದಿಂದ ಏಳುದಿನಗಳ ಕಾಲ ವಿವಿಧ ಕಮ್ಮಟವನ್ನು ಏರ್ಪಡಿಸಿ ಅವುಗಳ ನೆನಪಿಗಾಗಿ ವಿವಿಧ ಸಂಕಲನಗಳನ್ನು ಹೊರತಂದಿತು.

ಒಂದೇ ತಲೆಬರಹವನ್ನು ಅನೇಕ ಕಥೆಗಾರರಿಗೆ ಸೂಚಿಸಿದಾಗ ಉತ್ತಮ ಪ್ರಕ್ರಿಯೆ ಮೂಡಿತು. ಆ ಸಂಕಲನಕ್ಕೆ "ಬೆಳಕುಹರಿದುತ್ತು" ಎಂಬ ತಲೆ ಬರಹ ಕೊಟ್ಟರು. ಇಂತಹ ಪ್ರಯೋಗ ಬೇರೆಯಲ್ಲೂ ನಡೆದಿಲ್ಲ ಇದು ಕರ್ನಾಟಕದಲ್ಲಿ ನಡೆದಂತ ಏಕೈಕ ಪ್ರಯೋಗ ಎನ್ನಬಹುದು.

೪. ಶರಣ ವಿಚಾರ ವಾಹಿನಿ ಹಾರೂಗೇರಿ :

ಶರಣ ವಿಚಾರ ವಾಹಿನಿ ಹಾರೂಗೇರಿ ಶರಣರ ವೈಚಾರಿಕತೆಯನ್ನು ಪ್ರಕಟಿಸುವ ಸಂಘಟನಾ ಸಂಸ್ಥೆ. ಸ್ನೇಹ ಕುಂಜ ವಿಚಾರ ವೇದಿಕೆಯನ್ನು ಕಟ್ಟಿದ ಆಯ್. ಆರ್. ಮಠಪತಿಯವರ ಬದಲಾದ ನಿಲುವಿನ ಹೊಸ ಸಂಘಟನೆ ಇದು. ಸ್ನೇಹ ಕುಂಜ ವಿಚಾರ ವೇದಿಕೆ ಸಾರ್ವಜನಿಕ ಸಾಹಿತ್ಯ ವೇದಿಕೆ.

ಇದು ಕೇವಲ ಶರಣರ ಸಾಹಿತ್ಯಕ್ಕೆ ಸಂಬಂಧಿಸಿದ ವೈಚಾರಿಕ ವೇದಿಕೆ. ಬ. ಗಿ. ಯಲ್ಲಟ್ಟಿಯವರ ಭಕ್ತಿಯೆಂಬ ಪೃಥ್ವಿಯ ಮೇಲೆ ವಚನ ವಾಖ್ಯಾನವನ್ನು ಪ್ರಕಟಿಸಿರುವದರ ಮೂಲಕ ಗ್ರಂಥಮಾಲೆ ಆರಂಭಿಸಿತು. ಶರಣರ ಬದುಕು ಬದುಕಿದ ಶರಣ ಜೀವಿಗಳ ಕುರಿತು ಗ್ರಂಥ ಪ್ರಕಟಿಸಿತು.

೫. ಶ್ರೀ ಸಿದ್ಧೇಶ್ವರ ಪ್ರಕಾಶನ ಸಂಸ್ಥೆ, ಹಂದಿಗುಂದ :

ಹಂದಿಗುಂದದ ಶ್ರೀ ಶಿವಾನಂದ ಮಹಾಸ್ವಾಮಿಗಳು ಈ ಪ್ರಕಾಶನ ಸಂಸ್ಥೆಯ ರೂವಾರಿ. ಇದು ನಾಲ್ಕು ಕೃತಿಗಳನ್ನು ಪ್ರಕಟಿಸಿದೆ. ಇದರ ವೇಗ ಕಡಿಮೆ ಇದ್ದರೂ ಜೀವಂತಿಕೆ ಉಳಿಸಿಕೊಂಡಿದೆ.

ಹಂದಿಗುಂದದ ಪ್ರಕಾಶನ ಸಂಸ್ಥೆಯನ್ನು ಹೊರತುಪಡಿಸಿ ಉಳಿದ ಪ್ರಕಟನಾ ಸಂಸ್ಥೆಗಳು ಹೆಚ್ಚು ಕಡಿಮೆ ನಿಂತು ಹೋಗಿವೆ. ಈಗ ಸಾಹಿತ್ಯ ಕೃಷಿ ಹೆಚ್ಚಾಗಿದ್ದರೂ ವ್ಯಕ್ತಿಗತ ನೆಲೆಯಲ್ಲಿಯೇ ನಡೆಯುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾ ಘಟಕಕ್ಕೆ ಹಾರೂಗೇರಿಯ ಶ್ರೀ ವೃಷಭೇಂದ್ರ ಕಾಲೇಜು ಕೇಂದ್ರವಾಗಿ, ಕಳೆದು ಹದಿನೈದು ವರುಷಗಳಿಂದ ಸೇವೆ ಸಲ್ಲಿಸುತ್ತಲಿದೆ. ತಾಲೂಕು ಶ್ಲಾಘನೀಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿದೆ. ಇದೀಗ ಅಂದರೆ ೨೦೦೬ ರಲ್ಲಿ ಆರಂಭಗೊಂಡ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ ಬಾಗೆನಾಡಿನ ಸಾಹಿತ್ಯದ ಪರಿಸರವನ್ನು ಪುನರ್ ನಿರ್ಮಿಸುತ್ತಲಿದೆ.

ಡಾ. ವ್ಹಿ. ಎಸ್. ಮಾಳಿಯವರ ನೇತೃತ್ವದ ಹಾರೂಗೇರಿಯ ಸಿರಿಗನ್ನಡ ಮಂಟಪ, ಎಸ್. ಜಿ. ಕ್ಯಾಸ್ತಿಯವರ ನೇತೃತ್ವದ ಹಿಡಕಲ್ಲದ ಸಾಹಿತ್ಯ ಚಿಂತನ ಬಳಗ ಬಿ. ಎ. ಸನದಿಯವರ ನೇತೃತ್ವದ ರಂಗ ತರಂಗ ವೇದಿಕೆ, ರಾಮಣ್ಣ ಗಸ್ತಿಯವರ ಅಧ್ಯಕ್ಷತೆಯ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾ ಘಟಕ ಸಕ್ರಿಯವಾಗಿವೆ.

ಬಾಗೆನಾಡು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವದರಿಂದ ಇಲ್ಲಿ ಮರಾಠಿ ಅಲ್ಪ ಸ್ವಲ್ಪ ಉಳಿದುಕೊಂಡಿದೆ. ಇಲ್ಲಿಂದ ಮಹಾರಾಷ್ಟ್ರಕ್ಕೆ ಹೋಗಿ ಉತ್ತಮ ಕೃತಿಗಳನ್ನು ರಚಿಸಿದವರೂ ಉಂಟು. ರಾಯಬಾಗದ ಸಖಾ ಕಲಾಲ ಕೊಲ್ಹಾಪುರದಲ್ಲಿ ನೆಲೆಸಿ, ಅತ್ಯುತ್ತಮ ಕಥೆಗಳನ್ನು ರಚಿಸಿರುವರು. ಶಿರಗೂರದ ಡಾ. ನೇಮಿಚಂದ್ರ ಅಕ್ಕೋಳೆ ಜಯಸಿಂಗಪುರದಲ್ಲಿ ನೆಲೆಸಿ, ಉತ್ಕೃಷ್ಟ ಧಾರ್ಮಿಕ ಕೃತಿಗಳನ್ನು ಮರಾಠಿಯಲ್ಲಿ ಸಂಪಾದಿಸಿದ್ದಾರೆ. ಒಟ್ಟಿನಲ್ಲಿ ಬಾಗೆ ಪರಿಸರದ ಸಾಹಿತ್ಯ ಆಶಾದಾಯಕವಾಗಿದೆ.

ಟಿಪ್ಪಣಿಗಳು

೧) ಕಲ್ಲೇಶ ಕುಂಬಾರ : ಪುರುಷ ದಾರಿಯ ಮೇಲೆ : ಪುಟ–೩೩.

೨) ಅದೇ. ಪುಟ–೮

೩) ಶಿವಾನಂದ ಬೆಳಕೂಡ : ಮೆಟ್ಟು : (ಮುನ್ನುಡಿ), ಪುಟ–೧೨.

೪) ಶಿವಾನಂದ ಬೆಳಕೂಡ : ತುಮುಲ : (ಮುನ್ನುಡಿ), ಪುಟ–೧೩.

೫) ಶಿವಾನಂದ ಬೆಳಕೂಡ : ಮೆಟ್ಟು : (ಮುನ್ನುಡಿ), ಪುಟ–೩೨.

೬) ಅನಸೂಯಾ ಕಾಂಬಳೆ : ಮುಳ್ಳ ಕಂಟಿಯ ನಡುವೆ : (ಮುನ್ನುಡಿ), ಪುಟ–೮.

೭) ಅದೇ. ಪುಟ–೧೮.

೮) ಭಾಸ್ಕರ ಪತ್ತಾರ : ಹೇಳುವಾಗ ಆತು : (ಮುನ್ನುಡಿ), ಪುಟ–೫೦.

೯) ಅದೇ. ಪುಟ–೫೦.

೧೦) ಆರ್. ಬಿ. ಚಿಲಮಿ : ಬತ್ತೀಸ ರಾಗ : ಪುಟ–೨.

೧೧) ಅದೇ.

೧೨) ಜ್ಯೋತಿ ಹೊಸೂರ : ಜಾತಿಗಾರರ ಜಾತಕ : (ಬಿನ್ನಹ)

೧೩) ವಾಯ್. ಬಿ. ಹಿಮ್ಮಡಿ : ಚನ್ನದಾಸರು : ಪ್ರಾಸ್ತಾವಿಕ, ಪುಟ–೧೫.

೧೪) ವ್ಹಿ. ಎಸ್. ಮಾಳಿ : ರಸಾಲ : (ತಮ್ಮೊಂದಿಗೆ), ಪುಟ–೨.

೧೫) ವ್ಹಿ. ಎಸ್. ಮಾಳಿ : ಸ್ಪಂದನ : (ತಮ್ಮೊಂದಿಗೆ), ಪುಟ–೧.

ಅಧ್ಯಾಯ – ೫

ಸಮಾರೋಪ

ಅಧ್ಯಾಯ – ೫

ಸಮಾರೋಪ

ಬಾಗೆ ಪರಿಸರದ ಸಾಹಿತ್ಯದ ಅಧ್ಯಯನ ರಾಯಬಾಗ ತಾಲೂಕಿನ ಸಾಹಿತ್ಯ ಚರಿತ್ರೆ ರಚನೆಯ ಮೊದಲ ಪ್ರಯತ್ನ. ಈ ಪ್ರಯತ್ನವನ್ನು ಆರಂಭಿಸಿದವರು ಪ್ರೊ. ಜ್ಯೋತಿ ಹೊಸೂರ. ಆಯ್. ಬಿ. ಎಚ್. ಪ್ರಕಾಶನ ಸಂಸ್ಥೆಯ ತಾಲೂಕಾ ದರ್ಶನಗಳ ಮಾಲಿಕೆಯಲ್ಲಿ ರಾಯಬಾಗದ ಕುರಿತು ಹೊಸೂರ ಬರೆದಿದ್ದರು. ಅನಂತರ ಡಾ. ಪಿ. ಜಿ. ಕೆಂಪಣ್ಣವರ ಬೆಳಗಾವಿ ಸಾಹಿತ್ಯದರ್ಶನ ಎಂಬ ಕೃತಿಯನ್ನು ಸಂಪಾದಿಸಿ ಅದರಲ್ಲಿ ರಾಯಬಾಗ ತಾಲೂಕಾ ಸಾಹಿತ್ಯದರ್ಶನವನ್ನು ಅವರೇ ಕಟ್ಟಿಕೊಟ್ಟರು. ಆ ಮೇಲೆ ಡಾ. ವ್ಹಿ. ಎಸ್. ಮಾಳಿ ರಾಯಬಾಗ ಪರಿಸರದ ಸಾಹಿತ್ಯವನ್ನು ಪರಿಚಯಿಸುವ ಕೆಲವು ಬಿಡಿ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಆದರೆ ಈ ಅಧ್ಯಯನದ ಗಂಭೀರ ಪ್ರಯತ್ನ ಇದೇ ಮೊದಲನೆಯದು. ಒಂದು ತಾಲೂಕಿನ ಸಾಹಿತ್ಯದ ಚರಿತ್ರೆಯನ್ನು ಕಟ್ಟುವ ಯತ್ನವಿದು.

ಬಾಗೆನಾಡು ಸಾಂಸ್ಕೃತಿಕವಾಗಿ ಶ್ರೀಮಂತವಾದದ್ದು. ಹನ್ನೊಂದನೇ ಶತಮಾನದ ಕವಿ ರಾಜಾದಿತ್ಯನಿಂದಲೇ ಈ ನಾಡಿನ ಸಾಹಿತ್ಯ ಚರಿತ್ರೆ ಆರಂಭವಾಗುತ್ತದೆ. ೧೨ ನೇ ಶತಮಾನದಿಂದ ೨೦ ನೇ ಶತಮಾನದ ವರೆಗೂ ಶೂನ್ಯ ಆವರಿಸುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಈ ಮಾತು ಇಲ್ಲಿಯ ಜನಪದ ಸಾಹಿತ್ಯಕ್ಕೆ ಅನ್ವಯಿಸುವದಿಲ್ಲ ಎನ್ನುವದು ಗಮನೀಯ ಅಂಶ. ಬಾಗೆನಾಡಿನ ಜನಪದ ಸಾಹಿತ್ಯ ಚರಿತ್ರೆಯನ್ನು ಪ್ರತ್ಯೇಕವಾಗಿ ರಚಿಸುವ ಅಗತ್ಯವಿದೆ. ಬಾಗೆನಾಡು ಜನಪದ ಸಾಹಿತ್ಯದ ಕ್ಷೀರಸಾಗರ. ಇಲ್ಲಿಯ ಡೊಳ್ಳಿನ ಹಾಡು, ಲಾವಣಿ ಪದಗಳು, ರಿವಾಯತ್‌ಗಳು, ತತ್ವಪದಗಳು, ಚೌಡಕಿ, ಭಜನೆ ಮುಂತಾದವುಗಳು ನಾಡಿನಲ್ಲಿ ಹರಡಿವೆ. ಬೆಳಗಾವಿ ದ್ವಾರಪಾಲನಷ್ಟೇ ಖ್ಯಾತನಾದ ಹಾರೂಗೇರಿಯ ಕವಿ ಅಲಬ್ಬೈರಿ ಸ್ವತಂತ್ರ ಅಧ್ಯಯನ ಒಂದಕ್ಕೆ ವಸ್ತು ಆಗಬಲ್ಲ. ಜಲಾಲಪುರದ ಕವಿ ರಾಚೋಟಿ ಶಕ್ತವಂತ ಲಾವಣಿಕಾರ. ತ್ರಿಭಾಷಾ ಕೋವಿದ. ಅವನ ಲಾವಣಿಗಳ ಸಂಕಲನಗಳು ಪ್ರಕಟಗೊಂಡಿಲ್ಲ. ಅಷ್ಟೇ ಅಲ್ಲ, ಬಿಡಿಲಾವಣಿಗಳು ಈಗ ಸಿಗುವದಿಲ್ಲ. ಇಂಥವರು ಈ ನಾಡಿನಲ್ಲಿ ಹಲವರಿದ್ದಾರೆ. ಅವರ ಸಾಹಿತ್ಯವನ್ನು ಶೋಧಿಸುವ, ಪ್ರಕಟಿಸುವ, ಶಿಸ್ತಿಗೆ ಅಳವಡಿಸಿ ಅಧ್ಯಯನಿಸುವ ಕಾರ್ಯ ನಡೆಯಬೇಕಿದೆ. ಆ ಅಗತ್ಯವನ್ನು ಪೂರೈಸುವ ಸಾಹಸ ಇಲ್ಲಿ ಇಲ್ಲದಿದ್ದರೂ ಅದನ್ನು ಮನಗಾಣಿಸುವ ಪ್ರಯತ್ನವಿದೆ ಎಂದು ಹೇಳಬಲ್ಲೆ.

ಬಾಗೆ ಪರಿಸರದ ಸಾಹಿತ್ಯ ಅಧ್ಯಯನದ ಬಹು ಮುಖ್ಯ ನೆಲೆಗಳು ಮೂರು. ೧) ಪ್ರಾಚೀನ ಸಾಹಿತ್ಯ ೨) ಜನಪದ ಸಾಹಿತ್ಯ. ೩) ಆಧುನಿಕ ಸಾಹಿತ್ಯ. ಈ ಭಾಗದ ಬಹುಪಾಲುಭಾಗ ಬಹುಕಾಲ ಕೊಲ್ಹಾಪುರದ ಛತ್ರಪತಿಗಳ ಆಡಳಿತಕ್ಕೆ ಒಳಪಟ್ಟಿತು. ಕನ್ನಡದ ನೆಲದ ಮೇಲೆ ಮರಾಠಿಯನ್ನು ಹೇರಲಾಗಿತ್ತು. ಹೀಗಾಗಿ ಸೃಜನಶೀಲ ಕ್ಷೇತ್ರದಲ್ಲಿ ಶೂನ್ಯ ತುಂಬಿತ್ತು. ಈ ತಾಲೂಕು ಶೈಕ್ಷಣಿಕವಾಗಿಯೂ

ಹಿಂದುಳಿದಿತ್ತು. ೨೦ನೇ ಶತಮಾನದ ಕೊನೆಯವರೆಗೂ ಕೊಲೆ, ಸುಲಿಗೆಗಳಿಂದ ಕುಪ್ರಸಿದ್ಧಿ ಪಡೆದಿತ್ತು. ಪರಿಶಿಷ್ಟ ಜಾತಿ, ಜನಾಂಗ, ಹಾಗೂ ಹಿಂದುಳಿದವರೇ ಬಹುಸಂಖ್ಯಾತವಾಗಿರುವ ಇಲ್ಲಿ ನಾಗರಿಕ ಸೌಲಭ್ಯಗಳು ಬಹುಕಾಲದ ವರೆಗೆ ಇರಲಿಲ್ಲ. ಕೊಲ್ಲಾಪುರದ ಶಿಕ್ಷಣ ಪ್ರಸಾರ ಮಂಡಳ ಜಾಗೃತಿ ಮೂಡಿಸಿತು. ಆಧುನಿಕ ಸಂದರ್ಭದಲ್ಲಿ ಈ ಪರಿಸರದ ಸಾಹಿತ್ಯದ ಚಟುವಟಿಕೆಗಳಲ್ಲಿ ಕೇಂದ್ರವಾದ ವ್ಯಕ್ತಿಗಳು ಇಬ್ಬರು. ಮೊದಲನೆಯವರು ಪ್ರೊ. ಜ್ಯೋತಿ ಹೊಸೂರ, ಎರಡನೆಯವರು. ಡಾ. ವ್ಹಿ. ಎಸ್. ಮಾಳಿಯವರು. ಮೂಲತ: ಮುಗಳಖೋಡದರಾದ ಜ್ಯೋತಿ ಹೊಸೂರ ಕಾಲಗತಿ ಪ್ರಕಾಶನದ ಮೂಲಕ ಸಾಹಿತ್ಯಕ ಬರಗಾಲವನ್ನು ಹಿಮ್ಮೆಟ್ಟಿಸಿದರು. ಲೇಖಕರು ಹಾಗೂ ಸಹೃದಯರ ಪಡೆಗಳನ್ನು ಜೊತೆ–ಜೊತೆಯಲ್ಲಿ ನಿರ್ಮಿಸಿದರು. ಸಂಘರ್ಷ ಸಾಹಿತ್ಯ ಕೂಟದ ಶಿವಾನಂದ ಬೆಳಕೂಡ, ಸ್ನೇಹ ಕುಂಜ ವಿಚಾರ ವಾಹಿನಿಯ ಹಾಗೂ ಶರಣ ವಿಚಾರ ವೇದಿಕೆಯ ಆಯ್. ಆರ್. ಮಠಪತಿ, ವಾಯ್. ಬಿ. ಹಿಮ್ಮಡಿ, ಜಿ. ಎಸ್. ಮಠಪತಿ ಅವರ ಗರಡಿಯಲ್ಲಿಯೇ ಬೆಳೆದವರು. ಅವರು ನಿವೃತ್ತರಾದ ಮೇಲೆ ರಾಯಬಾಗ ಸಾಹಿತ್ಯದ ನೆಲೆ ಕಳೆದುಕೊಂಡಿತು. ಅದೇ ಸಂದರ್ಭದಲ್ಲಿ ಸಾಹಿತ್ಯ ಚಟುವಟಿಕೆಗಳು ಅಲ್ಲಿಂದ ಹಾರೂಗೇರಿಗೆ ಸ್ಥಳಾಂತರಗೊಂಡವು.

ಹಾರೂಗೇರಿಯನ್ನು ಸಾಹಿತ್ಯದ ವೇದಿಕೆಯಾಗಿ ಕಟ್ಟಿದವರು ಡಾ. ವ್ಹಿ. ಎಸ್. ಮಾಳಿಯವರು. ಜ್ಯೋತಿ ಹೊಸೂರ ಜನಪದ ಸಾಹಿತ್ಯ ಶೋಧಕ್ಕೆ ಒತ್ತುನಿಡಿದರೆ ಇವರು ವಿಮರ್ಶೆ ಮತ್ತು ಸಂಶೋಧನೆಯ ನೆಲೆಗಳಲ್ಲಿ ಕೆಲಸ ಮಾಡುತ್ತಿರುವರು, ಡಾ. ಆರ್. ಬಿ. ಚಿಲಮಿ, ಎಸ್. ಬಿ. ಕ್ಯಾಸ್ತಿ, ಶ್ರೀಕಾಂತ ರಾಯಮಾನೆ, ಗುರುನಾಥ ಚಿಕ್ಕಟ್ಟಿ, ಸವಣೂರ, ರವೀಂದ್ರ ಪಾಟೀಲ, ಕಲ್ಲೇಶ ಕುಂಬಾರ, ಕಮತಗಿ ಮೊದಲಾದ ಯುವಕರ ಪಡೆ ನಿರ್ಮಾಣಗೊಂಡಿದೆ. ಹೀಗೆ ಬಾಗೆನಾಡಿನ ಆಧುನಿಕ ಸಾಹಿತ್ಯ ಗತಿಶೀಲವಾಗಿದೆ.

ಬಾಗೆನಾಡಿನ ಸಾಹಿತ್ಯ ಚರಿತ್ರೆಯಲ್ಲಿ ಕಾಲಗತಿ, ಸಂಘರ್ಷ ಸಾಹಿತ್ಯ ಕೂಟ, ಸ್ನೇಹ ಕುಂಜ, ಶರಣ ವಿಚಾರ ವಾಹಿನಿ ಮೊದಲಾದ ಪ್ರಕಾಶನ ಸಂಸ್ಥೆಗಳ ಪಾತ್ರ ಪ್ರಮುಖವಾದುದು. ಅವು ಈ ನಾಡಿನ ಪ್ರತಿಭೆಗಳನ್ನು ಪೋಷಿಸಿದವು. ವಿಷಾದದ ಸಂಗತಿ ಎಂದರೆ ಅವು ಇಂದು ಜಡಗೊಂಡಿರುವದು. ಕಾಲಗತಿ ಪ್ರಕಾಶನದ ಜ್ಯೋತಿ ಹೊಸೂರ, ಸಂಘರ್ಷ ಸಾಹಿತ್ಯ ಕೂಟದ ಶಿವಾನಂದ ಬೆಳಕೂಡ, ವಿಚಾರ ವಾಹಿನಿಯ ಆಯ್, ಆರ್. ಮಠಪತಿ ಉತ್ಸಾಹ ಕಳೆದುಕೊಂಡಿರುವರು. ಪ್ರಾಯಶ: ಓದುಗರ ಸಂಖ್ಯೆ ಕಡಿಮೆ ಆಗಿರುವದೂ, ಪ್ರಕಟನಾ ವೆಚ್ಚ ಹೆಚ್ಚಾಗುವದೂ ಇದಕ್ಕೆ ಕಾರಣವಾಗಿರಬಹುದು. ಅದೇನಿದ್ದರೂ ಮತ್ತೊಂದು ಹೊಸ ಪ್ರಕಟನಾ ಸಂಸ್ಥೆ ಹುಟ್ಟಿಕೊಳ್ಳುವ ಅನಿವಾರ್ಯತೆ ಸ್ಪಷ್ಟವಾಗಿದೆ.

ಈಗ ಕಳೆದ ದಶಕದಿಂದ ಈ ನಾಡಿನಲ್ಲಿ ಸಾಹಿತ್ಯ ಚಟುವಟಿಕೆಗಳು ಹಿಂದೆಂದಿಗಿಂತಲೂ ಹೆಚ್ಚಾಗಿವೆ. ಸಾಹಿತ್ಯಾಸಕ್ತರ ಉತ್ಸಾಹ, ಉತ್ಸವಗಳ ರೂಪ ತಾಳದೆ ಪುಸ್ತಕಗಳಾಗಿ ಹೊರಬರುವ ಅಗತ್ಯವಿದೆ. ಈಗ ಅಸ್ತಿತ್ವ ಪಡೆದುಕೊಂಡಿರುವ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ ಅದನ್ನು ಪೂರೈಸುವ ಹೊಸ ಕನಸುಗಳನ್ನು ಹೊತ್ತಿದೆ. ಎಲ್ಲದಕ್ಕೂ ಕಾಲವೇ ಉತ್ತರಿಸಬೇಕಿದೆ.

ಪ್ರಸ್ತುತ ಅಧ್ಯಯನ ಒಂದು ಸ್ಥೂಲ ಸಮೀಕ್ಷೆ ಮಾತ್ರ. ಪ್ರತಿಯೊಂದು ಕೃತಿಯ ವಸ್ತುನಿಷ್ಠ ವಿಮರ್ಶೆ ಈ ಅಧ್ಯಯನ ವ್ಯಾಪ್ತಿಯ ಆಚೆಯದು. ಏಕೆಂದರೆ ನಿರ್ದಿಷ್ಟ ಸಮಯದಲ್ಲಿ ಅದನ್ನು ಪೂರೈಸಲು ಸಾಧ್ಯವಾಗದು. ಅದಕ್ಕಾಗಿ ವ್ಯವಸ್ಥಿತ ಅಧ್ಯಯನ ರೂಪಗೊಳ್ಳಬೇಕಿದೆ. ಬಾಗೆನಾಡಿನಲ್ಲಿ ಶ್ರೀಮಂತವಾಗಿದ್ದ ಜನಪದ ಸಾಹಿತ್ಯ ಇಂದು ಅಳಿವಿನಂಚಿನಲ್ಲಿದೆ. ಆ ಸಾಹಿತ್ಯವನ್ನು ತುರ್ತಾಗಿ ಸಂಗ್ರಹಿಸದಿದ್ದರೆ ಮುಂದೆಂದೂ ಅದು ಸಿಗುವುದಿಲ್ಲ. ಈಗ ರಾಚೋಟಿಯ ಲಾವಣಿಗಳು ಸಿಗುತ್ತಿಲ್ಲ. ಮುಗಳಖೋಡದ ರಾಚಯ್ಯ, ಪರಮಾನಂದವಾಡಿಯ ಕಲಸಿದ್ದ, ಮೀರಾಸಾಬ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ನಿಡಗುಂದಿಯ ಯಮನಪ್ಪ ಚಲುವಾದಿ ಮುಂತಾದವರು ಕೇವಲ ದಾಖಲೆಗೆ ಮಾತ್ರ ಸೀಮಿತವಾಗಿ ಉಳಿದವರು. ಪ್ರಸ್ತುತ ಅಧ್ಯಯನ ಬಾಗೆನಾಡಿನ ಜನಪದ ಸಾಹಿತ್ಯ ಸಂಗ್ರಹಣೆಯ ಅನಿವಾರ್ಯತೆಯನ್ನು ಬಲವಾಗಿ ಪ್ರತಿಪಾದಿಸುತ್ತದೆ.

ಹಾಲುಮತದವರು ಬಹುಸಂಖ್ಯಾತರಾಗಿರುವ ಬಾಗೆನಾಡಿನಲ್ಲಿ ಡೊಳ್ಳಿನ ಹಾಡಿನ ಮೇಳಗಳು ಅನೇಕ. ಬಾಗೆನಾಡಿನ ಡೊಳ್ಳಿನ ಹಾಡುಗಳ ಅಧ್ಯಯನ ಕೈಗೆತ್ತಿಕೊಳ್ಳಬೇಕು. ಇಲ್ಲಿಯ ಡೊಳ್ಳಿನ ಹಾಡುಗಳ ಸಂಕಲನವು ಹೊರಬರಬೇಕು. ಮೇಳಗಳು ದಾಖಲೆಗೆ ಒಳಪಡಬೇಕು. ಮುಂಬರುವ ದಿನಗಳಲ್ಲಿ ಇದನ್ನು ಮಾಡಲಾಗದು. ಅದಕ್ಕಾಗಿ ಬಾಗೆನಾಡಿನ ಜನಪದ ಕಲಾವಿದರ ಕುರಿತು ಅಧ್ಯಯನಿಸುವ ಅಗತ್ಯವಿದೆ. ಇವು ಅಧ್ಯಯನದ ಪ್ರಮುಖ ಫಲಿತಗಳು.

ಅನುಬಂಧ – ೧

ಬಾಗೆನಾಡಿನ ಪ್ರಮುಖ ಸಾಹಿತಿಗಳು ಮತ್ತು ಅವರ ಪ್ರಕಟಿತ ಕೃತಿಗಳು

ಸಾಹಿತಿಗಳು	ಕೃತಿಗಳು
೧. ರಾಜಾದಿತ್ಯ :	೧) ವ್ಯವಹಾರಗಣಿತ
	೨) ಕ್ಷೇತ್ರಗಣಿತ
	೩) ಲೀಲಾವತಿ
	೪) ಜೈನಮತ ಸೂತ್ರ ಟೀಕೋದಾಹರಣ
	೫) ಚಿತ್ರ ಹಸುಗೆ
	೬) ವ್ಯವಹಾರ ರತ್ನ
೨. ಕವಿ ಅಲಭ್ಯೆರಿ :	
	೧) ಶ್ರೀ ಜಿನಭಕ್ತಿಗೀತೆಗಳು
	೨) ಭಜನೆ (ತತ್ವ) ಪದಗಳು
೩. ಕವಿ ಕಲ್ಮೇಶ್ವರ :	
	೧) ಶ್ರೀ ಗುರು ಗೀತಾಮೃತ ಪಾರಾಯಣ
	೨) ಪಾರಮಾರ್ಥ ಜ್ಞಾನ ಜ್ಯೋತಿ
	೩) ಜ್ಞಾನ ಒಂದ ಇದ್ದ ಮೇಲೆ ಮಾನಕೇನ ಕಡ್ಮಿ ಇಲ್ಲ.
೪. ಪ್ರೊ. ಜ್ಯೋತಿ ಹೊಸೂರ :	
	೧) ಬೆರಸಿ ಇಟ್ಟೀನ ಬೆಲ್ಲ ನೆನೆಗಡಲಿ (ಸಂ)
	೨) ಹೆಸರ ಹೇಳ್ತೀನಿ ಒಡಪ ಕಟ್ಟಿ (ಸಂ)
	೩) ಜಾನಪದ ಉಪಾಸನೆ (ಸಂ)
	೪) ಕನಕದಾಸ ಜೀವನ ವಿಚಾರ
	೫) ಜಾತಿಗಾರರ ಜಾತಕ
	೬) ಜಾನಪದ ಕುರಿತು (ಸಂ)
	೭) ಶಿವಶರಣರ ಕ್ರಾಂತಿಕಾರಕ ವಚನಗಳು
	೮) ಬೀರಪ್ಪದೇವರು
	೯) ಶಂ. ಬಾ ಜೀವನ

೧೦) ಹಿಟ್ಟಣಗಿ ಅಜ್ಜ
೧೧) ಹೀಚು ಹಣ್ಣು (ಸಂ)
೧೨) ಬೆಳವಲ (ಸಂ)
೧೩) ಕವಿಭೂಷಣ
೧೪) ಪ್ರಜ್ಞಾ ಪ್ರಕಾಶ (ಸಂ)
೧೫) ಬೇಟಗೇರಿ ಕೃಷ್ಣಶರ್ಮ
೧೬) ದತ್ತ ಗೌರವ

೫. ಪ್ರೊ. ಶಿವಾನಂದ ಬೆಳಕೂಡ :

೧) ತುಮುಲ
೨) ಗೀರುಗಳು
೩) ಕೆಂಪುನೆರಳು
೪) ಸಾಹಿತ್ಯ ಸಂಗಮ (ಸಂ)
೫) ಪಂಜು ಮತ್ತು ಪರಾಗ (ಸಂ)
೬) ಮೆಟ್ಟು
೭) ಯಜ್ಞಪಶು

೬) ಪ್ರೊ. ಭಾಸ್ಕರ ಪತ್ತಾರ :

೧) ಹೇಳುವಾಂಗ ಆತು
೨) ಆತ್ಮ ಪರಮಾತ್ಮ

೭) ಡಾ. ವ್ಹಿ. ಎಸ್. ಮಾಳಿ :

೧) ಕನ್ನಡ ಸಾಹಿತ್ಯದಲ್ಲಿ ಕರ್ಣ
೨) ಕೂಡಲದ ಕಲ್ಪತರು
೩) ರಸಾಲ
೪) ಸ್ಪಂದನ
೫) ಐನಾಪುರ : ಸಾಂಸ್ಕೃತಿಕ ಅಧ್ಯಯನ (ಸಂ)
೬) ಭೂಮವಿಸ್ತಾರ (ಸಂ)
೭) ಅಥಣಿ ತಾಲೂಕು : ಸಮಗ್ರ ದರ್ಶನ (ಸಂ)
೮) ಅರಳು (ಸಂ)
೯) ಹಳಗನ್ನಡ ಸಾಹಿತ್ಯ ಸಂಚಯ (ಸಂ)
೧೦) ಕನ್ನಡ ವ್ಯಾಕರಣ ಪರಿಚಯ

೧೧) ಫ. ಗು. ಹಳಕಟ್ಟಿ ಸಮಗ್ರ
ಸಾಹಿತ್ಯ : ಸಂ. ೫ (ಸಂ)

೮) **ಡಾ. ಆರ್. ಬಿ. ಚಿಲಮಿ**

೧) ಬ.ಗಿ. ಯಲ್ಲಟ್ಟಿ : ಸಮಗ್ರ ಸಾಹಿತ್ಯ
೨) ಬತ್ತಿಸ ರಾಗ
೩) "ಅಪ್ಪ, ಅವ್ವ ಮತ್ತು ನಾನು"
೪) ಭಜನೆ (ತತ್ವ) ಪದಗಳು (ಸಂ)
೫) ವಚನ ವೃಷಭ
೬) ಜನಪದ ಸಿರಿ
೭) ಪ್ರಬಂಧ ಸಂಪದ (ಸಂ)

೯) **ಕಲ್ಲೇಶ ಕುಂಬಾರ :**

೧) ಪುರುಷ ದಾರಿಯ ಮೇಲೆ
೨) ಸಂಭವಾಮಿ ಯುಗೇ ಯುಗೇ.

೧೦. **ಡಾ. ವಾಯ್. ಬಿ. ಹಿಮ್ಮಡಿ :**

೧) ಕನ್ನಡದಲ್ಲಿ ವೈಚಾರಿಕ ಸಾಹಿತ್ಯ :
ಒಂದು ಅಧ್ಯಯನ.
೨) ಬುದ್ಧ ಮತ್ತು ಜಗತ್ತಿಗೆ ಆತನ ಸಂದೇಶ
೩) ಚನ್ನದಾಸರ
೪) ಚನ್ನಬಸವಣ್ಣ ಮತ್ತು ಬಂಡಾಯ ಪ್ರಜ್ಞೆ
೫) ಜನಪದ ತ್ರಿಪದಿಗಳಲ್ಲಿ ಹೆಣ್ಣಿನ
ಜೀವನ ಮೌಲ್ಯ.
೬) ಚಲೆಜಾವ್ ಚಳುವಳಿ :
ಅರವತ್ತರ ನೆನಪು ಮತ್ತು ಬಸವರಾಜ
ಕಟ್ಟಿಮನಿ ಸ್ಮರಣೆ (ಸಂ)
೭) ಸ್ವಾಭಿಮಾನಿ ಶಿಲ್ಪಿ (ಸಂ)
೮) ಅಂಬೇಡ್ಕರ ಮತ್ತು ಬಾಬರಿ ಮಸೀದಿ

೧೧. **ಎಲ್. ಎಸ್. ಚೌರಿ :**

೧) ಮಗು ನೀ ನಗು
೨) ಮಾವಿನ ಮರ
೩) ಅಳಿಲು

೧೨. **ಕುಮಾರ ಅವಳೆ :**

೧) ನನ್ನೊಡಲ ಹಾಡು
೨) ಅಂಕುರ
೩) ಝಾನ್ಸಿ ರಾಣಿ ಲಕ್ಷ್ಮೀಬಾಯಿ

೧೩. **ಅನಸೂಯಾ ಕಾಂಬಳೆ :**

೧) ಮುಳ್ಳು ಕಂಟಿಯ ನಡುವೆ
೨) ವಿಚಾರ ಸಾಹಿತ್ಯ ಮತ್ತು ಹೆಣ್ಣು (ಸಂ)

ಅನುಬಂಧ - ೨

ಪ್ರಮುಖ ಪ್ರಕಾಶನ ಸಂಸ್ಥೆಗಳು ಹಾಗೂ ಗ್ರಂಥಗಳು

೨.೧. ಕಾಲಗತಿ ಪ್ರಕಾಶನ

೧.	ಬೆರಸಿ ಇಟ್ಟೀನ ಬೆಲ್ಲ ನೆನಗಡಲಿ	:	ಪ್ರೊ. ಜ್ಯೋತಿ ಹೊಸೂರ (ಸಂ)
೨.	ಹೆಸರ ಹೇಳ್ತೀನಿ ಒಡಪ ಕಟ್ಟಿ	:	ಪ್ರೊ. ಜ್ಯೋತಿ ಹೊಸೂರ (ಸಂ)
೩.	ಹೀಚು ಹಣ್ಣು	:	ಪ್ರೊ. ಜ್ಯೋತಿ ಹೊಸೂರ (ಸಂ)
೪.	ಜನಪದ ಉಪಾಸನೆ	:	ಪ್ರೊ. ಜ್ಯೋತಿ ಹೊಸೂರ (ಸಂ)
೫.	ಬೆಳವಲ	:	ಪ್ರೊ. ಜ್ಯೋತಿ ಹೊಸೂರ (ಸಂ)
೬.	ಕವಿಭೂಷಣ	:	ಪ್ರೊ. ಜ್ಯೋತಿ ಹೊಸೂರ (ಸಂ)
೭.	ಕನಕದಾಸ ಜೀವನ ವಿಚಾರ	:	ಪ್ರೊ. ಜ್ಯೋತಿ ಹೊಸೂರ
೮.	ಜಾತಿಗಾರರ ಜಾತಕ	:	ಪ್ರೊ. ಜ್ಯೋತಿ ಹೊಸೂರ
೯.	ಪ್ರಜ್ಞಾ ಪ್ರಕಾಶ	:	ಪ್ರೊ. ಜ್ಯೋತಿ ಹೊಸೂರ (ಸಂ)
೧೦.	ಜಾನಪದ ಕುರಿತು	:	ಪ್ರೊ. ಜ್ಯೋತಿ ಹೊಸೂರ (ಸಂ)
೧೧.	ವೈವಸ್ವತ ಮನಪ್ರಣೀತ ಮಾನವ ಧರ್ಮದ ಆಕೃತಿ	:	ಡಾ. ಶಂ. ಬಾ. ಜೋಶಿ
೧೨.	ಬುದ್ಧನ ಜಾತಕ	:	ಡಾ. ಶಂ. ಬಾ. ಜೋಶಿ
೧೩.	ಬಿತ್ತಿದ್ದನ್ನು ಬೆಳಕೋ	:	ಡಾ. ಶಂ. ಬಾ. ಜೋಶಿ
೧೪.	ಭೂತ ವರ್ತಮಾನ	:	ಸಿ. ಎಂ. ಮುಗಳಖೋಡ
೧೫.	ಬಣ್ಣದ ಕಣ್ಣು	:	ಹ. ಶಿ. ಭೈರನಟ್ಟಿ
೧೬.	ಹೇಳುವಾಂಗ ಆತು	:	ಭಾಸ್ಕರ ಪತ್ತಾರ
೧೭.	ಅಸ್ತಿತ್ವ	:	ಡಾ. ಎಸ್. ಎಸ್. ಕೋತಿನ

೧೮.	ದೈವದ ಎರಡು ಲಾವಣಿಗಳು	:	ಡಾ. ನಿಂಗಣ್ಣ ಸಣ್ಣಕ್ಕಿ
೧೯.	ಜಾನಪದ ಜಯಂತಿ	:	ಡಾ. ನಿಂಗಣ್ಣ ಸಣ್ಣಕ್ಕಿ
೨೦.	ಲಾವಣಿ ಸಾಹಿತ್ಯದಲ್ಲಿ	:	ಡಾ. ನಿಂಗಣ್ಣ ಸಣ್ಣಕ್ಕಿ
	ಸಂಗೊಳ್ಳಿ ರಾಯಣ್ಣ	:	ಡಾ. ನಿಂಗಣ್ಣ ಸಣ್ಣಕ್ಕಿ
೨೧.	ಗಿಳಿ ಕುಂತ ಕೂಗ್ಯಾವ	:	ಡಾ. ನಿಂಗಣ್ಣ ಸಣ್ಣಕ್ಕಿ
೨೨.	ಗೆಜ್ಜೆ ನುಡಿದಾವ	:	ಬಾಲ ಕೃಷ್ಣ ಜಂಬಗಿ
೨೩.	ಪ್ರಜಾನೇತ್ರದ ಬೆಳಕಿನಲ್ಲಿ	:	ಗೌರೀಶ ಕಾಯ್ಕಿಣಿ
೨೪.	ಜನಕಾವ್ಯ ದೃಷ್ಟಿ	:	ಬಿ. ಎ. ಸನದಿ
೨೫.	ಜಿ. ಎಸ್. ಹಿಟ್ಟಣಗಿ ಅಜ್ಜ	:	ಪ್ರೊ. ಜ್ಯೋತಿ ಹೊಸೂರ
೨೬.	ಕ್ರಾಂತಿಕಾರಿ ಮೌಲಿಕ ವಚನಗಳು	:	ಪ್ರೊ. ಜ್ಯೋತಿ ಹೊಸೂರ
೨೭.	ಡಾ. ಬೇಟಗೇರಿ ಕೃಷ್ಣಶರ್ಮ	:	ಪ್ರೊ. ಜ್ಯೋತಿ ಹೊಸೂರ
೨೮.	ದತ್ತ ಗೌರವ	:	ಪ್ರೊ. ಜ್ಯೋತಿ ಹೊಸೂರ (ಸಂ)

೨.೨. ಸಾಹಿತ್ಯ ಸಂಘರ್ಷ ಕೂಟ :

ಕೃತಿಗಳು			ಪ್ರಕಟಣಾ ವರ್ಷ
೧.	ತುಮುಲ	: ಶಿವಾನಂದ ಬೆಳಕೂಡ	೧೯೮೦
೨.	ಗೀರುಗಳು	: ಶಿವಾನಂದ ಬೆಳಕೂಡ	೧೯೮೧
೩.	ತೀರದ ದಾಹ	: ಪಿ. ವಾಯ್. ಸೊನ್ನಲಗಿ	೧೯೮೨
೪.	ಕೆಂಪು ನೆರಳು	: ಶಿವಾನಂದ ಬೆಳಕೂಡ	೧೯೮೩
೫.	ಸಾಹಿತ್ಯ ಸಂಗಮ	: ಶಿವಾನಂದ ಬೆಳಕೂಡ (ಸಂ)	೧೯೮೪
೬.	ಪಂಜು ಮತ್ತು ಪರಾಗ	: ಶಿವಾನಂದ ಬೆಳಕೂಡ (ಸಂ)	೧೯೮೬
೭.	ಮೀಸಲಾತಿ : ಒಂದು ಪ್ರಶ್ನೆ	: ಡಾ. ಮಲ್ಲಿಕಾರ್ಜುನ ಹೂಗಾರ	೧೯೮೬
೮.	ಅನುರಾಗ	: ಮಹಾಲಿಂಗ ಮಂಗಿ	೧೯೮೬
೯.	ನಿರ್ಧಾರ	: ಶಂಕರ ತಲ್ಲೂರ	೧೯೮೬
೧೦.	ಯಜ್ಞಪಶು	: ಶಿವಾನಂದ ಬೆಳಕೂಡ	೧೯೯೦
೧೧.	ಆತ್ಮ ಪರಮಾತ್ಮ ವಿಚಾರ	: ಭಾಸ್ಕರ ಪತ್ತಾರ	೧೯೯೧
೧೨.	ಆಟು ಈಟು ಪದ್ಯಗಳು	: ಶಿವಾನಂದ ಬೆಳಕೂಡ	೧೯೯೨
೧೩.	ಚೆನ್ನಬಸವಣ್ಣನ ವಚನಗಳಲ್ಲಿ ಬಂಡಾಯ ಪ್ರಜ್ಞೆ	: ವಾಯ್. ಬಿ. ಹಿಮ್ಮಡಿ	೧೯೯೩
೧೪.	ಮೆಟ್ಟು	: ಶಿವಾನಂದ ಬೆಳಕೂಡ	೧೯೯೪

೨.೩. ಸ್ನೇಹ ಕುಂಜ ವಿಚಾರ ವೇದಿಕೆ :

ಕೃತಿಗಳು			ಪ್ರಕಟಣಾ ವರ್ಷ
೧.	ತಪ್ಪೆಜ್ಜೆಗಳು	: ಈರಣ್ಣ ಮಠಪತಿ (ಸಂ)	೧೯೮೬
೨.	ಹಲವು ಹೂವು ; ಹಲವು ಗಂಧ	: ಈರಣ್ಣ ಮಠಪತಿ (ಸಂ)	೧೯೮೭
೩.	ರಾಷ್ಟ್ರಕವಿ ಕುವೆಂಪು ಕೃತಿ ಸಮೀಕ್ಷೆ	: ಈರಣ್ಣ ಮಠಪತಿ (ಸಂ)	೧೯೮೯
೪.	ಮುತ್ತು ಸುರಿದಾವ	: ಈರಣ್ಣ ಮಠಪತಿ (ಸಂ)	೧೯೯೦
೫.	ಬೆಳಕು ಹರಿದಿತ್ತು	: ಈರಣ್ಣ ಮಠಪತಿ (ಸಂ)	೧೯೯೧
೬.	ಸ್ನೇಹ	: ಎ. ಎಸ್. ಶಿರಹಟ್ಟಿ	೧೯೯೬

೨.೪. ಶರಣ ವಿಚಾರ ವಾಹಿನಿ :

ಕೃತಿಗಳು			ಪ್ರಕಟಣಾ ವರ್ಷ
೧.	ಭಕ್ತಿಯೆಂಬ ಪೃಥ್ವಿಯ ಮೇಲೆ	:	೧೯೯೬
೨.	ಬಾಗೇವಾಡಿ ಮಲ್ಲಪ್ಪನವರು	:	೧೯೯೬
೩.	ದಿವಾಕರ ಹರಿದಾಸರು	:	೧೯೯೬
೪.	ದೇಸ್ತೋಟ ರಾಯಪ್ಪನವರು	:	೧೯೯೬
೫.	ಕುಂಬಾರ ಶಿವಲಿಂಗಪ್ಪನವರು	:	೧೯೯೬
೬.	ಪಾಲಭಾವಿ ಈರಪ್ಪನವರು	:	೧೯೯೬
೭.	ಸೋರಗಾಂವಿ ಮುರಿಗೆಪ್ಪನವರು	:	೧೯೯೬
೮.	ಆಜೂರ ರಾಮಪ್ಪನವರು	:	೧೯೯೬
೯.	ಕಲ್ಯಾಣಿ ವಕೀಲರು	:	೧೯೯೬

೨.೫. ಶ್ರೀ ಸಿದ್ಧೇಶ್ವರ ಪ್ರಕಾಶನ ಹಂದಿಗುಂದ :

	ಕೃತಿಗಳು		ಪ್ರಕಟಣಾ ವರ್ಷ
೧.	ನನ್ನೆದೆಯ ಹಾಡು	: ಶ್ರೀ ಶಿವಾನಂದ ಸ್ವಾಮಿಗಳು	೨೦೦೪
೨.	ತುಂತುರ ತುಷಾರ	: ಶ್ರೀ ಶಿವಾನಂದ ಸ್ವಾಮಿಗಳು	೨೦೦೧
೩.	ಏಕಲವ್ಯ : ಒಂದು ಅಧ್ಯಯನ	: ಡಾ. ಅಶೋಕ ನರೋಡೆ	೨೦೦೧
೪.	ಬೆಳಗಾವಿ ಬಳುವಳಿ	: ಆಯ್. ಆರ್. ಮಠಪತಿ (ಸಂ)	೧೯೯೩
೫.	ಆತ್ಮ ಸಖ	: ಶ್ರೀ ಶಿವಾನಂದ ಸ್ವಾಮಿಗಳು	೧೯೯೩

ಅನುಬಂಧ – ೩

ಪರಾಮರ್ಶನ ಗ್ರಂಥಗಳು

ಕೃತಿಗಳು		ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
೧. ಅಲ್ಲಮ ಪ್ರಭು ಮಹಾರಾಜರು	:	**ಪರಮಾರ್ಥ ಜ್ಞಾನ ಜ್ಯೋತಿ** ಕಲಾ ಸಂಗಮ ಪ್ರಿಂಟಿಂಗ ಪ್ರೇಸ್, ಇಂಚಲಕರಂಜಿ.	೨೦೦೬
೨. ಅವಳೆ ಕುಮಾರ	:	**ನನ್ನೊಡಲ ಹಾಡು** ವಿಶ್ವಭಾರತಿ ಜ್ಞಾನಗಂಗಾ ಸಾಹಿತ್ಯ ಪ್ರಕಾಶನ, ರಾಯಬಾಗ	೧೯೯೯
		ಅಂಕುರ ವಿಶ್ವಭಾರತಿ ಜ್ಞಾನಗಂಗಾ ಸಾಹಿತ್ಯ ಪ್ರಕಾಶನ, ರಾಯಬಾಗ	೧೯೯೯
೩. ಉಪಾಧ್ಯೆ ಜಿ. ಎನ್. (ಸಂ) ದೇವರ ಕೊಂಡಾರೆಡ್ಡಿ	:	**ಮಹಾರಾಷ್ಟ್ರದ ಕನ್ನಡ ಶಾಸನಗಳು** ಕ.ವಿ.ವಿ. ಹಂಪಿ.	೨೦೦೧
೪. ಕಲ್ಲೇಶ ಕುಂಬಾರ	:	**ಪುರುಷ ದಾರಿಯ ಮೇಲೆ** ವಿಶ್ವಾಸ ಪ್ರಿಂಟ್ಸ್, ೨ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ, ಚಾಮರಾಜ ಪೇಟೆ, ಬೆಂಗಳೂರು	೨೦೦೭
		ಸಂಭವಾಮಿ ಯುಗೇ ಯುಗೇ ಪ್ರಕಾಶನ ಯಶವಂತ ವಾಜಂತ್ರಿ ರಬಕವಿ	೧೯೯೦

ಕೃತಿಗಳು		ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
೫. ಕಾಂಬಳೆ ಅನಸೂಯಾ	:	ಮುಳ್ಳು ಕಂಟಿಯ ನಡುವೆ ಹೊಸದಿಕ್ಕು ಪ್ರಕಾಶನ, ಬೆಂಗಳೂರು	೧೯೯೯
೬. ಕೆಂಪಣ್ಣವರ ಪಿ. ಜಿ.	:	ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ ಕನ್ನಡ ಜಾಗೃತಿ ಪುಸ್ತಕ ಮಾಲೆ ಅಲ್ಲಮಪ್ರಭು ಜನ ಕಲ್ಯಾಣ ಸಂಸ್ಥೆ, ಸಿದ್ಧಸಂಸ್ಥಾನ ಮಠ, ಚಿಂಚಣಿ	೨೦೦೪
೭. ಕೆಂಬೆಲ್	:	ಗೆಝೆಟೀಯರ್ ಬೆಲಗಮ್ ಡಿಸ್ಟ್ರಿಕ್ಟ ಬಾಂಬೆ ಗವ್ಹರ್ನಮೆಂಟ್ ಸೆಂಟ್ರಲ್ ಪ್ರೆಸ್,	೧೮೮೪
೮. ಗುಂಜಾಳ ಎಸ್. ಆರ್.	:	ಬೆಳಗಾವಿ ಬೆಳಕು ಕನ್ನಡ ಸಾಹಿತ್ಯ ಪರಿಷತ್ತು ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು	೨೦೦೩
೯. ಗುರವ ಶಿವಾನಂದ	:	ತೆನೆತುಂಬಿ ನಿಂತಾವ ವಿನಾಯಕ ಪ್ರಕಾಶನ, ಮೂಡಲಗಿ	೧೯೯೧
೧೦. ಚಿಲಮಿ ಆರ್. ಬಿ.	:	ಬತ್ತೀಸ ರಾಗ ವೀರಭದ್ರೇಶ್ವರ ಪ್ರಕಾಶನ, ಹಾರೂಗೇರಿ	೨೦೦೭

ಕೃತಿಗಳು		ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
		ವಚನ ವೃಷಭ ವೀರಭದ್ರೇಶ್ವರ ಪ್ರಕಾಶನ, ಹಾರೂಗೇರಿ	೨೦೦೮
		ಅಪ್ಪ, ಅವ್ವ ಮತ್ತು ನಾನು ವೀರಭದ್ರೇಶ್ವರ ಪ್ರಕಾಶನ, ಹಾರೂಗೇರಿ	೨೦೦೮
		ಭಜನೆಯ (ತತ್ವ) ಪದಗಳು (ಸಂ) ಪಿ. ಬಿ. ಕರ್ಣವಾಡಿ ಸರಸ್ವತಿ ಮುದ್ರಣಾಲಯ, ಹಾರೂಗೇರಿ	೨೦೦೭
೧೧. ಚೌರಿ ಎಲ್. ಎಸ್.	:	**ಮಗು ನೀ ನಗು** ಚೌರಿ ಪ್ರಕಾಶನ, ಅಡಿಹುಡಿ	೨೦೦೪
		ಮಾವಿನ ಮರ ಚೌರಿ ಪ್ರಕಾಶನ, ಅಡಿಹುಡಿ	೨೦೦೪
		ಅಳಿಲು ಚೌರಿ ಪ್ರಕಾಶನ, ಅಡಿಹುಡಿ	೨೦೦೬
೧೨. ಜಂಬಗಿ ಬಿ. ಎ.	:	**ಗೆಜ್ಜೆ ನುಡಿದಾವ** ಜನಪದ ಮಂಟಪ, ರಾಯಬಾಗ	೧೯೮೧

ಕೃತಿಗಳು		ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
೧೩. ನರಸಿಂಹಾಚಾರ್ಯ ಆರ್.	:	**ಕನ್ನಡ ಕವಿಚರಿತೆ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.	ಇತ್ತೀಚಿನ ಮುದ್ರಣ ೨೦೦೫
೧೪. ನಾಯಕ ಹಾ. ಮಾ.	:	**ಕನ್ನಡ ಸಾಹಿತ್ಯ ಚರಿತ್ರೆ** (ನಾಲ್ಕನೇ ಸಂಪುಟ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ. ಮೈಸೂರ	೧೯೭೭
೧೫. ನಾಗಯ್ಯ ಜೆ. ಎಂ.	:	**ಆರನೆಯ ವಿಕ್ರಮಾದಿತ್ಯನ ಶಾಸನಗಳು** ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರ ರುದ್ರಾಕ್ಷಿ ಮಠ, ಬೆಳಗಾವಿ	೧೯೯೭
೧೬. ನೇಗಿನಹಾಳ ಎಂ. ಬಿ.	:	**ನೇಗಿನಹಾಳ ಪ್ರಬಂಧಗಳು** ಕ.ವಿ.ವಿ. ಹಂಪಿ	೧೯೯೯
೧೭. ಪತ್ತಾರ ಭಾಸ್ಕರ	:	**ಹೇಳುವಾಂಗ ಆತು** ಕಾಲಗತಿ ಪ್ರಕಾಶನ, ರಾಯಬಾಗ	೧೯೮೩
		ಆತ್ಮ ಪರಮಾತ್ಮ ಸಂಘರ್ಷ ಸಾಹಿತ್ಯ ಕೂಟ, ರಾಯಬಾಗ	೧೯೯೧
೧೮. ಬೆಳಕೂಡ ಶಿವಾನಂದ	:	**ಕೆಂಪು ನೆರಳು** ಸಂಘರ್ಷ ಸಾಹಿತ್ಯ ಕೂಟ, ರಾಯಬಾಗ	೧೯೮೩

ಕೃತಿಗಳು		ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
		ತುಮುಲ **ಸಂಘರ್ಷ ಸಾಹಿತ್ಯ ಕೂಟ,** ರಾಯಬಾಗ	೧೯೮೦
		ಮೆಟ್ಟು **ಸಂಘರ್ಷ ಸಾಹಿತ್ಯ ಕೂಟ,** ರಾಯಬಾಗ	೧೯೯೪
		ಯಜ್ಞಪಶು ಸಂಘರ್ಷ ಸಾಹಿತ್ಯ ಕೂಟ, ರಾಯಬಾಗ	೧೯೯೦
		ಗೀರುಗಳು (ಸಂ) ಸಂಘರ್ಷ ಸಾಹಿತ್ಯ ಕೂಟ, ರಾಯಬಾಗ	೧೯೮೧
		ಪಂಜು ಮತ್ತು ಪರಾಗ ಸಂಘರ್ಷ ಸಾಹಿತ್ಯ ಕೂಟ, ರಾಯಬಾಗ	೧೯೮೬
೧೯. **ಮಠಪತಿ** **ಆಯ್. ಆರ್.**	:	**ತಪ್ಪೆಜ್ಜೆಗಳು** ಸ್ನೇಹಕುಂಜ ವಿಚಾರ ವೇದಿಕೆ ಹಾರೂಗೇರಿ	೧೯೮೬
		ಬೆಳಕು ಹರಿದಿತ್ತು ಸ್ನೇಹಕುಂಜ ವಿಚಾರ ವೇದಿಕೆ ಹಾರೂಗೇರಿ	೧೯೯೧

ಕೃತಿಗಳು	ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
೨೦. ಮಾಳಿ ವ್ಹಿ. ಎಸ್. :	**ರಸಾಲ** ಶ್ರೀ ಗುರು ಚನ್ನಬಸವೇಶ್ವರ ಗ್ರಂಥ ಮಾಲೆ, ಜಂಗಮಲಿಂಗ ಕ್ಷೇತ್ರ, ಶ್ರೀ ಮೋಟಗಿ ಮಠ, ಅಥಣಿ	೨೦೦೫
	ಸ್ಪಂದನ ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು	೨೦೦೭
	ಕೂಡಲದ ಕಲ್ಪತರು ವಿಶ್ವಮಾನವ ಪ್ರಕಾಶನ, ಜಂಬಗಿ	೧೯೮೭
೨೧. ರಾಯಮಾನೆ ಶ್ರೀಕಾಂತ :	**ಮಾತು ಮೌನವಾಗಿದೆ** ಚೌರಿ ಪ್ರಕಾಶನ, ಅಡಿಹುಡಿ	೨೦೦೩
	ನಮ್ಮೂರ ಜನಪದ ಹಿರಿಮೆಗಳು ರಾಯಮಾನೆ ಪ್ರಕಾಶನ, ಹಿಡಕಲ್ಲ	೨೦೦೮
	ಪ್ರೇಮಮಲ್ಲಿಗೆ ರಾಯಮಾನೆ ಪ್ರಕಾಶನ, ಹಿಡಕಲ್ಲ	೨೦೦೮

ಕೃತಿಗಳು		ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
೨೨. ರಿತ್ತಿ ಶ್ರೀನಿವಾಸ	:	**ಕೊಲ್ಲಾಪುರ ಜಿಲ್ಲೆಯ ಶಾಸನಗಳು** ಪ್ರಥಮ ಸಂಪುಟ, ಕ.ವಿ.ವಿ. ಹಂಪಿ	೨೦೦೦
೨೩. ವಾಳಕಿ ಗುರುಪಾದ ಕೆಂಪಣ್ಣವರ ಪಿ. ಜಿ	:	**ಜ್ಞಾನ ಒಂದು ಇದ್ದ ಮ್ಯಾಲ** **ಮಾನಕೇನ ಕಡ್ಮಿ ಇಲ್ಲ.** ಕನ್ನಡ ಜಾಗ್ರತಿ ಪುಸ್ತಕ ಮಾಲೆ, ಅಲ್ಲಮ ಪ್ರಭು ಜನ ಕಲ್ಯಾಣ ಸಂಸ್ಥೆ, ಸಿದ್ಧ ಸಂಸ್ಥಾನ ಮಠ, ಚಿಂಚಣಿ	೨೦೦೭
೨೪. ಶಿವಾನಂದ ಸ್ವಾಮಿಗಳು	:	**ಆತ್ಮ ಸಖ** ಶ್ರೀ ಸಿದ್ಧೇಶ್ವರ ಪ್ರಕಾಶನ, ಹಂದಿಗುಂದ	೧೯೯೩
೨೫. ಸುಬ್ಬಣ್ಣವರ ರಾಮು	:	**ಶ್ರೀ ಜಿನಭಕ್ತಿ ಗೀತೆಗಳು** ಪಿ. ಬಿ. ಕರ್ಣವಾಡಿ, ಸರಸ್ವತಿ ಮುದ್ರಣಾಲಯ, ಹಾರೂಗೇರಿ	೧೯೮೯
೨೬. ಹಿಮ್ಮಡಿ ವಾಯ್. ಬಿ.	: :	**ಚನ್ನದಾಸರು** **ಕನ್ನಡ ಪುಸ್ತಕ ಪ್ರಾಧಿಕಾರ** ಕನ್ನಡ ಭವನ ಜೆ. ಸಿ. ರಸ್ತೆ, ಬೆಂಗಳೂರು	೨೦೦೮
		ಬುದ್ಧ ಮತ್ತು ಜಗತ್ತಿಗೆ **ಆತನ ಸಂದೇಶ** ಹೊಸದಿಕ್ಕು ಪ್ರಕಾಶನ, ಬೆಂಗಳೂರು	೧೯೯೯

ಕೃತಿಗಳು	ಲೇಖಕರು ಮತ್ತು ಪ್ರಕಾಶನ	ಪ್ರಕಟಣಾ ವರ್ಷ
೨೭. ಹೊಸೂರ ಜ್ಯೋತಿ :	ಬೆರಸಿ ಇಟ್ಟೇನ ಬೆಲ್ಲ ನೆನಗಡಲಿ (ಸಂ) ಕಾಲಗತಿ ಪ್ರಕಾಶನ, ರಾಯಬಾಗ	೧೯೬೯
	ಹೆಸರ ಹೇಳ್ತೀನಿ ಒಡಪಕಟ್ಟಿ (ಸಂ) ಕಾಲಗತಿ ಪ್ರಕಾಶನ, ರಾಯಬಾಗ	೧೯೭೧
	ಜನಪದ ಉಪಾಸನೆ ಕಾಲಗತಿ ಪ್ರಕಾಶನ, ರಾಯಬಾಗ	೧೯೮೧
	ಜಾನಪದ ಕುರಿತು ಕಾಲಗತಿ ಪ್ರಕಾಶನ, ರಾಯಬಾಗ	೧೯೮೬
	ಜಾತಿಗಾರರ ಜಾತಕ ಕಾಲಗತಿ ಪ್ರಕಾಶನ, ರಾಯಬಾಗ	೧೯೮೫
	ಶಿವಶರಣ ಕ್ರಾಂತಿಕಾರಿ ಮೌಲಿಕ ವಚನಗಳು ಕಾಲಗತಿ ಪ್ರಕಾಶನ, ರಾಯಬಾಗ	೨೦೦೧